ವಿಷಯಾನುಕ್ರಮಣಿಕೆ

ಆಧ್ಯಾತ್ಮ ಗ್ರಂಥಾವಳಿ

# ಪ್ರಶ್ನೋಪನ್ಯಾಸಮಂಜರಿ

## (ಪ್ರಶ್ನೋಪನಿಷತ್ತಿನ ತಾತ್ಪರ್ಯವಿವರಣೆ)

ಬರೆದವರು:
ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೧೯

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1997

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಶ್ರೀಶಂಕರಭಗವತ್ಪಾದರು ರಚಿಸಿರುವ ಪ್ರಸ್ಥಾನತ್ರಯಭಾಷ್ಯಗಳನ್ನು ಕನ್ನಡಾನುವಾದದೊಡನೆ ಪ್ರಕಟಿಸಿದ ಮೇಲೂ ತೃಪ್ತರಾಗದೆ ಉಪನಿಷದ್ಭಾಷ್ಯಗಳಲ್ಲಿರುವ ಚರ್ಚಾವಿಷಯಗಳನ್ನು ಹೊರತುಪಡಿಸಿ ಕೇವಲ ಉಪನಿಷದರ್ಥವನ್ನು ಗ್ರಹಿಸಿ ಮನನ ಮಾಡಲು ಜಿಜ್ಞಾಸುಗಳಿಗೆ ಅನುಕೂಲವಾಗುವಂತೆ 'ಮಂಜರಿ'ಗಳೆಂಬ ಹೆಸರಿನಿಂದ ಕೆಲವು ಉಪನಿಷತ್ತುಗಳ ಮೇಲೆ ವಿವರಣೆಗಳನ್ನೂ ಬರೆದಿದ್ದಾರೆ. ಇಂಥವುಗಳಲ್ಲಿ ಎರಡನೆಯ ಬಾರಿಗೆ ಪ್ರಕಟವಾಗುತ್ತಿರುವ **"ಪ್ರಶ್ನೋಪನ್ಯಾಸಮಂಜರಿ"**ಯೂ ಒಂದಾಗಿರುತ್ತದೆ.

ಮಂಜರಿಗಳ ಮಾಲೆಯಲ್ಲಿ ಈವರೆಗೆ ಈಶಾವಾಸ್ಯ, ಕೇನ, ಕಠ, ಮುಂಡಕ, ಪ್ರಶ್ನ, ಮಾಂಡೂಕ್ಯ- ಇವುಗಳು ಪ್ರಕಟವಾಗಿವೆ. ಉಳಿದ ಉಪನಿಷತ್ತುಗಳ ಮೇಲೆಯೂ 'ಮಂಜರಿ'ಗಳನ್ನು ಬರೆಯುವ ಸಂಕಲ್ಪವು ಗ್ರಂಥಕರ್ತರಿಗೆ ಇದ್ದಿತಾದರೂ ನೆರವೇರಲಿಲ್ಲ. ಆದರೆ ಗೌಡಪಾದರ ಮಾಂಡೂಕ್ಯಕಾರಿಕೆಗಳ ಮೇಲೆ ವಿಸ್ತಾರವಾದ **'ಗೌಡಪಾದ ಹೃದಯ'** ವೆಂಬ ಗ್ರಂಥವನ್ನೇ ಶ್ರೀಶ್ರೀಗಳು ರಚಿಸಿರುತ್ತಾರೆ. ಅದು ಸಹ ಪ್ರಕಟವಾಗಿದೆ.

ವಿಶೇಷವಾಗಿ ಮಂಜರಿಗಳಲ್ಲಿ ಪೂರ್ವಪಕ್ಷ- ಸಿದ್ಧಾಂತರೂಪವಾದ ಹೆಚ್ಚಿನ ವಾದ ವಿವಾದಗಳನ್ನು ಕೈಬಿಟ್ಟು ಉಪನಿಷತ್ತಿನ ತಾತ್ಪರ್ಯಗ್ರಹಣಕ್ಕೆ ಅನುಕೂಲವಾಗುವಂತೆ ವೇದಾಂತ ಪ್ರಮೇಯಗಳನ್ನು ಪ್ರಸ್ತಾಪಿಸಿ ವಿವರಿಸಲಾಗಿದೆ. ಇದರಿಂದ ಓದುಗರಿಗೆ ಸುಲಭವಾಗಿ ಆಯಾಉಪನಿಷತ್ತಿನ ತಾತ್ಪರ್ಯಾರ್ಥವನ್ನೂ ಗ್ರಹಿಸಿ ಸಮನ್ವಯ ಮಾಡಿಕೊಳ್ಳಲು ಅನುಕೂಲವಾಗಿದೆ. ನಡುನಡುವೆ ವಿಶೇಷ ಉದಾಹರಣೆ - ದೃಷ್ಟಾಂತಗಳ ಮೂಲಕವೂ ವಿಷಯಗಳನ್ನು ವಿವರಿಸಿರುವದರಿಂದ ಮುಮುಕ್ಷುಗಳಿಗೆ ಹೆಚ್ಚು ಉಪಯುಕ್ತವಾಗಿವೆ.

ಅಧ್ಯಾತ್ಮವಿದ್ಯೆಯಲ್ಲಿ ಅಭಿರುಚಿಯನ್ನುಂಟುಮಾಡಿ ಸಂಸ್ಕೃತಭಾಷೆಯು ಬಾರದವರಿಗೂ ವೇದಾಂತಜ್ಞಾನದ ಪ್ರಯೋಜನವು ಲಭಿಸಲೆಂದು ಕೈಗೊಂಡಿರುವ ಈ ಪ್ರಕಟನೆಗಳನ್ನು ಮಹಾಜನರು ಪ್ರೋತ್ಸಾಹಿಸಿ ಅಧ್ಯಾತ್ಮವಿದ್ಯಾಪ್ರಚಾರಕರಿಗೆ ನೆರವಾಗಬೇಕೆಂದು ಪ್ರಾರ್ಥಿಸಲಾಗಿದೆ.

ಹೊಳೆನರಸೀಪುರ, ಇತಿ ಸಜ್ಜನವಿಧೇಯ

ತಾ|| 1. 10. 97 **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

## ವಿಷಯಗಳ ಪರಿವಿಡಿ

~~~~~


| | | ಪುಟ |
|---|---|---|
| ೧. ಉಪನಿಷತ್ತಿಗೆ ಅವತರಣಿಕೆ | | 1 |
| ೨. ಒಂದನೆಯ ಪ್ರಶ್ನೆ | : ಜೀವರು ಏತಕ್ಕೆ ಹುಟ್ಟುವರು? | 7 |
| ೩. ಎರಡನೆಯ ಪ್ರಶ್ನೆ | : ಕರಣಗಳಲ್ಲಿ ಶ್ರೇಷ್ಠನು ಯಾರು? | 21 |
| ೪. ಮೂರನೆಯ ಪ್ರಶ್ನೆ | : ಪ್ರಾಣನ ಮೂಲ | 34 |
| ೫. ನಾಲ್ಕನೆಯ ಪ್ರಶ್ನೆ | : ಅವಸ್ಥಾತ್ರಯವಿಚಾರ | 48 |
| ೬. ಐದನೆಯ ಪ್ರಶ್ನೆ | : ಓಂಕಾರೋಪಾಸನೆಯ ಫಲ | 73 |
| ೭. ಆರನೆಯ ಪ್ರಶ್ನೆ | : ಷೋಡಶಕಲಪುರುಷನ ಜ್ಞಾನ | 82 |
~~~~~

॥ ಓಂ ॥

# ಪ್ರಶ್ನೋಪನ್ಯಾಸಮಂಜರಿ

## ೧. ಉಪನಿಷತ್ತಿಗೆ ಅವತರಣಿಕೆ

*ಓಂ॥ ಸುಕೇಶಾ ಚ ಭಾರದ್ವಾಜಃ ಶೈಬ್ಯಶ್ಚ ಸತ್ಯಕಾಮಃ ಸೌರ್ಯಾಯಣೀ ಚ ಗಾರ್ಗ್ಯಃ ಕೌಸಲ್ಯಶ್ಚಾಶ್ವಲಾಯನೋ ಭಾರ್ಗವೋ ವೈದರ್ಭಿಃ ಕಬನ್ಧೀ ಕಾತ್ಯಾಯನಸ್ತೇ ಹೈತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾ ಏಷ ಹ ವೈ ತತ್ ಸರ್ವಂ ವಕ್ಷ್ಯತೀತಿ ತೇ ಹ ಸಮಿತ್ಪಾಣಯೋ ಭಗವನ್ತಂ ಪಿಪ್ಪಲಾದಮುಪಸನ್ನಾಃ ॥೧॥*

*ತಾನ್ ಹ ಸ ಋಷಿರುವಾಚ ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ಸಂವತ್ಸ್ಯಥ ಯಥಾಕಾಮಂ ಪ್ರಶ್ನಾನ್ ಪೃಚ್ಛತ ಯದಿ ವಿಜ್ಞಾಸ್ಯಾಮಃ ಸರ್ವಂ ಹ ವೋ ವಕ್ಷ್ಯಾಮ ಇತಿ ॥೨॥*

ಇವು ಪ್ರಶ್ನೋಪನಿಷತ್ತಿನ ಪ್ರಾರಂಭವಾಕ್ಯಗಳು. ಮುಂಡಕೋಪನಿಷತ್ತಿನ ಉಪನ್ಯಾಸಗಳನ್ನು ಯಾರು ಶ್ರವಣಮಾಡಿರುವರೋ ಅವರಿಗೆ ಉಪನಿಷತ್ತೆಂದರೇ ನೆಂಬುದನ್ನು ತಿಳಿಸಬೇಕಾದದ್ದೇ ಇಲ್ಲ. ಉಪನಿಷತ್ತೆಂದರೆ ಬ್ರಹ್ಮವಿದ್ಯೆ; ಅದನ್ನು ಶ್ರದ್ಧಾಭಕ್ತಿಯಿಂದ ಗುರುಗಳ ಮೂಲಕ ಸಂಪಾದಿಸಿಕೊಂಡವರಿಗೆ ಅವಿದ್ಯಾದಿದೋಷಗಳು ಹೋಗುವವು, ನಿತ್ಯಪ್ರಾಪ್ತವಾದ ಬ್ರಹ್ಮವು ಪುನಃ ಪ್ರಾಪ್ತವಾದಂತೆ ಆಗುವದು. ಅಂಥವರು ಸರ್ವಥಾ ಕೃತಕೃತ್ಯರಾಗುವರು. ಬ್ರಹ್ಮವಿದ್ಯೆಯನ್ನು ತಿಳಿಸುವ ಈ ಉಪನಿಷತ್ತೂ ಮುಂಡಕದಂತೆ ಅಥರ್ವವೇದಕ್ಕೆ ಸೇರಿದ್ದು. ಮುಂಡಕವು ಮಂತ್ರಭಾಗವೆಂತಲೂ ಈ ಉಪನಿಷತ್ತು ಬ್ರಾಹ್ಮಣಭಾಗಕ್ಕೆ ಸೇರಿದ್ದೆಂತಲೂ ಸಂಪ್ರದಾಯವನ್ನು ಬಲ್ಲವರು ಹೇಳುತ್ತಾರೆ. ವೇದದ ಪೂರ್ಣಭಾಗವು ನಮಗೆ ದೊರಕಿಲ್ಲವಾದ್ದರಿಂದ ಇದರ ನಿಶ್ಚಯವನ್ನು ಕುರಿತು ಏನೂ ಹೇಳುವದಕ್ಕೆ ಬರುವಂತಿಲ್ಲ. ಆದರೂ ಮುಂಡಕದಲ್ಲಿ ಹೇಳಿರುವ ಅಕ್ಷರವೆಂಬ ಹೆಸರಿನ ನಿರ್ವಿಶೇಷಬ್ರಹ್ಮವನ್ನು ಕುರಿತ ವಿಚಾರವು ಇದರಲ್ಲಿ ಬಂದಿರುವದಂತೂ ನಿಶ್ಚಿತ.

ಈ ಉಪನಿಷತ್ತಿನಲ್ಲಿ ಸುಕೇಶನೇ ಮೊದಲಾದ ಆರು ಜನ ಋಷಿಗಳು ಪಿಪ್ಪಲಾದನೆಂಬಾತನ ಬಳಿಗೆ ಹೋಗಿ ಪ್ರಶ್ನೆಮಾಡಿ ತತ್ತ್ವವನ್ನು ತಿಳಿದುಕೊಂಡರೆಂದು

ತಿಳಿಸಿರುವದರಿಂದ ಇದಕ್ಕೆ "**ಪ್ರಶ್ನೋಪನಿಷತ್ತು**" ಎಂಬ ಹೆಸರು ಬಂದಿರುತ್ತದೆ. ಇಂಥ ಮಹನೀಯರಾದ ಋಷಿಗಳುಕೂಡ ಗುರುಕುಲದಲ್ಲಿ ಬ್ರಹ್ಮಚರ್ಯವನ್ನು ಮಾಡಿ ಪಡೆದುಕೊಂಡ ಬ್ರಹ್ಮವಿದ್ಯೆಯಿದು- ಎಂದು ಹೊಗಳುವದಕ್ಕೆ ಈ ಕಥೆ ಇಲ್ಲಿ ಬಂದಿರುತ್ತದೆ. ಉಪನಿಷದ್ವಿದ್ಯೆಯನ್ನು, ಸರಿಯಾದ ಸಾಧನವನ್ನು ಮಾಡಿರುವವರೇ ಗ್ರಹಿಸಬಲ್ಲರು; ಇದನ್ನು ಸರ್ವಜ್ಞಕಲ್ಪನಾದ ಆಚಾರ್ಯನು ಹೇಳಿಕೊಟ್ಟರೇ ಶಿಷ್ಯರಿಗೆ ಇದು ಅನುಭವಕ್ಕೆ ಬರುವದು ಎಂಬುದನ್ನು ಈ ಕಥೆಯು ಸೂಚಿಸುತ್ತದೆ.

ಭರದ್ವಾಜನ ಮಗನಾದ **ಸುಕೇಶನು**, ಶಿಬಿಯ ಮಗನಾದ **ಸತ್ಯಕಾಮನು**, ಸೂರ್ಯನ ಮೊಮ್ಮಗನಾದ **ಗಾರ್ಗ್ಯನು**, ಅಶ್ವಲನ ಮಗನಾದ **ಕೌಸಲ್ಯನು**, ಭೃಗುವಿನ ಗೋತ್ರದಲ್ಲಿ ಹುಟ್ಟಿದ ವಿದರ್ಭದೇಶದ **ಭಾರ್ಗವನು**, ಕತ್ಯನ ಮಗನಾದ **ಕಬಂಧಿಯು**- ಈ ಆರು ಜನರು ಬ್ರಹ್ಮಪರರೂ ಬ್ರಹ್ಮನಿಷ್ಠರೂ ಆಗಿದ್ದು ಪರಬ್ರಹ್ಮವನ್ನು ಹುಡುಕಿಕೊಂಡು ಹೊರಟರು. 'ಈತನು ನಮಗೆ ಅದನ್ನು ಹೇಳಿಕೊಟ್ಟಾನು'- ಎಂದು ಸಮಿತ್ಪಾಣಿಗಳಾಗಿ **ಪಿಪ್ಪಲಾದ** ಭಗವಂತನನ್ನು ಗೌರವದಿಂದ ಸಮೀಪಿಸಿದರು.

ಮೊದಲನೆಯ ವಾಕ್ಯದ ಅಭಿಪ್ರಾಯವನ್ನು ಇಲ್ಲಿ ಕೊಟ್ಟಿರುತ್ತೇವೆ. ಇದರಿಂದ ತಿಳಿಯಬೇಕಾದದ್ದೇನೆಂದರೆ, ಸುಕೇಶನೇ ಮುಂತಾದವರು ಸಾಮಾನ್ಯರಲ್ಲ, ಋಷಿಗಳು. ಅವರು ಅಪರಬ್ರಹ್ಮವನ್ನು ಉಪಾಸನೆಮಾಡಿದವರು; ಆ ಬ್ರಹ್ಮದಲ್ಲಿಯೇ ನಿಷ್ಠರಾಗಿದ್ದವರು. ಶ್ರುತಿಯಲ್ಲಿ ಪರಬ್ರಹ್ಮವೆಂದೂ ಅಪರಬ್ರಹ್ಮವೆಂದೂ ಎರಡು ಬಗೆಯ ಬ್ರಹ್ಮವನ್ನು ತಿಳಿಸಿರುತ್ತದೆ. ಬ್ರಹ್ಮವೆಂದರೆ ಪರಮಾತ್ಮತತ್ತ್ವವು. ಬ್ರಹ್ಮವೇ ಈ ಜಗತ್ತಿಗೆಲ್ಲ ಸಾರವು; ಅದರಿಂದಲೇ ಈ ಜಗತ್ತು ಉಂಟಾಗಿ ಅದರಲ್ಲಿಯೇ ಇದ್ದುಕೊಂಡಿದ್ದು ಕೊನೆಗೆ ಅದರಲ್ಲಿಯೇ ಮೈಗರೆಯುತ್ತದೆ. ಸರ್ವಜ್ಞವಾಗಿಯೂ ಸರ್ವಶಕ್ತಿಯುಕ್ತವಾಗಿಯೂ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾಗಿರುವದರಿಂದ ಅದನ್ನು 'ಬ್ರಹ್ಮ' ಎಂದು ಕರೆಯುತ್ತಾರೆ. ಆ ಬ್ರಹ್ಮವು ಯಾವ ಉಪಾಧಿಯ ಹಂಗೂ ಇಲ್ಲದೆ, ಯಾವದೊಂದು ವಿಶೇಷವೂ ತನ್ನಲ್ಲಿಲ್ಲದೆ, ತಾನೊಂದೇ ಇರುವ ಅದ್ವಿತೀಯತತ್ತ್ವವಾಗಿರುತ್ತದೆ ಎಂಬ ದೃಷ್ಟಿಯಿಂದ ಅದನ್ನು ಪರಬ್ರಹ್ಮವೆನ್ನುತ್ತಾರೆ. ಆದರೆ ಆ ತತ್ತ್ವವನ್ನು ಎಲ್ಲರೂ ಇದ್ದದ್ದು ಇದ್ದಂತೆ ಅನುಭವಕ್ಕೆ ತಂದುಕೊಳ್ಳುವದಕ್ಕೆ ಅರ್ಹರಾಗಿರುವದಿಲ್ಲ : ಏಕೆಂದರೆ ಸಾಮಾನ್ಯ ಜೀವರ ಮನಸ್ಸು ಸ್ಥೂಲವಿಷಯಗಳನ್ನು ಮಾತ್ರ ಅರಿಯುವದಕ್ಕೆ ಶಕ್ತವಾಗಿರುತ್ತದೆ. ಅತ್ಯಂತ ಬಹಿರ್ಮುಖರಾಗಿರುವವರು ಈ ಬ್ರಹ್ಮಸ್ವರೂಪವನ್ನು ನೇರಾಗಿ ಅರಿತುಕೊಳ್ಳಲಾರರೆಂಬುದು ಹಾಗಿರಲಿ, ಅದರ ವಿಷಯದ ಚಿಂತೆಯನ್ನು ಕೂಡ ಮನಸ್ಸಿಗೆ ತಂದುಕೊಳ್ಳಲಾರದಷ್ಟು ಸ್ಥೂಲಮತಿಗಳಾಗಿರುವರು. ಇಂಥವರು ಮುಮುಕ್ಷುಗಳಾಗಿದ್ದರೆ ಅವರಿಗೆ

ಕರ್ಮಯೋಗವನ್ನು ಶಾಸ್ತ್ರವು ಉಪದೇಶಿಸುತ್ತದೆ. ಆದರೆ ಯಾರು ಅವರಿಗಿಂತ ಸ್ವಲ್ಪ ಅಂತರ್ಮುಖಿಗಳಾಗಿರುವರೋ, ಅಂಥ ಮಧ್ಯಮಾಧಿಕಾರಿಗಳಿಗೆ ಶಾಸ್ತ್ರದಲ್ಲಿ ಅದೇ ಬ್ರಹ್ಮವನ್ನು ಅದರ ಕಾರ್ಯವಾದ ನಾಮರೂಪಗಳ ಸಂಬಂಧದಿಂದುಂಟಾಗುವ ಆಕಾರದಿಂದ ಅಥವಾ ಇನ್ನೂ ಸೂಕ್ಷ್ಮಬುದ್ಧಿಗಳಾದವರಿಗೆ ಅನೇಕ ಗುಣಗಳಿಂದೊಡಗೂಡಿ ಉಪಾಸನೆಮಾಡುವಂತೆ ಉಪದೇಶಿಸುತ್ತಾರೆ. ಮುಂಡಕೋಪನಿಷತ್ತಿನಲ್ಲಿ ಹೇಳಿರುವ ವಿರಾಡ್ರೂಪವೂ ಪ್ರಾಣನೆಂಬ ಹೆಸರಿನ ಹಿರಣ್ಯಗರ್ಭನ ರೂಪವೂ ಇಂಥವರಿಗೆ ಧ್ಯಾನಕ್ಕೆ ತಕ್ಕದ್ದಾಗಿರುತ್ತದೆ. ಪ್ರಕೃತದಲ್ಲಿ ಹೇಳಿರುವ ಆರು ಜನ ಋಷಿಗಳೂ ಅಪರಬ್ರಹ್ಮವನ್ನು ಎಂದರೆ ಸಗುಣಬ್ರಹ್ಮವನ್ನು ಬಹುಕಾಲ ಉಪಾಸನೆ ಮಾಡಿದವರಾಗಿದ್ದರು. ಅವರು ಆ ಬ್ರಹ್ಮದಲ್ಲಿಯೇ ನೆಲೆನಿಂತ ಅಂತಃಕರಣವುಳ್ಳವರಾಗಿದ್ದರು. ಹೀಗೆ ಉಪಾಸನೆಯಿಂದ ಪರಮೇಶ್ವರನನ್ನು ಕಂಡುಕೊಂಡು ಆತನಲ್ಲಿಯೇ ಮನಸ್ಸನ್ನು ಸಿಲ್ಲಿಸಿಕೊಂಡಿರುವ ಬ್ರಹ್ಮನಿಷ್ಠರು ಪರಬ್ರಹ್ಮದ ಜ್ಞಾನಕ್ಕೆ- ಪರಮಾತ್ಮತತ್ತ್ವವನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುವದಕ್ಕೆ- ಉತ್ತಮಾಧಿಕಾರಿಗಳೆನಿಸುತ್ತಾರೆ. ಏಕೆಂದರೆ ಅವರಿಗೆ ಬ್ರಹ್ಮಲೋಕದವರೆಗಿನ ಫಲವೂ ಕೂಡ ಕಾಲಾನುಕಾಲಕ್ಕೆ ಕ್ಷಯವಾಗುತ್ತದೆ- ಎಂಬ ಅರಿವು ಆಗಿರುತ್ತದೆ. ಎಂದೆಂದಿಗೂ ಕ್ಷಯವಾಗದ ಪರಮಾರ್ಥತತ್ತ್ವವು ಯಾವದು? ಅದನ್ನು ಹೇಗೆ ಅರಿತುಕೊಂಡು ಉಪಾಸನೆ ಮಾಡಬೇಕು? ಅದರಿಂದ ಬ್ರಹ್ಮಲೋಕಕ್ಕಿಂತಲೂ ಹೆಚ್ಚಿನ ಪರಮಪುರುಷಾರ್ಥವು ಹೇಗೆ ದೊರೆಯುತ್ತದೆ- ಎಂಬುದನ್ನು ತಿಳಿಯುವ ತಹತಹವು ಉಂಟಾಗಿರುತ್ತದೆ.

ಇಲ್ಲಿ ಹೇಳಿರುವ ಆರು ಜನ ಬ್ರಹ್ಮನಿಷ್ಠರೂ ಪಿಪ್ಪಲಾದನೆಂಬ ಸರ್ವಜ್ಞ ಕಲ್ಪನಾದ ಋಷಿಯ ಬಳಿಗೆ ಶಿಷ್ಯರಾಗಿ ಬಂದರು. "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥" ಎಂಬ ಗೀತೋಕ್ತಿಯಂತೆ ಪರಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವದಕ್ಕೆ ಬರಿಯ ಜ್ಞಾನಿಗಳು ಸಾಲದು, ತತ್ತ್ವದರ್ಶಿಗಳಾದ ಜ್ಞಾನಿಗಳಾಗಬೇಕು. ಪಿಪ್ಪಲಾದನು ಇಂಥ ಅನುಭವಿ ಎಂಬುದನ್ನು 'ಭಗವಂತ' ನೆಂಬ ವಿಶೇಷಣದಿಂದ ಇಲ್ಲಿ ತಿಳಿಸಿರುತ್ತದೆ. ಅವರೆಲ್ಲರೂ ಶಿಷ್ಯಗುಣಯುಕ್ತರಾಗಿದ್ದರೆಂಬುದನ್ನು ಸೂಚಿಸುವದಕ್ಕೆ 'ಬ್ರಹ್ಮಪರರು', 'ಬ್ರಹ್ಮನಿಷ್ಠರು'- ಎಂಬ ವಿಶೇಷಣಗಳನ್ನು ಹಾಕಿರುತ್ತದೆ. ಗುರುವಿನ ಬಳಿಗೆ ಕಾಣಿಕೆಯೊಡನೆ ಹೋಗಿ ನಮ್ರತೆಯಿಂದ ಆತನನ್ನು ಬಳಿಸಾರಬೇಕು- ಎಂಬುದನ್ನು 'ಸಮಿತ್ಪಾಣಿಗಳಾಗಿ, ಉಪಸನ್ನರಾದರು' ಎಂಬ ವಿಶೇಷಣದಿಂದ ತಿಳಿಸಿರುತ್ತದೆ.

ಆಚಾರ್ಯನು ಶಾಸ್ತ್ರಾರ್ಥವನ್ನು ಅರಿತುಕೊಂಡಿರುವದಲ್ಲದೆ ಅನುಭವಕ್ಕೂ ತಂದುಕೊಂಡಿರಬೇಕು ; ಅಂಥವನು ಹೇಳಿದರೆ ಅದು ಕಾರ್ಯಕಾರಿಯಾಗುವದು ಎಂಬುದನ್ನು 'ಈತನೇ ಅದೆಲ್ಲವನ್ನೂ ಹೇಳಿಯಾನು' ಎಂಬ ನಂಬಿಕೆಯ ಮಾತಿನಿಂದ ತಿಳಿಸಿರುತ್ತದೆ. ಯಾವಾತನು ಜ್ಞಾನದಿಂದ ಬ್ರಹ್ಮವರ್ಚಸ್ಸನ್ನು ಪಡೆದುಕೊಂಡಿರುವನೋ, ಬ್ರಹ್ಮಜ್ಞಾನಿಗಳ ಲಕ್ಷಣವನ್ನು ಸೂಚಿಸುವ ಚಿಹ್ನೆಗಳಿಂದ ಕೂಡಿರುವನೋ, ಅಂಥ ಮಹನೀಯನನ್ನು ನೋಡಿದಮಾತ್ರದಿಂದ ಈತನು ಸಾಮಾನ್ಯನಲ್ಲ, ಈತನು ಉಪದೇಶಮಾಡಿದರೆ ನಮಗೆ ತತ್ತ್ವಜ್ಞಾನವಾಗುವದು ನಿಶ್ಚಯ- ಎಂಬ ಭರವಸೆಯುಂಟಾಗುವದು. ಅಂಥ ಭರವಸೆಯಿಂದ ಆತನನ್ನು ನಮಸ್ಕರಿಸಿ ವಿನಯದಿಂದ ಪ್ರಶ್ನೆಮಾಡಿ ತತ್ತ್ವವನ್ನು ತಿಳಿದುಕೊಳ್ಳಬೇಕು- ಎಂಬುದು ಇಲ್ಲಿ ಸೂಚಿತವಾಗಿರುತ್ತದೆ.

ಈಗ ಎರಡನೆಯ ಮಂತ್ರದ ಅಭಿಪ್ರಾಯವನ್ನು ಬಿಡಿಸಿ ನೋಡೋಣ- ಹೀಗೆ ವಿನಯದಿಂದ ತನ್ನ ಬಳಿಗೆ ಬಂದ ಆ ಋಷಿಗಳನ್ನು ಕಂಡು ಆ ಪಿಪ್ಪಲಾದನೆಂಬ ಬ್ರಹ್ಮರ್ಷಿಯು ಇಂತೆಂದನು: "ನೀವು ಇನ್ನೂ ಒಮ್ಮೆ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ- ಇವುಗಳಿಂದೊಡಗೂಡಿ ಒಂದು ವರ್ಷ ಇಲ್ಲಿದ್ದುಕೊಂಡಿರಿ. ಆ ಬಳಿಕ ನಿಮ್ಮ ಇಚ್ಛೆಯಂತೆ ಪ್ರಶ್ನೆಗಳನ್ನು ಕೇಳಿರಿ ; ನಮಗೆ ತಿಳಿದರೆ ಎಲ್ಲವನ್ನೂ ನಿಮಗೆ ಹೇಳುವೆವು."

ನಮಸ್ಕಾರ, ಸೇವೆ, ಪ್ರಶ್ನೆ- ಇಷ್ಟರಿಂದಲೇ ಶಿಷ್ಯರ ಉಪದೇಶಕ್ಕೆ ಅರ್ಹರೆಂದೇನೂ ಗೊತ್ತಾಗುವದಿಲ್ಲ. ಪ್ರಣಿಪಾತಾದಿಗಳು ಶಿಷ್ಯರು ಬಾಹ್ಯಲಕ್ಷಣಗಳು: ಆದರೆ ಮುಖ್ಯವಾಗಿ ಅವರಿಗೆ ಅಂತರಂಗಸಾಧನಗಳ ಸಿದ್ಧಿಯಾಗಿರಬೇಕು. ಈ ಶಿಷ್ಯರು ತಾವು ಉಪಾಸನೆ ಮಾಡಿರುತ್ತೇವೆಂದು ಹೇಳಿಕೊಂಡಮೇಲೂ ಪಿಪ್ಪಲಾದನು 'ಮತ್ತೊಂದು ವರ್ಷ ಬ್ರಹ್ಮಚರ್ಯೆಯಲ್ಲಿರಿ' ಎಂದು ಹೇಳಿರುವದನ್ನು ನಾವು ಲಕ್ಷ್ಯದಲ್ಲಿಡಬೇಕು. '**ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇನ್ದ್ರಿಯಃ**" ಎಂಬ ಗೀತೋಕ್ತಿಯಂತೆ ಗುರುಶಾಸ್ತ್ರವಚನದಂತೆ ನಡೆದುಕೊಂಡರೆ ನನಗೆ ಅವಶ್ಯವಾಗಿ ಜ್ಞಾನವುಂಟಾಗುವದು, ಅದು ಫಲಕಾರಿಯಾಗುವದು ನಿಶ್ಚಿತ- ಎಂಬ ಭರವಸೆಯಿರಬೇಕು. ಇದು ಶ್ರದ್ಧೆ. 'ಈ ಬ್ರಹ್ಮಜ್ಞಾನವೇ ನನಗೆ ಬೇಕು, ಇದಕ್ಕಿಂತ ಹೆಚ್ಚಿನ ಪುರುಷಾರ್ಥಸಾಧನವು ಮತ್ತೊಂದಿಲ್ಲ' ಎಂಬ ಭಾವನೆಯು ಗಟ್ಟಿಯಾಗಿರಬೇಕು, ಇದಕ್ಕೆ 'ತಾತ್ಪರ್ಯ'ವೆಂದು ಹೆಸರು. ಈ ಲೋಕದಲ್ಲಿನ ವಿಷಯಗಳನ್ನು ಭೋಗಿಸುವದಕ್ಕಾಗಲಿ ಪರಲೋಕದ ಸುಖಕ್ಕೆ ಹವಣಿಸುವದಾಗಲಿ ಇರಬಾರದು ; ವಿಷಯಗಳನ್ನು ಕುರಿತ ಮಾತು, ಅವುಗಳ ಸ್ಮರಣೆ, ವಿಷಯಗಳ ಸೇವನೆಗೆ ಉನ್ಮುಖನಾಗುವದು- ಮುಂತಾದವು ಯಾವವೂ ಇಲ್ಲದಂತೆ ಬಹಿರಿಂದ್ರಿಯಗಳನ್ನೂ ಅಂತರಿಂದ್ರಿಯವನ್ನೂ ಬಿಗಿಹಿಡಿದುಕೊಳ್ಳುವ ಅಭ್ಯಾಸವಿರಬೇಕು. ಪರಮೇಶ್ವರನ

ಅನುಗ್ರಹದಿಂದ ನಮಗೆ ಈ ಗುರುಗಳ ಉಪದೇಶದ ಫಲವು ಲಭಿಸಲಿ! ಇವರೇ ನನ್ನ ಭಾಗಕ್ಕೆ ಆ ಪರಮೇಶ್ವರನು- ಎಂಬ ದೃಢವಾದ ಭಾವನೆಯಿಂದ ಸರ್ವಕರಣಗಳನ್ನೂ ಸದ್ಗುರುಸೇವೆಗೆ ಅರ್ಪಿಸಿಬಿಡಬೇಕು. ಅದೇ ಬ್ರಹ್ಮಚರ್ಯವು. ಪ್ರಕೃತದಲ್ಲಿ ಆರು ಜನರೂ ಮೊದಲೇ ತಪಸ್ಸನ್ನು ಮಾಡಿಯೇ ಇದ್ದರು ; ಆದರೆ ಈಗ ಬ್ರಹ್ಮವಿದ್ಯಾಪ್ರಾಪ್ತಿಗೆ ಬರಿಯ ಶರೀರದ ದಂಡನೆಯ ರೂಪವಾದ ತಪಸ್ಸೇ ಅಲ್ಲದೆ ಮನಸ್ಸು, ಇಂದ್ರಿಯ- ಇವುಗಳ ಐಕಾಗ್ರ್ಯರೂಪವಾದ ತಪಸ್ಸೂ ಬೇಕಾಗಿತ್ತು ; ಹೀಗೆಯೇ ಬ್ರಹ್ಮಚರ್ಯವೂ ಅವರಲ್ಲಿ ಮೊದಲೇ ಇದ್ದರೂ ಮತ್ತೆ ಈ ಪರವಿದ್ಯೆಯ ಪ್ರಾಪ್ತಿಗಾಗಿ ಅದು ಅವಶ್ಯವಾಗಿತ್ತು. ಅವರಿಗೆ ಪರಮೇಶ್ವರನಲ್ಲಿ ಶ್ರದ್ಧೆಯಿದ್ದರೂ ಜ್ಞಾನೋಪದೇಷ್ಟೃವಾದ ಶಾಸ್ತ್ರದಲ್ಲಿಯೂ ಸದ್ಗುರುವಿನಲ್ಲಿಯೂ ನಿರತಿಶಯವಾದ ಶ್ರದ್ಧೆಯು ಬೇಕಾಗಿತ್ತು. ಆದ್ದರಿಂದ ಪಿಪ್ಪಲಾದನು ಒಂದು ವರ್ಷ ಪರೀಕ್ಷೆಮಾಡಿ ತತ್ತ್ವವನ್ನು ಹೇಳಿಕೊಡುತ್ತೇನೆಂದಿರುತ್ತಾನೆ.

ಈ ಕಥಾಭಾಗದಿಂದ ನಮಗೆ ಗೊತ್ತಾಗುವದೇನೆಂದರೆ ವೇದಾಂತವಿಹಿತವಾದ ಜ್ಞಾನವೆಂಬುದು ಲೌಕಿಕಶಾಸ್ತ್ರಗಳಂತೆ ಕೇವಲ ಬುದ್ಧಿಮಾತ್ರಗಮ್ಯವಲ್ಲ ; ಅದು ಬರಿಯ ತರ್ಕದಿಂದ ಊಹಿಸಿ ಅಥವ ಚರ್ಚಿಸಿ ನಿರ್ಣಯಿಸುವ ವಿಷಯವನ್ನು ಕುರಿತದ್ದು ಅಲ್ಲ. ಪರಬ್ರಹ್ಮವೆಂಬುದು ಇಡಿಯ ಪ್ರಪಂಚಕ್ಕೇ ಆತ್ಮವಾಗಿರುವ ಪರತತ್ತ್ವವು ; ಅದು ಎಲ್ಲಕ್ಕಿಂತಲೂ ಒಳಗಿರುವ, ಸೂಕ್ಷ್ಮವಸ್ತುಗಳೆಲ್ಲಕ್ಕಿಂತಲೂ ಸೂಕ್ಷ್ಮವಾಗಿರುವ ತತ್ತ್ವವು. ಅದನ್ನು ನೋಡುವದಕ್ಕೆ ಬರಿಯ ಹೊರಗಣ್ಣು ಸಾಲದು. ಇಂದ್ರಿಯಗಳಿಗೆ ಸೂಕ್ಷ್ಮವಸ್ತುಗಳನ್ನು ಪ್ರತ್ಯಕ್ಷಗೊಳಿಸುವ ಯಂತ್ರೋಪಕರಣಗಳನ್ನು ಈಗಿನ ವಿಜ್ಞಾನಶಾಸ್ತ್ರಜ್ಞರು ಕಂಡುಹಿಡಿದಿರುತ್ತಾರೆ ; ಆದರೆ ಅವು ತಿಳಿಸುವ ವಸ್ತುಗಳು ಎಷ್ಟೇ ಸೂಕ್ಷ್ಮವಾಗಿರಲಿ ಈ ಪರಬ್ರಹ್ಮಕ್ಕೆ ಹೋಲಿಸಿದರೆ ಸ್ಥೂಲವೇ ಆಗಿರುತ್ತವೆ. ಸೂಕ್ಷ್ಮ ವಸ್ತುವೆಂದರೆ ಇಂದ್ರಿಯಗಳಿಗೆ ಹೇಗೂ ಗೋಚರವಾಗದ ವಸ್ತುವೆಂದಿಷ್ಟೇ ಅಲ್ಲ; ಮನಸ್ಸಿಗೆ ಕೂಡ ನಿಲುಕದಂಥ ವಸ್ತುವದು. ಮನಸ್ಸನ್ನು ಹಿಂದಕ್ಕೆ ತಿರುಗಿಸಿಕೊಂಡು ನೋಡಿದರೆ ಅನುಭವಕ್ಕೆ ಬರುವ, ಇಂದ್ರಿಯಮನಸ್ಸುಗಳಿಗೂ ಆತ್ಮನಾಗಿರುವ- ಎಂದರೆ ಅವುಗಳ ಒಳತಿರುಳಾಗಿರುವ- ಪರಮಾತ್ಮವಸ್ತು. ಈ ವಿದ್ಯೆಯು ಹೊರಗಿನ ಸೂಕ್ಷ್ಮೇಂದ್ರಿಯಗಳಿಗಾಗಲಿ, ಸೂಕ್ಷ್ಮವಾದ ಬುದ್ಧಿಗಾಗಲಿ ಹೇಗೆ ನಿಲುಕೀತು? ಅದು ಮಾತಿನಿಂದ ಹೇಳುವದಕ್ಕೆ ಬರುವದಲ್ಲ, ಮನಸ್ಸಿನಿಂದ ತಿಳಿಯುವದಕ್ಕೆ ಆಗುವದೂ ಅಲ್ಲ. ಮನಸ್ಸೇ ಆ ಬ್ರಹ್ಮದಲ್ಲಿ ಒಂದಾಗಿ ಅದನ್ನು ಅರಿತುಕೊಳ್ಳಬೇಕಾಗಿರುತ್ತದೆ. ಇಂಥದ್ದಕ್ಕೆ ಒಂದಾನೊಂದು ಬಗೆಯ ಸರ್ವವಿಲಕ್ಷಣವಾದ ತಪಸ್ಸು, ಶ್ರದ್ಧೆ, ಬ್ರಹ್ಮಚರ್ಯ- ಇವೆಲ್ಲ ಬೇಕೆಂದು ಹೇಳಿರುವದರಲ್ಲಿ ಆಶ್ಚರ್ಯವೇನಿದೆ?

ಯಾವ ಆಚಾರ್ಯನು ಇಂಥ ಪರಮಸೂಕ್ಷ್ಮವಾದ ಬ್ರಹ್ಮವಸ್ತುವನ್ನು ಅನುಭವದಿಂದ ಕಂಡುಕೊಂಡಿರುವನೋ, ಯಾವನು ಅದನ್ನು ಶಿಷ್ಯರ ಯೋಗ್ಯತೆಗೆ ತಕ್ಕ ಪುಟಕ್ಕೆ ಇಳಿಸಿ ತಿಳಿಯಹೇಳಬಲ್ಲನೋ, ಯಾವನು ಆ ಶಿಷ್ಯರನ್ನು ತನ್ನಂತೆ ಅನುಭವದ ಅಂತಸ್ತಿಗೇರಿಸಿ ಕೃತಕೃತ್ಯರನ್ನಾಗಿ ಮಾಡಬಲ್ಲನೋ ಅವನೇ ಆಚಾರ್ಯನು. ಅವನಿಗೆ ಪ್ರಾಣಿಗಳ ಉತ್ಪತ್ತಿವಿನಾಶಗಳ ಮರ್ಮವು ತಿಳಿದಿರಬೇಕು. ಅವರು ಎಲ್ಲಿಂದ ಬಂದಿರುವರು, ಎಲ್ಲಿಗೆ ಹೋಗುವರು?- ಎಂಬುದನ್ನು ತಿಳಿದಿರಬೇಕು. ವಿದ್ಯೆ ಎಂದರೆ ಯಾವದು ; ಅವಿದ್ಯೆ ಎಂದರೆ ಯಾವದು ? ಎಂಬುದನ್ನು ತಿಳಿದಿರಬೇಕು.- ಎಂದು ಪುರಾಣಸ್ಮೃತಿವಾಕ್ಯವಿರುವದು. ಪಿಪ್ಪಲಾದನು ಅಂಥ ಆಚಾರ್ಯನು: ಆದ್ದರಿಂದಲೇ ಅವನನ್ನು ಇಲ್ಲಿ ಭಗವಂತನು ಎಂಬ ವಿಶೇಷಣದಿಂದ ಕರೆದಿರುತ್ತದೆ.

ಪರಬ್ರಹ್ಮತತ್ತ್ವವನ್ನು ಯಾರಿಗೆಂದರೆ ಅವರಿಗೆ ಹೇಳುವದು ಸಲ್ಲದು. ಏಕೆಂದರೆ ಯಾರಿಗೆ ಯೋಗ್ಯತೆಯಿಲ್ಲವೋ ಅವರಿಗೆ ಅದನ್ನು ಹೇಳಿದರೂ ತಿಳಿಯುವದಿಲ್ಲ. ಕರ್ಮ, ಉಪಾಸನೆ- ಮುಂತಾದ ಸಾಧನಗಳಲ್ಲಿ ಅವರಿಗೆ ಆದರವು ತಪ್ಪಿ ಹೋಗುವ ಅಪಾಯವೂ ಇದೆ. ಆದ್ದರಿಂದ ಎಲ್ಲಾ ಬಗೆಯಿಂದಲೂ ವಿದ್ಯೆಗೆ ತಕ್ಕ ಶಿಷ್ಯಗುಣಗಳನ್ನು ಸಂಪಾದಿಸಿಕೊಂಡು ವಿನಯದಿಂದ ಉಪದೇಶಕ್ಕೆಂದು ಬಂದು ಪ್ರಣಿಪಾತ, ಪರಿಪ್ರಶ್ನೆ, ಸೇವೆ- ಮುಂತಾದ ಪ್ರಕಾರಗಳಿಂದ ಕೇಳುವವರಿಗೇ ಈ ವಿದ್ಯೆಯನ್ನು ಹೇಳಬೇಕು.

ಯಾವನು ಬಾಹ್ಯವಿಷಯಗಳ ಕಾಮಗಳಿಂದ ವಿಮುಖನಾಗಿರುವನೋ, ಯಾವನು ಶಾಸ್ತ್ರೋಕ್ತಸಾಧನಗಳಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಂಡು ಏಕಾಗ್ರತೆಯನ್ನು ಸಂಪಾದಿಸಿಕೊಂಡಿರುವನೋ, ಯಾವನು ತತ್ತ್ವಜ್ಞಾನವೇ ತನಗೆ ಬೇಕೆಂದು ತಹತಹಪಡುತ್ತಿರುವನೋ ಅವನೇ ನಿಜವಾದ ಶಿಷ್ಯನು. ಸುಕೇಶನೇ ಮೊದಲಾದವರು ಇಂಥ ಶಿಷ್ಯರು. ಅವರಿಗೆ ಅಪರಬ್ರಹ್ಮದ ಉಪಾಸನೆಯಿಂದ ಚಿತ್ತವು ಅಂತರ್ಮುಖವಾಗಿತ್ತು. ಪರಬ್ರಹ್ಮದ ನಿಜವನ್ನು ಅರಿತುಕೊಳ್ಳಬೇಕೆಂಬ ಹಂಬಲವೂ ಇತ್ತು, ಅದರಿಂದಲೇ ಅವರು ಪಿಪ್ಪಲಾದನ ಆಜ್ಞೆಯಂತೆ ಮತ್ತೂ ಒಂದು ವರ್ಷದವರೆಗೆ ಬ್ರಹ್ಮಚರ್ಯದಿಂದಲೂ ತಪಸ್ಸಿನಿಂದಲೂ ಗುರುಕುಲವಾಸವನ್ನು ಮಾಡುವದಕ್ಕೆ ಸಿದ್ಧರಾದರು. ಅದರಿಂದ ಅವರಿಗೆ ಪರಮಸೂಕ್ಷ್ಮವಾದ ಬ್ರಹ್ಮತತ್ತ್ವವನ್ನು ಕುರಿತು ಪ್ರಶ್ನೆಯನ್ನು ಮಾಡುವದಕ್ಕೂ ಗುರುವಿನ ಉಪದೇಶದ ಮರ್ಮವನ್ನು ತಿಳಿದುಕೊಳ್ಳುವದಕ್ಕೂ ಸಾಮರ್ಥ್ಯವು ಬಂದಿತು.

ಪಿಪ್ಪಲಾದನಂಥ ಪರಬ್ರಹ್ಮನಿಷ್ಠನು ಹೇಳಿರುವ, ಸುಕೇಶನೇ ಮೊದಲಾದ ಸದ್ಗುಣಸಂಪನ್ನರಾದ ಶಿಷ್ಯರಿಗೆ ದೊರಕಿರುವ, ಈ ಪ್ರಶ್ನೋಪನಿಷತ್ತನ್ನು ಶ್ರದ್ಧಾ ಭಕ್ತಿಪುರಸ್ಸರವಾಗಿ ಕೇಳುವ ಮತ್ತು ಅದಕ್ಕೆ ತಕ್ಕ ಸಾಧನಗಳನ್ನು ಅಳವಡಿಸಿಕೊಳ್ಳುವದಕ್ಕೆ ಯತ್ನಿಸುವ ಶಿಷ್ಯರು ಉಪನಿಷದರ್ಥಶ್ರವಣದಿಂದ ಕೃತಕೃತ್ಯರಾಗುವರು.

## ೨. ಒಂದನೆಯ ಪ್ರಶ್ನೆ : ಜೀವರು ಏತಕ್ಕೆ ಹುಟ್ಟುವರು?

### ಸೂರ್ಯಚಂದ್ರರು

***ಅಥ ಕಬನ್ಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ । ಭಗವನ್, ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯನ್ತ ಇತಿ ॥೩॥***

***ತಸ್ಮೈ ಸ ಹೋವಾಚ ಪ್ರಜಾಕಾಮೋ ವೈ ಪ್ರಜಾಪತಿಃ । ಸ ತಪೋಽತಪ್ಯತ ಸ ತಪಸ್ತಪ್ತ್ವಾ ಸ ಮಿಥುನಮುತ್ಪಾದಯತೇ । ರಯಿಂ ಚ ಪ್ರಾಣಂ ಚೇತ್ಯೇತೌ ಮೇ ಬಹುಧಾ ಪ್ರಜಾಃ ಕರಿಷ್ಯತ ಇತಿ ॥೪॥***

ಆರು ಜನ ಋಷಿಗಳೂ ಪಿಪ್ಪಲಾದನೆಂಬ ಗುರುವಿನಲ್ಲಿ ಒಂದು ಸಂವತ್ಸರದವರೆಗೆ ಬ್ರಹ್ಮಚರ್ಯದಲ್ಲಿದ್ದುಕೊಂಡಿದ್ದರು. ಆ ಬಳಿಕ ಅವರೊಳಗೆ ಕಬಂಧಿ ಕಾತ್ಯಾಯನನು ಗುರುವಿನ ಅಪ್ಪಣೆಯನ್ನು ಪಡೆದುಕೊಂಡು ಈ ಪ್ರಶ್ನೆಯನ್ನು ಕೇಳಿದನು. ನಿಯಮದಲ್ಲಿದ್ದುಕೊಂಡು ಮಾಡುವ ಸದ್ಗುರುವಿನ ಸೇವೆಯಿಂದ ಚಿತ್ತವು ಶುದ್ಧವಾಗಿ ಸೂಕ್ಷ್ಮವಿಷಯವಾದ ಅಧ್ಯಾತ್ಮತತ್ತ್ವಗಳನ್ನು ತಿಳಿಯುವದಕ್ಕೆ ಅರ್ಹವಾಗುತ್ತದೆ - ಎಂಬುದನ್ನು ಇದು ಸೂಚಿಸುತ್ತದೆ. ಕಾತ್ಯಾಯನಾದಿಗಳು ಮೊದಲೇ ತಪಸ್ಸು, ಬ್ರಹ್ಮಚರ್ಯ- ಮುಂತಾದವುಗಳನ್ನು ಅನುಷ್ಠಾನ ಮಾಡಿದವರಾದರೂ ಮತ್ತೂ ಗುರುವಿನ ಅಪ್ಪಣೆಯಂತೆ ತಪಸ್ಸು ಮಾಡಿದರು. ಏಕೆಂದರೆ ಪರತತ್ತ್ವವನ್ನು ತಿಳಿಯುವದಕ್ಕೆ ತಪಆದಿಗಳಲ್ಲಿ ನಿಷ್ಠರಾದವರೇ ಸಮರ್ಥರು ; ಅವರು ಮಾಡುವ ಪ್ರಶ್ನೆಯೇ ಬೆಲೆಯುಳ್ಳದ್ದು.

ಕಾತ್ಯಾಯನನು ಮಾಡಿರುವ ಪ್ರಶ್ನೆಯ ಅಭಿಪ್ರಾಯವನ್ನು ಈಗ ಬಿಡಿಸಿ ತಿಳಿಯುವದಕ್ಕೆ ಪ್ರಯತ್ನಿಸೋಣ. ಲೌಕಿಕ ಕರ್ಮ, ಲೌಕಿಕಜ್ಞಾನ- ಇವುಗಳು ಮನುಷ್ಯನಿಗೆ ಸ್ವಾಭಾವಿಕವಾಗಿರುತ್ತವೆ. ಸ್ವಾಭಾವಿಕಜ್ಞಾನವು ಶುಭಾಶುಭದೃಷ್ಟಿಯನ್ನು ಮುಂದುಮಾಡಿಕೊಂಡು ಪದಾರ್ಥಗಳನ್ನು ನೋಡುವದರಿಂದ ಇದು ನನಗೆ ಬೇಕು, ಇದು ನನಗೆ ಬೇಡ- ಎಂಬಿಷ್ಟೇ ತಿಳಿವಳಿಕೆಯಿಂದ ಪ್ರವರ್ತಿಸುತ್ತಿರುತ್ತದೆ. ಆದರಿಂದ ಆ ಜ್ಞಾನಕರ್ಮಗಳಿಗೆ ತಕ್ಕಂತೆ ಮತ್ತೆ ಮತ್ತೆ ಬೇರೆಬೇರೆಯ ಜನ್ಮಗಳಲ್ಲಿ ಅವರು ಹುಟ್ಟಬೇಕಾಗುತ್ತದೆ. ಹೀಗೆ ಹುಟ್ಟಿ ಕರ್ಮಫಲವನ್ನನುಭವಿಸಿ ಮತ್ತೆ ಉಳಿದಿರುವ ಕರ್ಮದ ಫಲವನ್ನನುಭವಿಸುವದಕ್ಕೆಂದು ಮತ್ತೊಂದು ಶರೀರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಶಾಸ್ತ್ರದ ಸಹಾಯವಿಲ್ಲದೆ ಸ್ವೇಚ್ಛೆಯಿಂದ ಮಾಡುವ ಈ ಬಗೆಯ ಕರ್ಮಕ್ಕೆ ಬಗೆಬಗೆಯ ಸ್ಥಾವರಜಂಗಮಪ್ರಾಣಿಗಳ ಕ್ಷುದ್ರ ಜನ್ಮಗಳು ಮತ್ತೆ

ಮತ್ತೆ ಬರುತ್ತಿರುವವು. ಜಂಗಮಪ್ರಾಣಿಗಳಲ್ಲಿಯೂ ಪಶುಪಕ್ಷಿಮೃಗಾದಿಗಳ, ಮತ್ತು ಕ್ರಿಮಿಕೀಟಾದಿಗಳ ಜನ್ಮಗಳು- ಮತ್ತೆ ಮತ್ತೆ ಹುಟ್ಟಿ ಸಾಯುವ ಅಸದ್ಯೋನಿಗಳು- ಬರುತ್ತಲೇ ಇರುವವು. ಆದರೆ ವರ್ಣಾಶ್ರಮಧರ್ಮಗಳ ಅವಕಾಶವುಳ್ಳ ಉತ್ತಮ ಮನುಷ್ಯ ಜನ್ಮದಲ್ಲಿ ಹುಟ್ಟಿ ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಮಾಡುವವರ ಗತಿ ಏನು ?- ಎಂಬುದೇ ಶಾಸ್ತ್ರವಿಚಾರಕ್ಕೆ ವಿಷಯವಾಗಿರುತ್ತದೆ. ಅಂಥ ಶಾಸ್ತ್ರೀಯಕರ್ಮವನ್ನು ಮಾಡುವ ಜೀವರುಗಳೂ ಏತಕ್ಕೆ ಮತ್ತೆಮತ್ತೆ ಹುಟ್ಟುತ್ತಿರುವರು ? ಇದೇ ಕಬಂಧಿಕಾತ್ಯಾಯನನು ಕೇಳಿರುವ ಪ್ರಶ್ನೆ.

ತಟ್ಟನೆ ನೋಡಿದರೆ ಈ ಪ್ರಶ್ನೆಯು ಜನರು ಮತ್ತೆ ಏತಕ್ಕೆ ಹುಟ್ಟಿರುವರು?- ಎಂದಿಷ್ಟೇ ಅಭಿಪ್ರಾಯದಿಂದ ಕೇಳಿದ್ದೆಂದು ಕಂಡರೂ ಎಲ್ಲರೂ ಹೀಗೆ ಹುಟ್ಟುವರೊ, ಅಥವಾ ಕೆಲವರು ಮಾತ್ರವೇ ಹುಟ್ಟುವರೊ? ಅನೇಕರು ಹೀಗೆ ಮತ್ತೆ ಹುಟ್ಟುವದಕ್ಕೇನು ಕಾರಣ? ಕೆಲವರು ಮಾತ್ರ ಮತ್ತೆ ಸಂಸಾರಕ್ಕೆ ಹಿಂತಿರುಗದೆ ಇರುವದಕ್ಕಾದರೂ ಕಾರಣವೇನು?- ಎಂಬವರೆಗೆ ಈ ಪ್ರಶ್ನೆಯ ಕ್ಷೇತ್ರವಿರುತ್ತದೆ- ಎಂಬುದು ಪಿಪ್ಪಲಾದನು ಹೇಳಿರುವ ಉತ್ತರದಿಂದ ನಮಗೆ ಮುಂದೆ ಗೊತ್ತಾಗುವದು.

ಇಲ್ಲಿ ಒಂದು ಶಂಕೆ : **ಸುಕೇಶಭಾರದ್ವಾಜನೇ** ಮೊದಲಾದವರು ಅಪರ ಬ್ರಹ್ಮನಿಷ್ಠರಾಗಿದ್ದಾರೆಂದು ಕಥಾಪ್ರಾರಂಭದಲ್ಲಿಯೇ ಹೇಳಿದೆ. ಹೀಗಿರುವಲ್ಲಿ ಕಬಂಧಿಕಾತ್ಯಾಯನನು, ಅಪರಬ್ರಹ್ಮದ ಉಪಾಸನೆಯನ್ನೇ ಮಾಡುತ್ತಿದ್ದವನು, ಈ ಪ್ರಶ್ನೆಯನ್ನು ಕೇಳಿದನೆಂದು ವರ್ಣಿಸಿರುವದು ಹೇಗೆ ಸರಿ ?

ಇದಕ್ಕೆ ಉತ್ತರವೇನೆಂದರೆ, ಉಪಾಸನೆಯನ್ನು ಮಾಡಿರುವ ಅಧಿಕಾರಿಗಳಲ್ಲಿ ಎರಡು ಬಗೆಯವರಿರುತ್ತಾರೆ. ಯಾರು ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಆಯಾ ಫಲಕ್ಕಾಗಿ ಮಾಡುವರೋ ಅವರಿಗೆ ಆಯಾ ಫಲವು ದೊರಕುತ್ತದೆಯಾದರೂ ನಿಷ್ಕಾಮರಾಗಿ ಕರ್ಮವನ್ನು ಮಾಡುವವರಿಗೆ ಚಿತ್ತಶುದ್ಧಿಯಿಂದ ಚಿತ್ತವು ಅಂತರ್ಮುಖವಾಗಿ ತತ್ತ್ವಜ್ಞಾನವಿಚಾರಕ್ಕೆ ಅರ್ಹರಾಗುತ್ತಾರೆಂಬುದು ಶಾಸ್ತ್ರದ ನಿಯಮವು. ಈ ಎರಡನೆಯ ವರ್ಗದ ಅಧಿಕಾರಿಗಳು ಉಪಾಸನೆಯನ್ನು ನಿಷ್ಕಾಮರಾಗಿಯೇ ಮಾಡುತ್ತಿರುತ್ತಾರೆ; ಅವರಿಗೆ ಲೋಕಾಂತರದಲ್ಲಿ ಆಗುವ ಉಪಾಸನಾ ಫಲದಿಂದ ಮಾತ್ರವೇ ತೃಪ್ತಿಯಾಗುವದಿಲ್ಲ. ಅವರ ಇಂದ್ರಿಯಗಳೂ ಮನಸ್ಸೂ ಐಕಾಗ್ರ್ಯದಿಂದ ತತ್ತ್ವನಿರ್ಧಾರಣೆಯನ್ನು ಮಾಡಿಕೊಳ್ಳುವ ಯೋಗ್ಯತೆಯನ್ನು ಪಡೆದುಕೊಂಡಿರುತ್ತವೆ. ಅಂಥವರಿಗೇ- ಹೊಳೆಯುವ ಕನ್ನಡಿಯಲ್ಲಿ ಮುಖದ ಪ್ರತಿಬಿಂಬವು ಸಂಪೂರ್ಣವಾಗಿ ಯಥಾರ್ಥರೀತಿಯಿಂದ ಕಾಣುವಂತೆ, ಪರಮಾರ್ಥತತ್ತ್ವವು ಚಿತ್ತದರ್ಪಣದಲ್ಲಿ

ಹೊಳೆಯುತ್ತದೆ. ಆದ್ದರಿಂದ ಇಲ್ಲಿರುವ ಆರು ಜನ ಶಿಷ್ಯರೂ ಬರಿಯ ಅಪರಬ್ರಹ್ಮವಿದ್ಯೆಯಿಂದಲೇ ತೃಪ್ತರಾಗದೆ ನಿತ್ಯವಾದ ಫಲವನ್ನು ಕೊಡುವ ಸಾಧನವು ಯಾವುದು ?- ಎಂಬುದನ್ನು ಅರಿತುಕೊಳ್ಳುವದಕ್ಕೆ ಪಿಪ್ಪಲಾದನ ಬಳಿಗೆ ಬಂದಿರುತ್ತಾರೆ. ಆದ್ದರಿಂದಲೇ ಅವರು ತತ್ತ್ವವಿಷಯದ ಪರಿಪ್ರಶ್ನೆಯನ್ನು ಮಾಡುತ್ತಿರುತ್ತಾರೆ.

ಈಗ ಪಿಪ್ಪಲಾದನ ಉತ್ತರದ ವಿವರವನ್ನು ಪರಿಶೀಲಿಸುವಕಡೆಗೆ ಚಿತ್ತವನ್ನು ಹೊರಳಿಸೋಣ. ಅವನು ಜೀವರುಗಳ ಉತ್ಪತ್ತಿಕ್ರಮವನ್ನು ವಿವರಿಸುವದಕ್ಕೆ ಹೊರಟಿರುತ್ತಾನೆ. ಇದಕ್ಕೆ ಮೊದಲು ಪ್ರಜೆಗಳನ್ನು ಉತ್ಪಾದನೆ ಮಾಡುವ ಸಾಮಗ್ರಿಯನ್ನು ವರ್ಣಿಸುತ್ತಿದಾನೆ. ಪ್ರತಿಯೊಂದು ಕಲ್ಪದಲ್ಲಿಯೂ ಪರಮೇಶ್ವರನು ಮೊದಲು ಹಿರಣ್ಯಗರ್ಭ ಬ್ರಹ್ಮನನ್ನು ಸೃಷ್ಟಿಮಾಡುತ್ತಾನೆ ; ಅವನಿಗೆ ವೇದಗಳನ್ನು ಅಂತಃಕರಣದಲ್ಲಿ ಸ್ಫುರಿಸುವಂತೆ ಮಾಡುತ್ತಾನೆ. ಅಲ್ಲಿಂದ ಮುಂದೆ ಆ ಬ್ರಹ್ಮನು ಪ್ರಜೆಗಳನ್ನು- ಎಂದರೆ ಮುಂದೆ ಹುಟ್ಟಲಿರುವ ಜೀವರನ್ನು- ಸೃಷ್ಟಿಸುತ್ತಾನೆ. ಇದು ವೇದದ ಬ್ರಾಹ್ಮಣ ಭಾಗದಲ್ಲಿ ತಿಳಿಸಿರುವ ಸೃಷ್ಟಿಕ್ರಮವು. ಯಾವನು ಸರ್ವಾತಿಶಯವಾದ ಜ್ಞಾನಕರ್ಮಗಳನ್ನು ಮಾಡಿರುತ್ತಾನೋ, ಅವನೇ ಕಲ್ಪಾದಿಯಲ್ಲಿ ಹಿರಣ್ಯಗರ್ಭನಾಗಿ ತೋರಿಕೊಳ್ಳುತ್ತಾನೆ. ಮುಂದೆ ಅವನ ಇಚ್ಛೆಯಂತೆಯೇ ಪ್ರಜೆಗಳು- ಎಂದರೆ ಸ್ಥಾವರಜಂಗಮ ಪ್ರಾಣಿಗಳು- ಸೃಷ್ಟಿಯಾಗುವದರಿಂದ ಅವನನ್ನು ಪ್ರಜಾಪತಿ ಎಂಬ ಹೆಸರಿನಿಂದ ವೇದದಲ್ಲಿ ಕರೆದಿರುತ್ತದೆ.

ಹಿರಣ್ಯಗರ್ಭನು ಕಲ್ಪಾದಿಯಲ್ಲಿ ಹೊರತೋರಿಕೊಂಡ ಬಳಿಕ ಅವನಿಗೆ ಪೂರ್ವಜನ್ಮದಲ್ಲಿ ಅಭ್ಯಸ್ತವಾಗಿದ್ದ ಶ್ರುತ್ಯರ್ಥವಿಷಯಕವಾದ ಜ್ಞಾನದ ಆಲೋಚನೆಯು ಮನಸ್ಸಿನಲ್ಲಿ ಮಿಂಚುತ್ತದೆ. ಇದಕ್ಕೆ 'ತಪಸ್ಸು' ಎಂದು ಹೆಸರು. ಈ ತಪಸ್ಸಿನ ಬಲದಿಂದ ಅವನು ರಯಿ, ಪ್ರಾಣ- ಎಂಬ ದ್ವಂದ್ವವನ್ನು ಪ್ರಜೆಗಳ ಉತ್ಪತ್ತಿಗೆ ಮೂಲವಾಗಿ ಸೃಷ್ಟಿಸುತ್ತಾನೆ ; ಇವುಗಳಿಂದಲೇ ಅಂಡೋತ್ಪತ್ತಿ ಕ್ರಮದಿಂದ ಜನಿಸಿದ ಈ ಇಬ್ಬರ ಮೂಲಕವೇ- ಮುಂದೆ ಸೃಷ್ಟಿಯಾಗುತ್ತದೆ. ಈ ಜಗತ್ತು ಮೊಟ್ಟಮೊದಲು ಸ್ವಲ್ಪವೂ ಚಲಿಸದೆ ಅನಭಿವ್ಯಕ್ತವಾಗಿದ್ದದ್ದು ಸ್ವಲ್ಪ ಮಟ್ಟಿಗೆ ನಾಮರೂಪವ್ಯಾಕರಣವಾಗಲು- ಬೀಜವು ಮೊಳಕೆಯಾಗುವಂತೆ- ಅದೂ ಕ್ರಮಕ್ರಮವಾಗಿ ಒಂದು ಅಂಡವಾಗಿ ಸಂವತ್ಸರದಷ್ಟು ಕಾಲದವರೆಗೆ ಹಾಗೆಯೇ ಇದ್ದು ಕೊನೆಗೆ ಒಡೆದುಕೊಳ್ಳುತ್ತದೆ. ಆ ಅಂಡದಿಂದ ಪ್ರಾಣ, ರಯಿ- ಎಂಬ ಒಂದು ಜೋಡಿಯು ಹುಟ್ಟಿಕೊಳ್ಳುತ್ತದೆ. ಆ ಬಳಿಕ ಈ ಜೋಡಿಯಿಂದ ಮುಂದೆ ಹೇಳುವ ಕ್ರಮದಿಂದ ಪ್ರಜೆಗಳ ಉತ್ಪತ್ತಿಯಾಗುತ್ತದೆ.

ಈಗ ಪಿಪ್ಪಲಾದನು ಈ ಪ್ರಾಣರಯಿಗಳ ವಿವರವನ್ನು ಕೊಟ್ಟಿರುವ ಬಗೆಯನ್ನು ನೋಡೋಣ :

*ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚನ್ದ್ರಮಾ ರಯಿರ್ವಾ ಏತತ್ ಸರ್ವಂ ಯನ್ಮೂರ್ತಂ ಚಾಮೂರ್ತಂ ಚ ತಸ್ಮಾನ್ಮೂರ್ತಿರೇವ ರಯಿಃ ॥೫॥*

*ಅಥಾದಿತ್ಯ ಉದಯನ್ ಯತ್ ಪ್ರಾಚೀಂ ದಿಶಂ ಪ್ರವಿಶತಿ ತೇನ ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು ಸಂನಿಧತ್ತೇ । ಯದ್ದಕ್ಷಿಣಾಂ ಯತ್ ಪ್ರತೀಚೀಂ ಯದುದೀಚೀಂ ಯದಧೋ ಯದೂರ್ಧ್ವಂ ಯದನ್ತರಾ ದಿಶೋ ಯತ್ ಸರ್ವಂ ಪ್ರಕಾಶಯತಿ ತೇನ ಸರ್ವಾನ್ ಪ್ರಾಣಾನ್ ರಶ್ಮಿಷು ಸಂನಿಧತ್ತೇ ॥೬॥*

*ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಗ್ನಿರುದಯತೇ। ತದೇತದೃಚಾಭ್ಯುಕ್ತಮ್ ॥೭॥*

*ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪನ್ತಮ್ । ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥೮॥*

ಪ್ರಜಾಪತಿಯು ಸೃಷ್ಟಿಸಿದ ಪ್ರಾಣ, ರಯಿ- ಇವರು ಯಾರು? ಎಂದರೆ ಆದಿತ್ಯನೇ ಪ್ರಾಣನು, ಚಂದ್ರನೇ ರಯಿಯು. ಇಲ್ಲಿ ಪ್ರಾಣ ಎಂಬುದು ಅತ್ತೃವಿನ ಹೆಸರು ; ರಯಿ ಎಂಬುದು ಅನ್ನದ ಹೆಸರು. ಈ ಆದಿತ್ಯನೇ ಅಧಿಯಜ್ಞವಾಗಿ ಅಗ್ನಿಯಾಗಿರುತ್ತಾನೆ ; ಚಂದ್ರನೇ ಸೋಮವಾಗಿರುತ್ತಾನೆ. ಅಲ್ಲಿಯೂ ಅಗ್ನಿಯು ಅತ್ತೃ, ಸೋಮವು ಅನ್ನ- ಎಂಬುದು ಸ್ಪಷ್ಟವಾಗಿದೆ. ಇಲ್ಲಿ ಪ್ರಜಾಪತಿಯು ಪ್ರಾಣನನ್ನೂ ರಯಿಯನ್ನೂ - ಎಂದರೆ ಆದಿತ್ಯನನ್ನೂ ಚಂದ್ರನನ್ನೂ, ಅಥವಾ ಅಗ್ನಿಯನ್ನೂ ಸೋಮನನ್ನೂ- ಸೃಷ್ಟಿಮಾಡಿದನು ಎಂದಿರುವದರಿಂದ ತಂದೆಯು ಮಕ್ಕಳನ್ನು ಉಂಟುಮಾಡುವಂತೆ ಉಂಟುಮಾಡಿದನು ಎಂದು ತಿಳಿಯಬಾರದು. ಆದಿತ್ಯ, ಚಂದ್ರ- ಈ ಎರಡೂ ಪ್ರಜಾಪತಿಯೇ, ಅಗ್ನಿಯೂ ಸೋಮನೂ ಎರಡೂ ಸೇರಿ ಪ್ರಜಾಪತಿಯೇ; ಪ್ರಜಾಪತಿಯೇ ಆ ಜೋಡಿಗಳ ರೂಪದಿಂದ ಕಾಣುತ್ತಿರುತ್ತಾನೆ.

ಹಾಗಾದರೆ ಇವನು ಪ್ರಾಣನು ಅಥವಾ ಅಗ್ನಿಯು ; ಇವನು ಚಂದ್ರನು ಅಥವಾ ಸೋಮವು ಎಂದು ಬೇರ್ಪಡಿಸಿ ಹೇಳಿರುವದೇಕೆ? -ಎಂದರೆ ಗುಣಪ್ರಧಾನ ಭಾವದ ದೃಷ್ಟಿಯಿಂದ. ಯಾವದು ಅತ್ತೃವಾಗಿ ಪ್ರಧಾನವಾಗಿರುವದೋ ಅದನ್ನು ಪ್ರಾಣನೆನ್ನುತ್ತೇವೆ. ಯಾವದು ಅನ್ನವಾಗಿ ಗುಣವಾಗಿರುವದೋ ಅದನ್ನು ರಯಿ ಎನ್ನುತೇವೆ. ಆದ್ದರಿಂದ ಎಲ್ಲವೂ ರಯಿಯೇ, ಎಲ್ಲವೂ ಪ್ರಾಣವೇ- ಎಂದು

ಭಾವಿಸುವದರಲ್ಲಿ ದೋಷವಿಲ್ಲ. ಬಾಹ್ಯಪ್ರಪಂಚವು ಮೂರ್ತ, ಅಮೂರ್ತ- ಎಂದು ಎರಡು ಭಾಗವಾಗಿರುತ್ತದೆ. ಪೃಥಿವಿ, ಅಪ್ಪು, ತೇಜಸ್ಸು- ಇವು ಮೂರ್ತ; ವಾಯು, ಆಕಾಶ- ಇವು ಅಮೂರ್ತ; ಇಲ್ಲಿ ಅಮೂರ್ತಕ್ಕೆ ಮೂರ್ತವು ವಿಷಯವಾಗಿರುವದರಿಂದ ಅಮೂರ್ತವು ಪ್ರಾಣವಾಯಿತು, ಮೂರ್ತವು ರಯಿಯಾಯಿತು. ಹೀಗೆ ಅತ್ತೃ, ಅನ್ನ - ಎಂದು ಗುಣಪ್ರಧಾನಭಾವದಿಂದ ವಿಂಗಡಿಸಬಹುದಾದರೂ ಇದೆಲ್ಲವನ್ನೂ ರಯಿಯೆಂದಾದರೂ ಪ್ರಾಣವೆಂದಾದರೂ ಒಟ್ಟುಗೂಡಿಸಿಯೂ ಭಾವಿಸಬಹುದು. ಯಾವದಕ್ಕೆ ಪ್ರಧಾನಭಾವವನ್ನು ಕೊಡುವೆವೋ ಅದು ಆ ದೃಷ್ಟಿಯಿಂದ ಪ್ರಾಣನೇ, ಯಾವದಕ್ಕೆ ಗುಣಭಾವವನ್ನು ಕೊಡುವೆವೋ ಅದು ಆ ದೃಷ್ಟಿಯಿಂದ ರಯಿಯೇ.

ಈಗ ಎಲ್ಲವೂ ಪ್ರಾಣನೇ ಎಂಬುದು ಹೇಗೆಂಬುದನ್ನು ಪರೀಕ್ಷಿಸಿ ನೋಡೋಣ. ಸೂರ್ಯನು ಪ್ರಾಣರೂಪನಷ್ಟೆ ? ಅವನು ಉದಯಿಸುವಾಗ, ಎಂದರೆ ಜೀವರ ಕಣ್ಣುಗಳಿಗೆ ಗೋಚರವಾಗುವಾಗ, ಪೂರ್ವದಿಕ್ಕನ್ನೆಲ್ಲ ತನ್ನ ಕಿರಣಗಳಿಂದ ವ್ಯಾಪಿಸಿಕೊಂಡು ಆ ದಿಕ್ಕಿನಲ್ಲಿರುವ ಪ್ರಾಣಗಳನ್ನೆಲ್ಲ ತನ್ನೊಳಗೆ ಅಡಕ ಮಾಡಿಕೊಳ್ಳುತ್ತಾನೆ ; ಇದರಂತೆ ದಕ್ಷಿಣದಿಕ್ಕುಗಳನ್ನು ವ್ಯಾಪಿಸಿಕೊಂಡು ಆ ದಿಕ್ಕಿನ ಪ್ರಾಣಗಳನ್ನೆಲ್ಲ ತನ್ನಲ್ಲಿ ಅಡಕಮಾಡಿಕೊಳ್ಳುತ್ತಾನೆ; ಪಶ್ಚಿಮದಿಕ್ಕಿನ ಪ್ರಾಣಗಳನ್ನು ಹೀಗೆಯೇ ತನ್ನಲ್ಲಿಯೇ ಅಡಕಮಾಡಿಕೊಳ್ಳುತ್ತಾನೆ. ಕೆಳಗಿನ ದಿಕ್ಕಿನಲ್ಲಿಯೂ ಮೇಲಿನ ದಿಕ್ಕಿನಲ್ಲಿಯೂ ಹೀಗೆಯೇ ಅಲ್ಲಲ್ಲಿರುವ ಎಲ್ಲ ಪ್ರಾಣಗಳನ್ನೂ ತನ್ನಲ್ಲಿ ಅಡಕ ಮಾಡಿಕೊಳ್ಳುತ್ತಾನೆ. ಹೆಚ್ಚು ಹೇಳಿದ್ದರಿಂದೇನು? ಅವನು ಯಾವಯಾವ ಕಡೆಯಲ್ಲಿ ವ್ಯಾಪಿಸಿಕೊಳ್ಳುತ್ತಾನೊ, ಆಯಾ ದಿಕ್ಕಿನಲ್ಲಿ ಇರುವ ಪ್ರಾಣಗಳನ್ನೆಲ್ಲ ಅಡಕಮಾಡಿಕೊಳ್ಳುತ್ತಾನೆ. ಹೀಗ ಪ್ರಾಣನೇ, ಆದಿತ್ಯನೂ ಅಗ್ನಿಯೂ ಅತ್ತೃವೂ ಆಗಿರುತ್ತಾನೆ. ಸರ್ವವೂ ಪ್ರಾಣನೇ; ಏಕೆಂದರೆ ಆದಿತ್ಯನ ರೂಪದಿಂದ ಕಿರಣಗಳನ್ನು ಎಲ್ಲಕಡೆಯಲ್ಲಿಯೂ ಹಬ್ಬಿಸಿಕೊಂಡು ಎಲ್ಲೆಲ್ಲಿಯೂ ಇರುವ ಪ್ರಾಣಗಳನ್ನು ತನ್ನೊಳಗೆ ಅಡಕಮಾಡಿಕೊಂಡಿರುತ್ತಾನೆ. ಆದ್ದರಿಂದ ಇವನು ವೈಶ್ವಾನರನು, ಎಂದರೆ ಸರ್ವಜೀವರುಗಳ ರೂಪದಿಂದ ಇರುವವನು; ವಿಶ್ವರೂಪನು, ಎಲ್ಲಾ ರೂಪಗಳಿಂದಲೂ ಕಾಣುವವನು ಅವನೇ. ಈತನೇ ಅಗ್ನಿಯಾಗಿ ಎಲ್ಲವನ್ನೂ ತಿನ್ನುತ್ತಿರುವವನು. ಇವನು ಹೀಗೆ ಎಲ್ಲಾ ದಿಕ್ಕುಗಳನ್ನೂ ತನ್ನೊಳಗೆ ಅಡಕ ಮಾಡಿಕೊಳ್ಳುತ್ತಾ ಪ್ರತಿದಿನವೂ ಸೂರ್ಯರೂಪದಿಂದ ಉದಯಿಸುತ್ತಿರುವನು.

ಇದುವರೆಗೆ ಕೊಟ್ಟಿರುವದು ಆರನೆಯ ಏಳನೆಯ ವಾಕ್ಯಗಳ ಅಕ್ಷರಾನುಸಾರಿಯಾದ ಸರಳಾನುವಾದವು. ಇದರ ಅಭಿಪ್ರಾಯವೇನೆಂದರೆ, ಪ್ರಜಾಪತಿಯು ಪ್ರಜೆಗಳನ್ನು ಉಂಟುಮಾಡುವೆನೆಂದು ಸಂಕಲ್ಪಿಸಿಕೊಂಡು ಪ್ರಾಣ, ರಯಿ - ಆದಿತ್ಯ, ಚಂದ್ರ- ಎಂಬ ಎರಡು ಶಕ್ತಿಗಳ ಜೋಡಿಯನ್ನು ಸೃಷ್ಟಿಮಾಡಿದನು. ಇವುಗಳಲ್ಲಿ ಭೋಗ್ಯರಾಶಿಯೆಲ್ಲವೂ ರಯಿ, ಅಥವಾ ಚಂದ್ರ ; ಅದೇ ಈ ಲೋಕದಲ್ಲಿ ಸೋಮರೂಪದಿಂದ ಕಾಣಿಸಿಕೊಂಡು ಅಗ್ನಿಗೆ ಆಹಾರವಾಗಿರುತ್ತದೆ. ಒಂದು ದೃಷ್ಟಿಯಿಂದ ನೋಡಿದರೆ ಈ ಲೋಕದಲ್ಲಿ ಏನೇನು ಕಾಣಿಸುತ್ತಿರುವದೋ ಅದೆಲ್ಲವೂ ಭೋಗ್ಯವಾದ ಈ ರಯಿಯೇ, ಚಂದ್ರನೇ, ಅಥವಾ ಸೋಮವೇ- ಎಂದು ಹಿಂದಿನ ವಾಕ್ಯದಲ್ಲಿ ಹೇಳಿತ್ತು. ಈಗ ಈ ಎರಡು ವಾಕ್ಯಗಳಿಂದ ಇದೆಲ್ಲವೂ ಆದಿತ್ಯನೇ, ಪ್ರಾಣವೇ, ಅಥವಾ ಅತ್ತೃವಾದ ಅಗ್ನಿಯೇ ಎಂದು ವರ್ಣಿಸಲಾಗಿದೆ. ಪ್ರಾಣನೇ ಸೂರ್ಯನು, ಆ ಸೂರ್ಯನೇ ಅಗ್ನಿಯು. ನಮಗೆ ಕಾಣುತ್ತಿರುವದೆಲ್ಲವೂ ಈ ಪ್ರಾಣನೇ, ಸೂರ್ಯನೇ, ಅಥವಾ ಅಗ್ನಿಯೇ - ಎಂಬುದನ್ನು ಮನದಟ್ಟು ಮಾಡಿಕೊಡುವದಕ್ಕೆ ಈ ವಾಕ್ಯಗಳು ಬಂದಿವೆ. ರಯಿಶಕ್ತಿಯು ಜಡವಾದ ಭೋಗ್ಯರಾಶಿಯ ಮೂಲವಾಗಿರುವಂತೆ ಪ್ರಾಣಶಕ್ತಿಯು ಕ್ರಿಯಾಪ್ರಧಾನವಾದ ಭೋಕ್ತೃರಾಶಿಗೆಲ್ಲ ಮೂಲವಾಗಿರುತ್ತದೆ; ಈ ಪ್ರಾಣನೇ ಸೂರ್ಯನ ರೂಪದಿಂದ ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿರುತ್ತಾನೆ. ಸೂರ್ಯನ ಕಿರಣಗಳ ವ್ಯಾಪ್ತಿಗೆ ಏನೇನು ಸಿಕ್ಕಿಕೊಂಡಿರುವದೋ ಅದೆಲ್ಲವೂ ಪ್ರಾಣಶಕ್ತಿಯಿಂದ ವ್ಯಾಪಿಸಿಕೊಂಡಿರುವದು. ಎಲ್ಲೆಲ್ಲಿಯೂ ತೋರುವ ಪ್ರಾಣಗಳು ಈ ಸೂರ್ಯನಿಂದಲೇ ಪ್ರಾಣಗಳೆನಿಸಿಕೊಂಡಿವೆ ಎಂಬುದು ಮೊದಲನೆಯ ವಾಕ್ಯದ ಅರ್ಥ.

ಭೂಮಿಯಲ್ಲಿರುವ ಜಡವಸ್ತುಗಳಿಂದ ಪ್ರಾಣವು ಹೇಗೆ ಉಂಟಾಯಿತು? ಪ್ರಾಣವೆಂಬುದು ಸಕಲೇತರವಸ್ತುಗಳ ಸ್ವಭಾವಕ್ಕಿಂತಲೂ ವಿಲಕ್ಷಣವಾದ ಶಕ್ತಿಯಾಗಿದೆ. ಇದು ಎಲ್ಲಿಂದ ಈ ನಮ್ಮ ಭೂಮಂಡಲಕ್ಕೆ ಯಾವಾಗ, ಹೇಗೆ ಬಂದಿತು? - ಎಂಬುದೊಂದು ಭೌತಿಕವಿಜ್ಞಾನಶಾಸ್ತ್ರಜ್ಞರಿಗೆ ಬಿಡಿಸಲಾಗದ ಕಗ್ಗಂಟಾಗಿರುತ್ತದೆ. ಜಡವಸ್ತುಗಳಲ್ಲಿಯೇ ಕಾಲಕ್ರಮದಲ್ಲಿ ಉಂಟಾಗುವ ಒಂದಾನೊಂದು ಶಕ್ತಿಯೇ ಪ್ರಾಣವಿರಬಹುದೆ, ಅಥವಾ ಇದೊಂದು ಸ್ವತಂತ್ರವಾದ ಶಕ್ತಿಯೆ? - ಎಂಬುದನ್ನು ನಿರ್ಣಯಿಸಲಾರದೆ ವಿಜ್ಞಾನಶಾಸ್ತ್ರಜ್ಞರು ಇದು ಯಾವದೋ ಒಂದು ಗ್ರಹದಿಂದ ನಮ್ಮ ಭೂಮಂಡಲಕ್ಕೆ ಬಹುಪುರಾತನ ಕಾಲಕ್ಕೆ ಬಂದಿರಬೇಕು ಎಂದು ಒಂದು ಕಲ್ಪನೆಯನ್ನು ಮಾಡಿಕೊಂಡಿರುತ್ತಾರೆ. ಪ್ರಾಣವು ಈ ಭೂಮಂಡಲದಲ್ಲಿಯೇ

ಉಂಟಾಗಿರಲಿ, ಮತ್ತೊಂದು ಗ್ರಹದಿಂದಲಾದರೂ ಬಂದಿರಲಿ, ಇದು ಹೇಗೆ ಉಂಟಾಯಿತು? -ಎಂಬ ಪ್ರಶ್ನೆಯು ಇನ್ನೂ ಹಾಗೆಯೇ ಉತ್ತರವನ್ನು ಕಾಣದೆ ಇದ್ದುಕೊಂಡಿದೆ. ಪ್ರಕೃತ ಉಪನಿಷದ್ವಾಕ್ಯದಲ್ಲಿ ಸೂರ್ಯನಲ್ಲಿ ಪ್ರಾಣಶಕ್ತಿಯ ಉಗ್ರಾಣವಿದೆಯೆಂದೂ ಅದೇ ತನ್ನ ಸುತ್ತಲೂ ಇರುವ ಜಡವಸ್ತುಗಳಿಗೆ ಪ್ರಾಣವನ್ನು ಕೊಡುವದೆಂದೂ ಹೇಳಿದೆ. ಮನುಷ್ಯನಲ್ಲಿಯೂ ಜಂಗಮಪ್ರಾಣಿಗಳಲ್ಲಿಯೂ ಸ್ಥಾವರಪ್ರಾಣಿಗಳಲ್ಲಿಯೂ ಕಾಣಬರುವ ಪ್ರಾಣತತ್ತ್ವದಿಂದ ಆ ಪ್ರಾಣಿಗಳಲ್ಲಿ ಬೆಳೆಯುವದು, ಮಾರ್ಪಡುವದು, ವಿಕಾಸವಾಗುವದು, ಚಲಿಸುವದು - ಮುಂತಾದ ಕ್ರಿಯೆಗಳು ಕಾಣಿಸಿಕೊಳ್ಳುತ್ತಿರುವವು. ಸೂರ್ಯಕಿರಣಗಳ ಅನುಗ್ರಹವಿಲ್ಲದಿದ್ದರೆ ಯಾವದೊಂದು ವಸ್ತುವಿನಲ್ಲಿಯೂ ಪ್ರಾಣದ ಅಭಿವ್ಯಕ್ತಿಯಾಗಲಾರದು- ಎಂದು ಇಲ್ಲಿ ತಿಳಿಸಿರುತ್ತದೆ. ಪ್ರಾಣಿಗಳ ಪ್ರಾಣಶಕ್ತಿಯೆಲ್ಲ ಸೂರ್ಯನ ಅಧೀನವಾಗಿಯೇ ಪ್ರಾಣಿಗಳಲ್ಲಿ ಇದ್ದುಕೊಂಡಿರುತ್ತದೆಯೇ? ಪ್ರಾಣಿಗಳಲ್ಲಿ ಕಾಣಬರುವ ಚಟುವಟಿಕೆಗೆ ಮೂಲವು ಸೂರ್ಯನೆ? ಪ್ರಾಣಿಗಳು ವಿಶ್ರಾಂತಿಯನ್ನು ತೆಗೆದುಕೊಳ್ಳುವಾಗ, ಉದಾಹರಣೆಗೆ ಅವರು ತನಿನಿದ್ರೆಯನ್ನು ಅನುಭವಿಸುತ್ತಿರುವಾಗ, ಅವರ ಚಟುವಟಿಕೆಯ ಮೂಲವು ಎಲ್ಲಿ ಹೇಗೆ ಅಡಗಿಕೊಂಡಿರುವದು ? ಸೂರ್ಯನಿಗೂ ಪ್ರಾಣಶಕ್ತಿಗೂ ಸಂಬಂಧವೇನಾದರೂ ಉಂಟೆ? -ಎಂಬುದನ್ನು ಭೌತಿಕಶಾಸ್ತ್ರದೃಷ್ಟಿಯಿಂದ ಕಂಡುಹಿಡಿಯುವದು ಅವಶ್ಯವಾಗಿರುತ್ತದೆ.

ಪ್ರಾಣನನ್ನೂ ಸೂರ್ಯನನ್ನೂ ಒಂದೆಂದು ಭಾವಿಸಿ, ಪ್ರಾಣನನ್ನು ವಿಳನೆಯ ವಾಕ್ಯದಲ್ಲಿ ವರ್ಣಿಸಿದ ಮೇಲೆ ಉದಾಹರಿಸಿರುವ ಋಕ್ಕಿನ ಅಭಿಪ್ರಾಯವಿದು :

ಆದಿತ್ಯರೂಪನಾದ ಈ ಪ್ರಾಣನು ವಿಶ್ವರೂಪನು, ಸರ್ವವಸ್ತುಗಳ ರೂಪದಲ್ಲಿಯೂ ಇರುವಾತನು. ಇವನು ಹರಿಣನು, ರಶ್ಮಿಗಳಿಂದ ಕೂಡಿರುವಾತನು. ಈತನು ಅಗ್ನಿರೂಪದಿಂದ ಜಾತವೇದಸನಾಗಿರುತ್ತಾನೆ, ಈ ಲೋಕದಲ್ಲಿ ಏನೇನು ಆಗುವದೋ ಅದೆಲ್ಲವನ್ನೂ ಅರಿಯುವಾತನು ಇವನೇ. ಆರ್ಯರು ಎಲ್ಲವನ್ನೂ ಅಗ್ನಿ ಸಾಕ್ಷಿಕವಾಗಿ ಮಾಡುತ್ತಾರೆ. ಸೂರ್ಯಚಂದ್ರರಿಗೂ ಅಗ್ನಿವಾಯುಗಳಿಗೂ ಜನರ ವೃತ್ತವೆಲ್ಲವೂ ತಿಳಿದಿರುತ್ತದೆ- ಎಂದು ಆಸ್ತಿಕರ ಅಭಿಪ್ರಾಯ. ಈತನು ಪರಾಯಣನು, ಎಲ್ಲರ ಪ್ರಾಣಗಳಿಗೂ ಆಶ್ರಯನಾಗಿರುವಾತನು. ಜಗಚ್ಚಕ್ಷುವೆನಿಸಿಕೊಂಡು ತಾನೊಬ್ಬನೇ ಅದ್ವಿತೀಯನಾಗಿ ತಪಿಸುತ್ತಿರುವ ಸೂರ್ಯನೀತನು. ಸೂರ್ಯರೂಪದಿಂದ ಅಥವಾ ಅಗ್ನಿರೂಪದಿಂದ ಈ ಪ್ರಾಣನು ಅರಿಯದೆ ಇರುವದು ಯಾವದುತಾನೆ ಇದ್ದೀತು?

ಹೀಗೆಂದು ಪ್ರಾಣಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಈ ಸಾವಿರಾರು ರಶ್ಮಿಗ್ರಳಿಂದ ಕೂಡಿದವನು ನೂರಾರು ಬಗೆಯ ಪ್ರಾಣಿಗಳ ರೂಪದಿಂದ ಇರುತ್ತಿರುವನಾಗಿ ಪ್ರತಿದಿನವೂ ಉದಯಿಸುತ್ತಿರುವನು.

ಸೂರ್ಯನು ಪ್ರಾಣಾತ್ಮಕನೆಂದೂ ಸಕಲಪ್ರಾಣಿಗಳ ಪ್ರಾಣಗಳೂ ಅವನಲ್ಲಿರುವ ಮಹಾಪ್ರಾಣದ ಅಂಶಗಳೆಂದೂ ಇಲ್ಲಿ ಹೇಳಿರುವದನ್ನು ಲಕ್ಷಿಸಬೇಕು. ಅಧಿದೈವವಾಗಿ ಆದಿತ್ಯನಾಗಿರುವದೇ ಅಧಿಯಜ್ಞವಾಗಿ ಅಗ್ನಿಯಾಗಿರುತ್ತದೆ; ಅಧಿದೈವವಾಗಿ ಚಂದ್ರನಾಗಿರುವದೇ ಅಧಿಯಜ್ಞವಾಗಿ ಸೋಮವಾಗಿರುತ್ತದೆ - ಎಂದು ಇಲ್ಲಿ ವರ್ಣಿಸಿರುತ್ತದೆ. ಪ್ರಜಾಪತಿಯೇ ಪ್ರಾಣರಯಿಗಳಾಗಿ, ಸೂರ್ಯಚಂದ್ರರಾಗಿ, ಆವಿರ್ಭವಿಸಿರುವನೆಂದದ್ದರಿಂದ ಅವನು ಒಡೆದುಕೊಂಡು ಎರಡು ಪಾಲಾಗಿರುವನೆಂದು ಭಾವಿಸಬಾರದು. ಪ್ರಜಾಪತಿಯು ತಾನು ಇರುವಂತೆ ಇದ್ದುಕೊಂಡೇ ಚಂದ್ರಸೂರ್ಯರಾಗಿಯೂ ಅಗ್ನಿ ಮತ್ತು ಸೋಮ - ಈ ರೂಪಗಳನ್ನು ತಳೆದವನಾಗಿಯೂ ಇರುತ್ತಾನೆ. ಈ ದೃಷ್ಟಿಯಿಂದ ನೋಡಿದರೆ ಈ ಜಗತ್ತೆಲ್ಲವೂ ಸೂರ್ಯಚಂದ್ರಾತ್ಮಕ, ಅಥವಾ ಅಗ್ನೀಷೋಮಾತ್ಮಕವಾಗಿರುತ್ತದೆ. ಆದಿತ್ಯನೇ ಸರ್ವಾತ್ಮಕನಾದ ಪ್ರಾಣನು, ಅಗ್ನಿಯು, ಪೂರ್ಣರೂಪದಿಂದಿರುವ ಪ್ರಜಾಪತಿಯು. ಹೀಗೆಯೇ ಚಂದ್ರನೇ ಸರ್ವಾತ್ಮನಾದ ರಯಿಯು. ಸೋಮವು, ಪೂರ್ಣರೂಪದಿಂದಿರುವ ಪ್ರಜಾಪತಿಯು.

# ಸೂರ್ಯಚಂದ್ರರಿಂದ ಪ್ರಜೆಗಳ ಉತ್ಪತ್ತಿ

*ಸಂವತ್ಸರೋ ವೈ ಪ್ರಜಾಪತಿಸ್ತಸ್ಯಾಯನೇ ದಕ್ಷಿಣಂ ಚೋತ್ತರಂ ಚ। ತದ್ಯೇ ಹ ವೈ ತದಿಷ್ಟಾಪೂರ್ತೇ ಕೃತಮಿತ್ಯುಪಾಸತೇ ತೇ ಚಾಂದ್ರಮಸಮೇವ ಲೋಕಮಭಿಜಯನ್ತೇ। ತ ಏವ ಪುನರಾವರ್ತನ್ತೇ ತಸ್ಮಾದೇತ ಋಷಯಃ ಪ್ರಜಾಕಾಮಾ ದಕ್ಷಿಣಂ ಪ್ರತಿಪದ್ಯನ್ತೇ। ಏಷ ಹ ವೈ ರಯಿರ್ಯಃ ಪಿತೃಯಾಣಃ ॥೯॥*

*ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾ ಆತ್ಮಾನಮನ್ವಿಷ್ಯಾದಿತ್ಯಮಭಿಜಯನ್ತೇ। ಏತದ್ವೈ ಪ್ರಾಣಾನಾಮಾಯತನಮೇತದ ಮೃತಮಭಯಮೇತತ್ ಪರಾಯಣಮೇತಸ್ಮಾನ್ನ ಪುನರಾವರ್ತನ್ತ ಇತ್ಯೇಷ ನಿರೋಧಃ ಸ್ತದೇಷ ಶ್ಲೋಕಃ ॥೧೦॥*

*ಪಞ್ಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇಅರ್ಧೇ ಪುರೀಷಿಣಮ್। ಅಥೇಮೇ ಅನ್ಯ ಉ ಪರೇ ವಿಚಕ್ಷಣಂ ಸಪ್ತ ಷಡರ ಆಹುರರ್ಪಿತಮಿತಿ ॥೧೧॥*

ಈವರೆಗೆ ಚಂದ್ರನೆಂಬ ಮೂರ್ತರೂಪವಾದ ಅನ್ನ, ಆದಿತ್ಯನೆಂಬ ಅಮೂರ್ತವಾದ ಅತ್ತೃವಾದ ಪ್ರಾಣ - ಎಂಬ ಎರಡು ಶಕ್ತಿಗಳ ಜೋಡಿಯನ್ನು ಪ್ರಜಾಪತಿಯು ಕಲ್ಪಾದಿಯಲ್ಲಿ ಸೃಷ್ಟಿಸಿದನು; ಇವೆರಡರಿಂದಲೇ ಪ್ರಜೆಗಳ ಉತ್ಪತ್ತಿಯಾಗಬೇಕೆಂಬುದು ಪ್ರಜಾಪತಿಯ ಸಂಕಲ್ಪ - ಎಂದು ತಿಳಿಸಿದ್ದಾಯಿತು. ಈಗ ಇವೆರಡರಿಂದ ಪ್ರಜೆಗಳ ಉತ್ಪತ್ತಿಯು ಹೇಗೆ ಆಗುತ್ತದೆ?- ಎಂಬುದನ್ನು ವಿವರಿಸುವದಕ್ಕೆ ಹೊರಟಿರುತ್ತಾರೆ.

ಪ್ರಜಾಪತಿಯೇ ಆದಿತ್ಯ, ಚಂದ್ರ - ಎಂಬ ಎರಡು ರೂಪಗಳಿಂದ ತನ್ನನ್ನು ತಾನು ಸೃಷ್ಟಿಸಿಕೊಂಡಂತೆಯೇ ಕಾಲಾತ್ಮಕನಾದ ಆ ಪ್ರಜಾಪತಿಯೇ ಸಂವತ್ಸರವು. ಏಕೆಂದರೆ ಆದಿತ್ಯ ಮತ್ತು ಚಂದ್ರ-ಇವರಿಂದಲೇ ಸಂವತ್ಸರವು ಉಂಟಾಗುತ್ತದೆ. ಈ ಸಂವತ್ಸರರೂಪನಾದ ಪ್ರಜಾಪತಿಯೂ ರಯಿ, ಪ್ರಾಣ - ಎಂಬ ಜೋಡಿಯಿಂದ ಕೂಡಿದವನಾಗಿರುತ್ತಾನೆ. ಹೇಗೆಂದರೆ, ಈ ಸಂವತ್ಸರರೂಪನಾದ ಪ್ರಜಾಪತಿಗೆ ದಕ್ಷಿಣಾಯನ, ಉತ್ತರಾಯಣ - ಎಂಬ ಎರಡು ಅಯನಗಳು, ಮಾರ್ಗಗಳು, ಇರುತ್ತವೆ. ಸೂರ್ಯನು ದಕ್ಷಿಣಾಯನ, ಉತ್ತರಾಯಣ- ಎಂಬ ಎರಡು ಮಾರ್ಗಗಳಿಂದ ಸಂಚರಿಸುತ್ತಿರುವದು ಪ್ರಸಿದ್ಧವೇ ಆಗಿರುತ್ತದೆಯಷ್ಟೆ? ಈ ಎರಡು ಮಾರ್ಗಗಳಿಂದ

ಸಂಚರಿಸುತ್ತಿರುವ ಸೂರ್ಯನು ಕೇವಲ ಕರ್ಮವನ್ನು ಅನುಷ್ಠಾನಮಾಡುವವರಿಗೂ ಜ್ಞಾನಸಮುಚ್ಚಿತವಾದ ಕರ್ಮಗಳನ್ನು ಅನುಷ್ಠಾನ ಮಾಡುವವರಿಗೂ ಫಲವನ್ನು ಕೊಡುತ್ತಾ ಸಂಚರಿಸುತ್ತಿರುತ್ತಾನೆ.

ಇಲ್ಲಿ ಕರ್ಮಗಳು ಎಂದರೆ ಶಾಸ್ತ್ರೋಕ್ತವಾದ ಕರ್ಮಗಳೇ; ಜ್ಞಾನವೆಂದರೆ ಉಪಾಸನೆಯೇ. ಯಾವ ಅನುಷ್ಠಾತೃಗಳು ಉಪಾಸನಾರಹಸ್ಯವನ್ನರಿಯದೆ ಬರಿಯ ಇಷ್ಟ, ಪೂರ್ತ-ಮುಂತಾದ 'ಕೃತ' ಎಂದರೆ ವಿನಾಶಿಯಾದ ಫಲವುಳ್ಳ ಕರ್ಮವನ್ನು ಮಾಡುವರೋ ಅವರು ಪ್ರಜಾಪತಿಯ ರಯಿ ಎಂಬ ಅಂಶವಾದ ಚಂದ್ರನ ಲೋಕವನ್ನು ಪಡೆದುಕೊಳ್ಳುತ್ತಾರೆ. ಅಗ್ನಿಹೋತ್ರ, ತಪಸ್ಸು, ಸತ್ಯ, ವೇದರಕ್ಷಣೆ, ಅತಿಥಿಪೂಜೆ.- ಇವುಗಳಿಗೆ 'ಇಷ್ಟ'ವೆಂದು ಹೆಸರು; ಭಾವಿ, ಕೊಳ, ಕಟ್ಟೆ-ಮುಂತಾದ ಜಲಾಶಯಗಳ ನಿರ್ಮಾಣವೂ, ದೇವಾಲಯವೇ ಮುಂತಾದವುಗಳನ್ನು ಕಟ್ಟಿಸುವದೂ, ಅನ್ನದಾನವನ್ನು ಮಾಡುವದೂ, ತೋಪುಗಳನ್ನು ಏರ್ಪಡಿಸುವದೂ 'ಪೂರ್ತ'ವೆನಿಸುತ್ತದೆ. ಇಷ್ಟಾಪೂರ್ತವು 'ಕೃತ' ಎಂದರೆ ಕಾರ್ಯವಾಗಿರುವದರಿಂದ ಕರ್ಮಿಗಳಿಗೆ ಅನಿತ್ಯವಾದ, ಅನ್ನರೂಪನಾದ ಚಂದ್ರನ, ಲೋಕವೇ ಫಲವಾಗುತ್ತದೆ. ಅವರು ತಾವು ಮಾಡಿದ ಕರ್ಮದ ಫಲವು ಕ್ಷಯವಾಗುವವರೆಗೂ ಅಲ್ಲಿ ಅದನ್ನು ಭೋಗಿಸುತ್ತಿರುತ್ತಾರೆ. ಈ ಇಷ್ಟಾಪೂರ್ತವನ್ನು ಮಾಡುವವರು ಗೃಹಸ್ಥರು; ಅವರಿಗೆ 'ನಮಗೆ ಸತ್ಪ್ರಜೆಯಾಗಬೇಕು' ಎಂಬ ಸಂಕಲ್ಪವಿರುತ್ತದೆ. ಇದೇ ರಯಿಯು, ಪಿತೃಯಾಣದಿಂದ ಪಡೆಯತಕ್ಕ ಚಂದ್ರನು.

ಮುಂಡಕೋಪನಿಷತ್ತಿನಲ್ಲಿ (೧-೨-೧ರಿಂದ ೧೦ರವರೆಗಿನ ಮಂತ್ರಗಳಲ್ಲಿ) ಇದೇ ವಿಷಯವನ್ನು ಹೇಳಿರುವ ಬಗೆಯನ್ನು ಇಲ್ಲಿ ಮನದಂದುಕೊಳ್ಳಬೇಕು. ಕರ್ಮವು ನಾನಾಪ್ರಕಾರವಾಗಿರುತ್ತದೆ. ಅದನ್ನು ಸಾಂಗವಾಗಿ ಸಾದ್ಗುಣ್ಯದಿಂದ ಮಾಡುವದೆಂಬುದು ಬಹಳ ಕಷ್ಟ. ಅದನ್ನು ಸರಿಯಾಗಿ ಮಾಡದೆ ಇದ್ದರೆ ಫಲವು ಸಿಕ್ಕುವದು ಕಷ್ಟ. ಆದರೆ ಫಲವು ಸಿಕ್ಕಿದರೂ ಗಾಳಿಯಲ್ಲಿ ಹೊಯ್ದಾಡುತ್ತಿರುವ ತೆಪ್ಪದಮೇಲೆ ಕುಳಿತು ಸಮುದ್ರವನ್ನು ದಾಟುವದಕ್ಕೆ ಎಳಸುವವರ ಪ್ರಯತ್ನದಂತೆ ಇರುತ್ತದೆ, ಕರ್ಮಿಗಳ ಪ್ರಯತ್ನ. ಏಕೆಂದರೆ ಇದರಿಂದಲೇ ನಮಗೆ ಪುರುಷಾರ್ಥವು ದಕ್ಕುವದೆಂದು ನಂಬಿಕೊಂಡಿರುವ ಮೂಢರಿಗೆ ಜರಾಮರಣರೂಪವಾದ ಈ ಸಂಸಾರಕ್ಕೆ ಮರಳಿಬಂದು ಸೇರುವದು ತಪ್ಪಲಾರದು. ಈ ಕರ್ಮಿಗಳೂ ಋಷಿಗಳೇ ಸರಿ. ಏಕೆಂದರೆ ಸ್ವರ್ಗವನ್ನು ಮುಟ್ಟುವ ಇಷ್ಟಾಪೂರ್ತರೂಪವಾದ ಕರ್ಮತತ್ತ್ವವನ್ನು ಇವರು ಕಂಡುಹಿಡಿದುಕೊಂಡಿರುತ್ತಾರೆ. ಆದರೆ ಉತ್ತರಾಯಣಮಾರ್ಗವನ್ನು

ಅನುಸರಿಸುವವರಿಗೆ ಹೋಲಿಸಿದರೆ ಇವರು ಅವಿದ್ವಾವಂತರೇ. ಏಕೆಂದರೆ ಕೂತು ಉಣ್ಣುವವನಿಗೆ ಕುಡಿಕೆಯ ಹಣ ಎಷ್ಟುದಿನ ಬಂದೀತು? ಆದ್ದರಿಂದಲೇ ಇವರ ಕರ್ಮದ ಫಲವು ಕ್ಷಯವಾಗುತ್ತಲೂ ಈ ಲೋಕಕ್ಕೋ ಅಥವಾ ಇನ್ನೂ ಕೀಳುತರನಾದ ಲೋಕಕ್ಕೋ ಇವರು ಇಳಿಯುವರು-ಎಂದು ಮುಂಡಕ (೧-೨-೧೦) ದಲ್ಲಿ ವರ್ಣಿಸಿದೆ.

ಇದುವರೆಗೆ ಹೇಳಿದ್ದು ರಯಿರೂಪನಾದ ಚಂದ್ರನನ್ನು ಪಡೆಯುವ ಕರ್ಮಿಗಳನ್ನು ಕುರಿತದ್ದು. ಇನ್ನು ಉತ್ತರಾಯಣಮಾರ್ಗದಿಂದ ಹೋಗುವವರು ಪ್ರಜಾಪತಿಯ ಇನ್ನೊಂದಂಶವಾದ ಅತ್ತೃವಾದ ಪ್ರಾಣನನ್ನು, ಎಂದರೆ ಆದಿತ್ಯನನ್ನು ಜಯಿಸಿಕೊಳ್ಳುತ್ತಾರೆ. ಅವರು ಇಂದ್ರಿಯನಿಗ್ರಹರೂಪವಾದ ತಪಸ್ಸು, ವಿಶಿಷ್ಟವಾದ ಬ್ರಹ್ಮಚರ್ಯೆ, ಶ್ರದ್ಧೆ, ಹಿರಣ್ಯಗರ್ಭನ ಉಪಾಸನೆ- ಇವುಗಳಿಂದ ಸ್ಥಾವರಜಂಗಮಪ್ರಾಣಿಗಳೆಲ್ಲಕ್ಕೂ ಆತ್ಮನಾಗಿರುವ ಸೂರ್ಯನನ್ನು ಅನ್ವೇಷಣ ಮಾಡಿ ಉಪಾಸನೆಯಿಂದ 'ಈ ಅತ್ತೃ ಪ್ರಾಣಾತ್ಮಕನಾದ ಆದಿತ್ಯನೇ ನಾನು' ಎಂಬ ಸಾಕ್ಷಾತ್ಕಾರವನ್ನು ಸಂಪಾದಿಸಿಕೊಂಡು ಆ ಆದಿತ್ಯನನ್ನೇ ಪಡೆದುಕೊಳ್ಳುತ್ತಾರೆ. ಈ ಆದಿತ್ಯನು ಎಲ್ಲರ ಪ್ರಾಣಗಳಿಗೂ ಆಶ್ರಯವಾಗಿರುತ್ತಾನೆ. ಈತನು ಅಮೃತನು, ಸಂಸಾರವಿರುವವರೆಗೂ ಇದ್ದು ಕೊಂಡಿರುವವನು, ಚಂದ್ರನಂತೆ ವೃದ್ಧಿಕ್ಷಯಗಳ ಅಂಜಿಕೆಯಿಲ್ಲದವನು. ಈತನೇ ಜ್ಞಾನಕರ್ಮಗಳನ್ನು ಕೂಡಿಸಿಕೊಂಡು ಅನುಷ್ಠಾನಮಾಡುವವರಿಗೂ ಮತ್ತು ಕೇವಲೋಪಾಸನೆಯನ್ನು ಮಾಡುವವರಿಗೂ ಪರಗತಿಯು (ಮುಂಡಕ ೧-೨-೧೧ನ್ನು ನೋಡಿರಿ). ಬರಿಯ ಕರ್ಮವನ್ನು ಮಾಡಿ ಚಂದ್ರಲೋಕದಿಂದ ಹಿಂದಕ್ಕೆ ಮರಳಿಬರುವ ಕರ್ಮಿಗಳಂತೆ ಈ ಉಪಾಸಕರು ಹಿಂತಿರುಗಿ ಬರುವದಿಲ್ಲ. ಆ ಕರ್ಮಿಗಳಿಗೆ ಇಲ್ಲಿ ಪ್ರವೇಶವಿರುವದಿಲ್ಲ. ಕಾಲಾತ್ಮನಾದ ಸಂವತ್ಸರಪ್ರಜಾಪತಿಯ ಲೋಕವು ಉಪಾಸಕರಲ್ಲದವರಿಗೆ ಎಂದಿಗೂ ದಕ್ಕದು.

ಈ ಪ್ರಜಾಪತಿಯ ವಿಷಯದಲ್ಲಿ ಒಂದು ಮಂತ್ರವು ವೇದದಲ್ಲಿರುತ್ತದೆ. ಅದರ ಅಭಿಪ್ರಾಯವೇನೆಂದರೆ: ಇವನು ಪಂಚಪಾದನು- ಸಂವತ್ಸರಕ್ಕೆ- ಹೇಮಂತಶಿಶಿರ ಎಂಬ ಎರಡು ಚಳಿಗಾಲದ ಋತುಗಳನ್ನು ಒಂದೆಂದು ಹಿಡಿದರೆ- ಋತುಗಳೆಂಬ ಐದು ಪಾದಗಳಿರುತ್ತವೆ. ಅವನು ದ್ವಾದಶಾಕೃತಿ. ಹನ್ನೆರಡು ಮಾಸಗಳೆಂಬ ಅವಯವಗಳುಳ್ಳವನು; ಮತ್ತು ಈತನು ಅಂತರಿಕ್ಷಲೋಕದ ಆಚೆಯಿರುವ ಸ್ವರ್ಗದಲ್ಲಿ ಉದಕವನ್ನಿಟ್ಟುಕೊಂಡಿದ್ದು ಈ ಲೋಕಕ್ಕೆ ಬಿಡುವವನು ಎಂದು ಕೆಲವರು ಬಲ್ಲವರು ಹೇಳುತ್ತಾರೆ. ಈತನನ್ನೇ ಕೆಲವರು ವಿಚಕ್ಷಣನು, ಎಂದರೆ ಸರ್ವಜ್ಞನು ಎನ್ನುವರು.

ಏಳು ಚಕ್ರಗಳಿಂದ ಆರು ಹಾರೆಕೋಲುಗಳಿಂದ ಸತತವಾಗಿ ಸಂಚರಿಸುವವನು, ಆರು ಋತುಗಳು ಮತ್ತು ಮಲಮಾಸ ಎಂಬ ಏಳು ಸೇರಿದ ಚಕ್ರಗಳಿಂದ - ಸುತ್ತುತ್ತಿರುವಾತನು, ಅಥವಾ ಆರು ಋತುಗಳಿಂದ ಸುತ್ತುತ್ತಿರುವವನು ಎನ್ನುವರು. ಹೀಗೆ ಚಂದ್ರಾದಿತ್ಯ ಲಕ್ಷಣನಾಗಿರುವ ಸಂವತ್ಸರರೂಪಿಯಾದ ಕಾಲಾತ್ಮನು ಜಗತ್ತಿಗೆಲ್ಲ ಕಾರಣನಾಗಿರುತ್ತಾನೆ.

**ಮಾಸೋ ವೈ ಪ್ರಜಾಪತಿಸ್ತಸ್ಯ ಕೃಷ್ಣಪಕ್ಷ ಏವ ರಯಿಃ ಶುಕ್ಲಃ ಪ್ರಾಣಸ್ತಸ್ಮಾದೇತೇ ಋಷಯಃ ಶುಕ್ಲ ಇಷ್ಟಂ ಕುರ್ವನ್ತೀತರ ಇತರಸ್ಮಿನ್ ॥೧೨॥**

**ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ ರಾತ್ರಿರೇವ ರಯಿಃ ಪ್ರಾಣಂ ವಾ ಏತೇ ಪ್ರಸ್ಕನ್ದನ್ತಿ ಯೇ ದಿವಾ ರತ್ಯಾ ಸಂಯುಜ್ಯನ್ತೇ ಬ್ರಹ್ಮಚರ್ಯಮೇವ ತದ್ ಯದ್ ರಾತ್ರೌ ರತ್ಯಾ ಸಂಯುಜ್ಯನ್ತೇ ॥೧೩॥**

ಚಂದ್ರಾದಿತ್ಯರೂಪಿಯಾದ ಪ್ರಜಾಪತಿಯೇ ಸಂವತ್ಸರಾತ್ಮಕನೂ ಆಗಿರುತ್ತಾನೆಂದು ಹೇಳಿದ್ದಾಯಿತಷ್ಟೆ? ಇದೇ ಪ್ರಜಾಪತಿಯೇ ಮಾಸ, ಅಹೋರಾತ್ರ- ಎಂಬ ರೂಪಗಳಿಂದಲೂ ಕಾಣಿಸಿಕೊಳ್ಳುತ್ತಿರುತ್ತಾನೆ. ಹೇಗೆಂದರೆ:

ಸಂವತ್ಸರನೆಂಬ ಈ ಪ್ರಜಾಪತಿಯೇ ತನ್ನ ಅವಯವವಾದ ಮಾಸದಲ್ಲಿ ಪೂರ್ಣವಾಗಿ ವ್ಯಾಪಿಸಿಕೊಂಡಿರುತ್ತಾನೆ. ಈ ಮಾಸಾತ್ಮಕನಾದ ಪ್ರಜಾಪತಿಯೂ ಹಿಂದೆ ಹೇಳಿದ ರಯಿ, ಪ್ರಾಣ- ಎಂಬ ಜೋಡಿಯ ರೂಪದಿಂದ ಇದ್ದು ಕೊಂಡಿರುತ್ತಾನೆ. ಅದು ಹೇಗೆಂದರೆ, ಮಾಸಪ್ರಜಾಪತಿಯ ಕೃಷ್ಣಪಕ್ಷವೇ ರಯಿ, ಚಂದ್ರ, ಅನ್ನ; ಇನ್ನೊಂದು ಭಾಗವಾದ ಶುಕ್ಲಪಕ್ಷವೇ ಪ್ರಾಣ, ಆದಿತ್ಯನು, ಪ್ರಾಣನೆಂಬ ಅತ್ತೃವಾದ ಅಗ್ನಿಯು. ಶುಕ್ಲಪಕ್ಷವೆಂಬ ಪ್ರಾಣಾತ್ಮನೇ ಸರ್ವವೆಂದು ಉಪಾಸನೆಮಾಡುವ ಉಪಾಸಕರಾದ ಋಷಿಗಳು ಕೃಷ್ಣಪಕ್ಷದಲ್ಲಿ ಇಷ್ಟವನ್ನು, ಯಾಗವನ್ನು, ಮಾಡಿದರೂ ಶುಕ್ಲಪಕ್ಷದಲ್ಲಿಯೇ ಅದನ್ನು ಮಾಡಿದ ಫಲವನ್ನು ಪಡೆದುಕೊಳ್ಳುತ್ತಾರೆ. ಏಕೆಂದರೆ ಅವರ ದೃಷ್ಟಿಯಲ್ಲಿ ಪ್ರಾಣನಿಗಿಂತ ವ್ಯತಿರಿಕ್ತವಾಗಿ ಕೃಷ್ಣಪಕ್ಷವೆಂಬುದೇ ಕಾಣಿಸುತ್ತಿಲ್ಲ; ಎಲ್ಲವೂ ಶುಕ್ಲಪಕ್ಷವೇ ಆಗಿಬಿಟ್ಟಿರುತ್ತದೆ. ಪ್ರಾಣೋಪಾಸಕರಲ್ಲದ ಮಿಕ್ಕ ಜನರೊ, ಎಂದರೆ ಶುಕ್ಲಪಕ್ಷದಲ್ಲಿ ಇಷ್ಟವನ್ನು ಅನುಷ್ಠಾನಮಾಡಿದರೂ ಅವರಿಗೆ ಕೃಷ್ಣಪಕ್ಷದಲ್ಲಿ ಮಾಡಿದ ಫಲವೇ ಬರುತ್ತದೆ. ಏಕೆಂದರೆ ಅವರ ಪಾಲಿಗೆ ಶುಕ್ಲಪಕ್ಷವುಕೂಡ ಪ್ರಾಣಾತ್ಮಕವಾಗಿರುವದಿಲ್ಲ. ಇದು ಮಾಸಪ್ರಜಾಪತಿಯ ಉಪಾಸನೆಯ ಸ್ತುತಿ.

ಈ ಮಾಸಾತ್ಮಕನಾದ ಪ್ರಜಾಪತಿಯುಕೂಡ ತನ್ನ ಅವಯವವಾದ ಅಹೋರಾತ್ರದಲ್ಲಿ ಪೂರ್ಣವಾಗಿ ವ್ಯಾಪಿಸಿಕೊಂಡಿರುತ್ತಾನೆ. ಆದ್ದರಿಂದ ಉಪಾಸಕರಿಗೆ **ಅಹೋರಾತ್ರವೇ ಪ್ರಜಾಪತಿಯು.** ಏಕೆಂದರೆ ಅವನೂ ರಯಿಪ್ರಾಣಾತ್ಮಕವಾದ ಜೋಡಿಯಿಂದೊಡಗೂಡಿರುತ್ತಾನೆ. ಹೇಗೆಂದರೆ, ಅವನ ಅಹಸ್ಸೆಂಬ ಭಾಗವೇ ಪ್ರಾಣ, ಅತ್ತೃವಾದ ಅಗ್ನಿ, ಆದಿತ್ಯನು; ರಾತ್ರಿಯೇ ರಯಿ. ಇಲ್ಲಿಯೂ ಹಿಂದೆ ಹೇಳಿದಂತೆ ಅನ್ನರೂಪನಾದ್ದರಿಂದ ಚಂದ್ರರೂಪನು ಎಂದು ಭಾವಿಸಬೇಕು. ಇಲ್ಲಿಯೂ ಅಹಸ್ಸನ್ನೂ ರಾತ್ರಿಯನ್ನೂ ಸರ್ವವನ್ನೂ, ಪ್ರಾಣೋಪಾಸಕರು ಪ್ರಾಣವೆಂದೇ ಭಾವಿಸುತ್ತಾರೆ- ಎಂದು ಹಿಂದಿನ ಮಂತ್ರದಲ್ಲಿ ಹೇಳಿರುವಂತೆ ಭಾವಿಸಬೇಕು.

ಪ್ರಾಸಂಗಿಕವಾಗಿ ಈ ಮಂತ್ರದಲ್ಲಿ ಸ್ತ್ರೀಸಂಭೋಗವನ್ನು ಮಾಡುವವರಿಗೆ ವಿಧಿನಿಷೇಧಗಳನ್ನು ಮಾಡಿರುತ್ತದೆ. ಯಾರು ಸ್ವಸ್ತ್ರೀಯಲ್ಲಿ ರತಿಯನ್ನು ಹಗಲು ಹೊತ್ತು ಮಾಡುವರೋ ಆ ಮೂಢರು ತಮ್ಮ ಆತ್ಮನಾದ ಪ್ರಾಣನನ್ನೇ ಕಿತ್ತೊಗೆದಂತೆ ಎಂದು ತಿಳಿಯಬೇಕು. ಹೀಗಿರುವದರಿಂದ ದಿವಾಮೈಥುನವನ್ನು ಮಾಡತಕ್ಕದ್ದಲ್ಲ. ಆದರೆ ಯಾರು ತಮ್ಮ ಭಾರ್ಯೆಯಲ್ಲಿ ಋತುಕಾಲದಲ್ಲಿ ಶಾಸ್ತ್ರೋಕ್ತರೀತಿಯಿಂದಲೇ ರಾತ್ರಿಯಲ್ಲಿ ಮೈಥುನಕರ್ಮವನ್ನು ಮಾಡುವರೋ ಅವರು ಬ್ರಹ್ಮಚರ್ಯವನ್ನೇ ಅನುಸರಿಸಿದ ಫಲವನ್ನು ಪಡೆಯುತ್ತಾರೆ. ಆದ್ದರಿಂದ ರಾತ್ರಿಯಲ್ಲಿಯೇ ಹೀಗೆ ನಿಯಮದಿಂದ ಆ ಕರ್ಮವನ್ನು ಆಚರಿಸಬೇಕು ಎಂಬಿದು ಪ್ರಾಸಂಗಿಕವಿಧಿ.

*ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ರೇತಸ್ತಸ್ಮಾದಿಮಾಃ ಪ್ರಜಾಃ ಪ್ರಜಾಯನ್ತ ಇತಿ ॥೧೪॥*

*ತದ್ ಯೇ ಹ ವೈ ತತ್ ಪ್ರಜಾಪತಿವ್ರತಂ ಚರನ್ತಿ ತೇ ಮಿಥುನ ಮುತ್ಪಾದಯನ್ತೇ। ತೇಷಾಮೇವೈಷ ಬ್ರಹ್ಮಲೋಕೋ ಯೇಷಾಂ ತಪೋ ಬ್ರಹ್ಮಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಮ್ ॥೧೫॥*

*ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮಮನೃತಂ ನ ಮಾಯಾ ಚೇತಿ ॥ ೧೬ ॥*

ಈ ಪ್ರಾಸಂಗಿಕವಾದ ವಿಧಿನಿಷೇಧಗಳನ್ನು ಅನುಸರಿಸಿದವರಿಗೂ ಫಲವುಂಟು. ಕಾಮಭೋಗಕ್ಕಾಗಿ ವಿವಾಹವನ್ನು ಮಾಡಿಕೊಳ್ಳದೇ ಶಾಸ್ತ್ರೋಕ್ತನಿಯಮದಿಂದ ಋತುಕಾಲದಲ್ಲಿಯೇ ಸ್ವಸ್ತ್ರೀಗಮನವನ್ನು ಯಾರು ಮಾಡುವರೋ ಅವರಿಗೆ ಆರೋಗ್ಯವೂ ತೇಜಸ್ಸೂ ವೃದ್ಧಿಯಾಗುತ್ತದೆ. ಇಂಥ ಪ್ರಜೆಗಳು ಯಾವ ರಾಷ್ಟ್ರದಲ್ಲಿರುವರೋ ಆ ರಾಷ್ಟ್ರವು ಸುಸಂಸ್ಕೃತಿಗೆ ಉದಾಹರಣೆಯಾಗಿ ಅಭ್ಯುದಯವನ್ನು ಪಡೆಯುತ್ತಿರುವದು.

ಆದರೆ ಇದಂತಿರಲಿ, ಪ್ರಕೃತವೇನೆಂದರೆ ಪ್ರಜಾಪತಿಯು ಸೂರ್ಯಚಂದ್ರರನ್ನೂ, ಅವರ ಮೂಲಕ ಸಂವತ್ಸರವನ್ನೂ, ಸಂವತ್ಸರದ ಮೂಲಕ ಮಾಸವನ್ನೂ, ಮಾಸದ ಮೂಲಕ ಅಹೋರಾತ್ರವನ್ನೂ ಸೃಷ್ಟಿಸಿರುತ್ತಾನೆ. ಈ ಅಹೋರಾತ್ರರೂಪನಾದ ಪ್ರಜಾಪತಿಯೇ ಅನ್ನರೂಪನಾಗಿ, ಆ ಅನ್ನದಿಂದ ರೇತೋರೂಪದಿಂದ ಸ್ತ್ರೀಯಲ್ಲಿ ಪ್ರವಿಷ್ಟನಾಗಲು ಮನುಷ್ಯಾದಿರೂಪದ ಪ್ರಜಾಪತಿಗಳು ಆಗುತ್ತಾರೆ. ಹೀಗೆ ಪ್ರಜೆಗಳೆಲ್ಲ ಪ್ರಜಾಪತಿಯ ಸಂತತಿಯೇ ಎಂಬಿದು **ಕಬಂಧಿಕಾತ್ಯಾಯನನು** ಕೇಳಿದ ಪ್ರಶ್ನೆಗೆ ಉತ್ತರವು.

ಯಾವ ಪ್ರಜೆಗಳು ಮೇಲೆ ಹೇಳಿದಂತೆ ಪ್ರಜಾಪತಿವ್ರತವನ್ನು -ಎಂದರೆ ಶಾಸ್ತ್ರೋಕ್ತ ರೀತಿಯಿಂದ ಋತುಕಾಲದಲ್ಲಿ ಸ್ವಭಾರ್ಯಾಗಮನರೂಪವಾದ ಕರ್ಮವನ್ನು-ಮಾಡುವರೋ ಅವರೇ ಅವಳಿಯಾದ ಹೆಣ್ಣು ಗಂಡುಮಕ್ಕಳನ್ನು ಪಡೆದುಕೊಳ್ಳುವರು. ಇಷ್ಟಾಪೂರ್ತದತ್ತವೆಂಬ ಕರ್ಮಗಳನ್ನೂ ಸ್ನಾತಕಾದಿವ್ರತಗಳನ್ನೂ ಋತುಕಾಲದಲ್ಲಿ ಸ್ತ್ರೀಗಮನರೂಪವಾದ ಬ್ರಹ್ಮಚರ್ಯವನ್ನೂ, ಅನೃತವನ್ನು ಬಿಟ್ಟು, ಸತ್ಯವಚನವನ್ನೂ, ಅನುಸರಿಸುವರೋ ಆ ಗೃಹಸ್ಥರಿಗೇ **ಚಂದ್ರಲೋಕಕ್ಕಿಂತ ಹೆಚ್ಚಿನ ಲೋಕದ ಪ್ರಾಪ್ತಿಯು** ಆಗುವದು. ಆದರೆ ಯಾರು ವಕ್ರಭಾವವಿಲ್ಲದೆ ನಡೆಯುವರೋ, ಯಾರು ಹಾಸ್ಯಾದಿನಿಮಿತ್ತಗಳಿಂದಕೂಡ ಅನೃತವನ್ನಾಡುವದಿಲ್ಲವೋ, ಯಾರಲ್ಲಿ ಮಿಥ್ಯಾಚಾರರೂಪವಾದ ಮಾಯೆಯಿರುವದಿಲ್ಲವೋ ಅಂಥ ಬ್ರಹ್ಮಚಾರಿ, ವಾನಪ್ರಸ್ಥ, ಮತ್ತು ಸಂನ್ಯಾಸಿ- ಈ ಆಶ್ರಮದಲ್ಲಿರುವ ಉಪಾಸಕರಿಗೇ ಅವರವರ ಸಾಧನಕ್ಕೆ ಅನುಗುಣವಾಗಿ ಅತ್ಯಂತ ಪರಿಶುದ್ಧವಾದ ಬ್ರಹ್ಮಲೋಕಪ್ರಾಪ್ತಿಯಾಗುವದು.

## ೩. ಎರಡನೆಯ ಪ್ರಶ್ನೆ: ಕರಣಗಳಲ್ಲಿ ಶ್ರೇಷ್ಠನು ಯಾರು?

*ಅಥ ಹೈನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ ।*
*ಭಗವನ್ ಕತ್ಯೇವ ದೇವಾಃ ಪ್ರಜಾ ವಿಧಾರಯನ್ತೇ*
*ಕತರ ಏತತ್ಪ್ರಕಾಶಯನ್ತೇ ಕಃ ಪುನರೇಷಾಂ ವರಿಷ್ಠ ಇತಿ ॥೧॥*

೧. ಆಮೇಲೆ ಭಾರ್ಗವ ವೈದರ್ಭಿಯು ಈತನನ್ನು ಕೇಳಿದನೇನೆಂದರೆ: ಭಗವಂತನೆ, ಎಷ್ಟು ದೇವತೆಗಳು ಪ್ರಜೆಯನ್ನು ಧರಿಸಿಕೊಂಡಿರುತ್ತಾರೆ? ಯಾರು ಹೀಗೆ ಪ್ರಕಾಶಿಸಿಕೊಳ್ಳುತ್ತಿರುವರು? ಯಾರು ಇವರಲ್ಲಿ ವರಿಷ್ಠನು?

ಪ್ರಾಣನೇ ಅತ್ತೃ, ಪ್ರಜಾಪತಿ - ಎಂದು ಹಿಂದಿನ ಪ್ರಶ್ನೆಯಲ್ಲಿ ಹೇಳಿದೆ. ಪ್ರಾಣನು ಪ್ರಜಾಪತಿ ಎಂಬುದು ಹೇಗೆ? ಅವನು ಈ ಶರೀರದಲ್ಲಿ ಅತ್ತೃವೆಂಬುದು ಹೇಗೆ? ಎಂಬುದನ್ನು ನಿರ್ಣಯಿಸುವದಕ್ಕಾಗಿ ಈ ಎರಡನೆಯ ಪ್ರಶ್ನೆ ಪ್ರಾರಂಭವಾಗಿದೆ.

ಕಬಂಧಿಕಾತ್ಯಾಯನನ ಪ್ರಶ್ನೆಗೆ ಉತ್ತರವು ಬಂದ ಮೇಲೆ ಭಾರ್ಗವ ವೈದರ್ಭಿಯು ಈ ರೀತಿಯಲ್ಲಿ ಪ್ರಶ್ನೆಯನ್ನು ಮಾಡಿದನು. ಪೂಜ್ಯರೆ, ಶರೀರರೂಪವಾಗಿ ಹುಟ್ಟಿರುವ ಪ್ರಜೆಯನ್ನು ಎಷ್ಟು ದೇವತೆಗಳು ಧರಿಸಿರುತ್ತಾರೆ? ಇವುಗಳಲ್ಲಿ ಯಾವವು ತಮ್ಮ ಮಹಿಮೆಯನ್ನು ಇಲ್ಲಿ ತೋರಿಸುತ್ತಿರುವರು? ಈ ಕಾರ್ಯಕರಣಸ್ವರೂಪರಾದ ದೇವತೆಗಳಲ್ಲಿ ಎಲ್ಲರಿಗಿಂತಲೂ ಹೆಚ್ಚಿನವನು ಯಾರು?

### ಪ್ರಾಣಸಂವಾದ

ಶರೀರ, ಇಂದ್ರಿಯಗಳು, ಪ್ರಾಣ- ಎಂಬಿವುಗಳೊಳಗೆ ಯಾವದಕ್ಕೆ ಈ ಸಂಘಾತದಲ್ಲಿ ಹೆಚ್ಚಿನ ಅಗ್ಗಳಿಕೆಯಿದೆ? ಶರೀರವು ತಾನೇ ಎಲ್ಲಾ ಕೆಲಸಗಳನ್ನೂ ಮಾಡುವದೊ, ಅಥವಾ ಇಂದ್ರಿಯಗಳೊ? ಇಂದ್ರಿಯಗಳೊಳಗೆ ಕರ್ಮೇಂದ್ರಿಯಗಳು ಹೆಚ್ಚೊ, ಜ್ಞಾನೇಂದ್ರಿಯಗಳೊ? ಅಥವಾ ಶರೀರದಲ್ಲಿ ಓಡಾಡುತ್ತಿರುವ ಪ್ರಾಣವಾಯುವು ಹೆಚ್ಚೊ? ಇದನ್ನು ನಿರ್ಣಯಿಸಿ ತಿಳಿಯಿಸಬೇಕೆಂಬ ಉದ್ದೇಶದಿಂದ ಈ ಭಾರ್ಗವನ ಪ್ರಶ್ನೆಯನ್ನು ಶ್ರುತಿಯು ತಂದಿರುತ್ತದೆ. ಇದಕ್ಕೆ ಉತ್ತರವಾಗಿ ಪಿಪ್ಪಲಾದನು ಹೇಳಿದ ಉತ್ತರವನ್ನು ಮುಂದೆ ಹೇಳಿರುವ ಪ್ರಾಣಸಂವಾದದಲ್ಲಿ ಕೊಟ್ಟಿದೆ.

*ತಸ್ಮೈ ಸ ಹೋವಾಚ। ಆಕಾಶೋ ಹ ವಾ ಏಷ ದೇವೋ ವಾಯುರಗ್ನಿಃ ಆಪಃ ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ। ತೇ ಪ್ರಕಾಶ್ಯಾಭಿವದನ್ತಿ ವಯಮೇತದ್ ಬಾಣಮವಷ್ಟಭ್ಯ ವಿಧಾರಯಾಮಃ ॥೨॥*

೨. ಭಾರ್ಗವನಿಗೆ ಪಿಪ್ಪಲಾದನು ಹೇಳಿದನೇನೆಂದರೆ: "ಆಕಾಶನೆಂಬ ಈ ದೇವನು, ವಾಯು, ಅಗ್ನಿ, ಅಪ್ಪು, ಪೃಥಿವಿ, ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ- ಇವರು ತಮ್ಮ ಮಾಹಾತ್ಮ್ಯವನ್ನು ತೋರಿಸಿಕೊಂಡು ನಾವು ಈ ಸಂಘಾತವನ್ನು ಎತ್ತಿಹಿಡಿದುಕೊಂಡಿರುವೆವು" ಎಂದು ಅಭಿಮಾನದಿಂದ ಹೇಳಿಕೊಳ್ಳತೊಡಗಿದರು.

ಕರಣಗಳಲ್ಲೆಲ್ಲರೊಳಗೆ ಮುಖ್ಯಪ್ರಾಣನೇ ಹೆಚ್ಚಿನವನೆಂದು ತಿಳಿಸುವದಕ್ಕೆ ಹೀಗೆಯೇ ಐತರೇಯ, ಛಾಂದೋಗ್ಯ. ಬೃಹದಾರಣ್ಯಕ - ಈ ಉಪನಿಷತ್ತುಗಳಲ್ಲಿಯೂ ಪ್ರಾಣಸಂವಾದವನ್ನು ಕಥಾರೂಪವಾಗಿ ಕಲ್ಪಿಸಿಕೊಂಡಿರುತ್ತದೆ. ಈ ಸಂವಾದವು ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ಬಗೆಯಾಗಿರುತ್ತದೆ. ಸಂವಾದವು ಬೇರೆಬೇರೆಯ ಪ್ರಕರಣಗಳಲ್ಲಿ ಬಂದಿರುತ್ತದೆಯಾದರೂ ಮುಖ್ಯಪ್ರಾಣದ ಹೆಚ್ಚುಗಾರಿಕೆಯನ್ನು ತಿಳಿಯಿಸಿಕೊಡುವದಕ್ಕೆ ಬಂದಿದೆ ಎಂಬುದು ಎಲ್ಲಕ್ಕೂ ಸಮಾನವಾಗಿರುತ್ತದೆ. ಪ್ರಕೃತದಲ್ಲಿ ನಮ್ಮೆಲ್ಲರಿಗೂ ಆತ್ಮನಾಗಿರುವ ಪರಬ್ರಹ್ಮಕ್ಕೂ ಈ ಪ್ರಾಣಕ್ಕೂ ಇರುವ ಸಂಬಂಧವೇನು?ಎಂಬುದನ್ನು ವಿವರಿಸುವದಕ್ಕಾಗಿ ಈ ಸಂವಾದವನ್ನು ಬಹಳಸಂಕ್ಷೇಪವಾಗಿ ತಂದಿರುತ್ತದೆ.

ಈ ಶರೀರೇಂದ್ರಿಯಸಂಘಾತದಲ್ಲಿ ಏನೇನು ಸೇರಿಕೊಂಡಿದೆ? ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ - ಎಂಬ ಪಂಚಭೂತಗಳಿವೆ; ಚಕ್ಷುಸ್ಸು, ಶ್ರೋತ್ರ, ತ್ವಕ್ಕು, ಜಿಹ್ವಾ, ಪ್ರಾಣ -ಎಂಬ ಐದುಜ್ಞಾನೇಂದ್ರಿಯಗಳಿವೆ; ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ -ಎಂಬ ಐದು ಕರ್ಮೇಂದ್ರಿಯಗಳಿವೆ; ಮುಖ್ಯಪ್ರಾಣವಿದೆ. ಇವಿಷ್ಟೂ ಸೇರಿ ಈ ಸಂಘಾತವು ಜೀವನಿಗೆ ಉಪಕರಣವಾಗಿರುತ್ತದೆ. ಪೃಥಿವ್ಯಾದಿಗಳು ಕಾರ್ಯರೂಪವಾಗಿಯೂ ಚಕ್ಷುರಾದಿಗಳು ಕರಣರೂಪವಾಗಿಯೂ ಇರುತ್ತವೆ. ಇವುಗಳೊಳಗೆ ಎಲ್ಲಕ್ಕೂ ಹೆಚ್ಚಿನ ಮುಖ್ಯ ಸ್ಥಾನವನ್ನು ಯಾವದಕ್ಕೆ ಕೊಡಬೇಕು? -ಎಂಬುದೀಗ ಪ್ರಶ್ನೆ. ಪೃಥಿವ್ಯಾದಿ ಭೂತಗಳಿಲ್ಲದಿದ್ದರೆ ಶರೀರವೇ ಇರುತ್ತಿರಲಿಲ್ಲ; ಚಕ್ಷುರಾದಿಗಳಿಲ್ಲದಿದ್ದರೆ ನೋಡುವದು, ಕೇಳುವದು- ಮುಂತಾದ ಜ್ಞಾನವೇ ಆಗುತ್ತಿರಲಿಲ್ಲ; ವಾಕ್ಕು, ಪಾಣಿ, ಪಾದಾದಿಗಳು ಇಲ್ಲದಿದ್ದರೆ ಮಾತಾಡುವದು, ಹಿಡಿಯುವದು, ನಡೆಯುವದು -ಮುಂತಾದ ಕರ್ಮವೇ ಆಗುತ್ತಿರಲಿಲ್ಲ. ಆದ್ದರಿಂದ ಒಂದೊಂದು ದೃಷ್ಟಿಯಿಂದ ಒಂದೊಂದಕ್ಕೆ ಪ್ರಾಬಲ್ಯವಿರುತ್ತದೆ ಎಂಬುದನ್ನು ಒಪ್ಪಬೇಕು. ಆದರೂ ಇವುಗಳಲ್ಲಿ ಸರ್ವಶ್ರೇಷ್ಠವೆಂಬುದು ಯಾವದಾದರೊಂದು ಇದೆಯೇ? -ಎಂಬುದೀಗ ಪ್ರಶ್ನೆ.

ಇನ್ನು ಇವನ್ನು 'ದೇವತೆಗಳು' ಎಂದು ಕರೆದಿರುವದೇಕೆ? ಇವುಗಳಲ್ಲಿ ಪ್ರತಿಯೊಂದು ಭೂತಕ್ಕೂ 'ನಾನೇ ಈ ಸಂಘಾತದ ಹೊಣೆಯನ್ನು ಹೊತ್ತಿರುವೆನು, ಎಂಬ ಅಭಿಮಾನವು ಹೇಗೆ ಬಂದಿತು? ಭೂತಗಳೂ ಇಂದ್ರಿಯಗಳೂ ಸಂಭಾಷಣೆ ಮಾಡುವದುಂಟೆ? ಇಂಥ ಕಾಗಕ್ಕಗುಬ್ಬಕ್ಕನ ಕಥೆಯನ್ನೇಕೆ ಉಪನಿಷತ್ತಿನಲ್ಲಿ ವರ್ಣಿಸಿದೆ? -ಎಂಬ ಸಂಶಯವೊಂದು ಕೆಲವರ ಮನಸ್ಸಿನಲ್ಲಿ ಎದ್ದುಕೊಳ್ಳುವ ಸಂಭವವಿದೆ. ಅದಕ್ಕೆ ಇಲ್ಲಿ ಸ್ವಲ್ಪದರಲ್ಲಿಯೇ ಪರಿಹಾರವನ್ನು ಹೇಳುವೆವು. ಪ್ರತಿಯೊಂದು ಕರಣಕ್ಕೂ ಒಂದೊಂದು ದೇವತೆಯು ಅಧಿಷ್ಠಾತ್ರಿಯಾಗಿರುವದೆಂದು ವೈದಿಕರ ಕಲ್ಪನೆಯಿದೆ. ಪೃಥಿವಿಗೆ ಪೃಥಿವೀದೇವತೆ, ಚಕ್ಷುಸ್ಸಿಗೆ ಸೂರ್ಯದೇವತೆ -ಹೀಗೆ ಎಲ್ಲಾ ಕಾರ್ಯಕರಣಗಳಿಗೂ ಅಧಿಷ್ಠಾತೃದೇವತೆಗಳಿರುತ್ತಾರೆ. ಆದರೆ ಶರೀರದಲ್ಲಿರುವ ಈ ದೇವತೆಗಳಿಗೆ ಆಯಾ ಶರೀರದ ಜೀವನಂತೆ 'ಇದು ನನ್ನದು' ಎಂಬ ಅಭಿಮಾನವೇನೂ ಇರುವದಿಲ್ಲ. ಹೇಗೆ ಒಂದಾನೊಂದು ಗ್ರಾಮದ ಪಟೇಲನಿಗೆ, 'ಈ ಗ್ರಾಮವು ನನ್ನ ಅಧಿಕಾರಕ್ಕೆ ಸೇರಿದೆ' ಎಂಬ ಅಭಿಮಾನವಿದ್ದರೂ ಅಲ್ಲಿರುವ ಒಂದೊಂದು ಮನೆಯ ಭೋಗದಿಂದಾಗುವ ಸುಖದುಃಖಗಳೂ ಆಯಾ ಮನೆಯ ಒಡೆಯನಿಗೇ ಸೇರಿರುವವೋ, ಹಾಗೆಯೇ ಇಲ್ಲಿಯೂ ತಿಳಿಯಬೇಕು. ಇನ್ನು ಪ್ರಾಣಸಂವಾದದ ಕಥೆಯನ್ನು ಕಲ್ಪಿಸಿರುವದರ ಅಭಿಪ್ರಾಯ : ಈ ಶರೀರದಲ್ಲಿ ಎಲ್ಲಾ ಕರಣಗಳೂ ತಮ್ಮ ತಮ್ಮ ವ್ಯಾಪಾರವನ್ನು ಮಾಡುವದಕ್ಕೆ ಅವಶ್ಯವಾಗಿ ಬೇಕೇ ಆಗಿದ್ದರೂ ಪ್ರಾಣವು ಮಾತ್ರ ಎಲ್ಲಾ ಕಾರ್ಯಕರಣದ ವ್ಯಾಪಾರಕ್ಕೂ ಅತ್ಯವಶ್ಯವಾಗಿದೆ -ಎಂಬುದನ್ನು ತಿಳಿಸುವದಕ್ಕಾಗಿ ಈ ಸಂಭಾಷಣೆಯನ್ನು ಕಲ್ಪಿಸಿದೆಯೇ ಹೊರತು, ನಿಜವಾಗಿಯೂ ಈ ಸಂವಾದವು ಒಂದಾನೊಂದು ಕಾಲದಲ್ಲಿ ನಡೆಯಿತು -ಎಂಬ ಆಗ್ರಹವೇನೂ ಇಲ್ಲ. ಕಲ್ಪಿತ ಕಥೆಯ ರೂಪದಿಂದ ತತ್ತ್ವವನ್ನು ತಿಳಿಯಿಸುವದೊಂದು ಉಪನಿಷತ್ತುಗಳ ಶೈಲಿ ; ಅಷ್ಟೆ.

ಈಗ ಪಿಪ್ಪಲಾದನು ವರ್ಣಿಸಿರುವ ಪ್ರಾಣಸಂವಾದದ ಅಭಿಪ್ರಾಯವನ್ನು ಪರಿಶೀಲಿಸೋಣ. ಮೇಲೆ ಹೇಳಿದಂತೆ ಪ್ರತಿಯೊಂದು ದೇವತೆಗೂ ಇಲ್ಲಿ ಒಂದೊಂದು ಸ್ಥಾನವಿದೆ. ಇವುಗಳೊಳಗೆ ಯಾವದು ಹೆಚ್ಚಿನದೆಂಬುದು ಸಾಮಾನ್ಯರಿಗೆ ತಿಳಿಯಲಾರದು -ಎಂಬೀ ಅರ್ಥವನ್ನು ತಿಳಿಯಿಸಕೊಡುವದಕ್ಕಾಗಿ ಶ್ರುತಿಯು "ನಾನೇ ಈ ಸಂಘಾತವನ್ನು ಹಿಡಿದೆತ್ತಿರುವೆನು. ನನ್ನಿಂದಲೇ ಈ ಶರೀರೇಂದ್ರಿಯಸಂಘಾತವು ಹೀಗೆ ತನ್ನ ನಿಯತವ್ಯಾಪಾರವನ್ನು ಮಾಡುತ್ತಿದೆ" ಎಂದು ಒಂದೊಂದು ದೇವತೆಯೂ ಹೆಮ್ಮೆಯಿಂದ ಭಾವಿಸತೊಡಗಿತು -ಎಂದು ಹೇಳಿದೆ. ಗಣತಂತ್ರವಾಗಿರುವ ಯಾವದಾದರೊಂದು ರಾಷ್ಟ್ರದಲ್ಲಿ ಪ್ರತಿಯೊಬ್ಬ ಮಂತ್ರಿಯೂ ನನ್ನ ವಿಭಾಗವೇ ರಾಷ್ಟ್ರದ ಸ್ಥಿತಿಗೆ ಮುಖ್ಯವಾದದ್ದೂ

ಎಂದು ಅಭಿಮಾನಪಡುವಂತೆ, ಈ ದೇವತೆಗಳೊಳಗೆ ಒಂದೊಂದು ದೇವತೆಯೂ ಹೀಗೆ ಭಾವಿಸಿತೆಂದು ಕಲ್ಪಿಸಿರುತ್ತದೆ.

*ತಾನ್ ವರಿಷ್ಠಃ ಪ್ರಾಣ ಉವಾಚ। ಮಾ ಮೋಹಮಾಪದ್ಯಥಾಹ ಮೇವೈತತ್ ಪಞ್ಚಧಾತ್ಮಾನಂ ಪ್ರವಿಭಜ್ಯೈತದ್ ಬಾಣಮವಷ್ಟಭ್ಯ ವಿಧಾರಯಾಮೀತಿ ತೇऽಶ್ರದ್ದಧಾನಾ ಬಭೂವುಃ ॥೩॥*

೩. ಅವರನ್ನು ಕುರಿತು ಮುಖ್ಯಪ್ರಾಣನಿಂತೆಂದನು: 'ಮೋಹವನ್ನು ಹೊಂದದಿರಿ, ನಾನೇ ಹೀಗೆ ನನ್ನನ್ನು ಐದು ಬಗೆಯಿಂದ ವಿಂಗಡಿಸಿಕೊಂಡು ಈ ಬಾಣವನ್ನು ಎತ್ತಿನಿಲ್ಲಿಸಿ ಹಿಡಿದುಕೊಂಡಿರುವೆನು'. ಅವರು ಶ್ರದ್ಧೆಯನ್ನು ಮಾಡದವರಾದರು.

ನಿಜವಾಗಿ ಮುಖ್ಯಪ್ರಾಣನೇ ಈ ಶರೀರೇಂದ್ರಿಯಸಂಘಾತವನ್ನು ಹಿಡಿದು ನಿಲ್ಲಿಸಿಕೊಂಡಿರುವನೆಂಬುದು ಗೊತ್ತಾಗದೆ ಇರುವದರಿಂದ ಇವರು ಹೀಗೆ ಅಭಿಮಾನಪಡುತ್ತಿರುವರೆಂದು ತಿಳಿದು ಮುಖ್ಯಪ್ರಾಣನು "ಅಣ್ಣಗಳಿರ, ಇಲ್ಲದ ಅಭಿಮಾನವನ್ನೇಕೆ ಮಾಡಿಕೊಳ್ಳುವಿರಿ? ನಾನು ನನ್ನನ್ನೇ ಪ್ರಾಣಾಪಾನಾದಿಪ್ರಕಾರದಿಂದ ಐದು ಬಗೆಯಲ್ಲಿ ವಿಂಗಡಿಸಿಕೊಂಡು ಸಂಘಾತದ ಸರ್ವಕಾರ್ಯಗಳನ್ನೂ ಮಾಡುತ್ತಿರುವೆನು. ನಿಮ್ಮ ವ್ಯಾಪಾರವೆಂಬುದೆಲ್ಲ ನಿಜವಾಗಿ ನನ್ನದೇ. ಇದನ್ನೇಕೆ ಮನದಂದುಕೊಳ್ಳದೆ ಇರುವಿರಿ?, ಎಂದನು. ಲೋಕದಲ್ಲಿ ನಿಜವನ್ನು ಹೇಳಿದರೆ ಅಭಿಮಾನಿಗಳಾದ ಯಾರಿಗೂ ಆ ಮಾತಿನಲ್ಲಿ ಶ್ರದ್ಧೆಯುಂಟಾಗುವದಿಲ್ಲ. ಸಮುದ್ರವನ್ನು ಹಾರುವದಕ್ಕೆ ನಾವೆಲ್ಲರೂ ಶಕ್ತರೇ ಎಂದು ಅಭಿಮಾನಪಡುತ್ತಿದ್ದ ಕಪಿಗಳ ಸೇನೆಯಲ್ಲಿ ವಾಯುಪುತ್ರನಾದ ಹನುಮಂತನು ಇರುತ್ತಿದ್ದರೂ ಅವನೊಬ್ಬನೇ ಈ ಕಾರ್ಯಕ್ಕೆ ತಕ್ಕವನೆಂಬುದು ಸಮಯ ಬಂದಾಗಲಲ್ಲವೆ, ಅವರಿಗೆ ಮನವರಿಕೆಯಾಯಿತು? ಅವರಲ್ಲಿ ಕೆಲವರಿಗೆ ಹತ್ತು, ಇಪ್ಪತ್ತು, ಅಥವಾ ಮೂವತ್ತು ಯೋಜನಗಳನ್ನು ಹಾರುವ ಶಕ್ತಿಯೇನೋ ಇದ್ದಿತು; ಆದರೆ ಅಷ್ಟರಿಂದಲೇ ಒಬ್ಬೊಬ್ಬನಿಗೂ 'ನಾನೊಬ್ಬನೆ, ಸಾಕು, ಈ ಕಡಲನ್ನು ದಾಟುವದಕ್ಕೆ ಎಂಬ ಅಭಿಮಾನವು ಮೂಡಿಕೊಂಡಿತ್ತು! ಇಲ್ಲಿಯೂ ಹೀಗೆಯೇ, ಶರೀರ ಸಂಘಾತಕ್ಕೆ ಯಾರ ಆಧಾರವು ಅತ್ಯವಶ್ಯ?- ಎಂಬುದನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಹೊರತು ತಿಳಿಯುವಂತಿರಲಿಲ್ಲ.

*ಸೋऽಭಿಮಾನಾದೂರ್ಧ್ವಮುತ್ಕ್ರಾಮತ ಇವ ತಸ್ಮಿನ್ನುತ್ಕ್ರಾಮತ್ಯ-ಥೇತರೇ ಸರ್ವ ಏವೋತ್ಕ್ರಾಮನ್ತೇ ತಸ್ಮಿಗ್ಂಶ್ಚ ಪ್ರತಿಷ್ಠಮಾನೇ ಸರ್ವ ಏವ ಪ್ರಾತಿಷ್ಠನ್ತೇ। ತದ್ಯಥಾ ಮಕ್ಷಿಕಾ ಮಧುಕರರಾಜಾನಮುತ್ಕ್ರಾಮನ್ತಂ ಸರ್ವಾ*

***ಏವೋತ್ಕ್ರಾಮನ್ತೇ ತಸ್ಮಿಗ್‌ಂಶ್ಚ ಪ್ರತಿಷ್ಠಮಾನೇ ಸರ್ವಾ ಏವ ಪ್ರಾತಿಷ್ಠನ್ತ ಏವಂ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ ತೇ ಪ್ರೀತಾಃ ಪ್ರಾಣಂ ಸ್ತುನ್ವನ್ತಿ //೪//***

೪. ಅವನು ಅಭಿಮಾನದಿಂದ ಮೇಲಕ್ಕೆದ್ದಂತೆ ಮಾಡಿದನು. ಅವನು ಮೇಲಕ್ಕೆ ಎದ್ದನೊ ಇಲ್ಲವೊ, ಕೂಡಲೆ ಮಿಕ್ಕವರೆಲ್ಲರೂ ಎದ್ದರು; ಮತ್ತು ಅವನು ನಿಲ್ಲುತ್ತಲೂ, ಎಲ್ಲರೂ ನಿಂತರು. ಜೇನುನೊಣಗಳು ತಮ್ಮ ಅರಸನು ಮೇಲಕ್ಕೇಳುತ್ತಲೂ ಎಲ್ಲವೂ ಹೇಗೆ ಏಳುವವೋ ಮತ್ತು ಅದು ನಿಲ್ಲುತ್ತಲೂ ಎಲ್ಲವೂ ಹೇಗೆ ನಿಲ್ಲುವವೋ, ಹಾಗೇ ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ -ಇವರು (ಮಾಡಿದರು). ಅವರು ಪ್ರೀತರಾಗಿ ಪ್ರಾಣನನ್ನು (ಹೀಗೆ) ಸ್ತೋತ್ರ ಮಾಡಿದರು:

ಹೀಗೆ "ಇವನೇ ನಮ್ಮೊಳಗೆಲ್ಲ ಶ್ರೇಷ್ಠನೆ? ಇದು ಹೇಗಾದೀತು?" ಎಂದು ತನ್ನ ಮಾತನ್ನು ನಂಬಲಾರದೆ ಇರುವ ಅವರಿಗೆ ಮನದಟ್ಟುಮಾಡುವದಕ್ಕೋಸ್ಕರ ಮುಖ್ಯಪ್ರಾಣನು ಸಂಘಾತವನ್ನು ಬಿಟ್ಟು ಹೊರಕ್ಕೆ ಹೊರಟುಹೋಗುವವನಂತೆ ಪ್ರಯತ್ನವನ್ನು ಮಾಡಿದನೊ ಇಲ್ಲವೊ, ಅವನೊಡನೆ ಉಳಿದ ಮಿಕ್ಕ ಕರಣಗಳೆಲ್ಲವೂ ಹೊರಡಬೇಕಾಯಿತು. ಅವನು ನಿಂತಕೂಡಲೆ, ಎಲ್ಲವೂ ಹಾಗೆಯೇ ನಿಲುಗಡೆಯನ್ನು ಪಡೆದವು. ಇದರಿಂದ ಚಕ್ಷುರಾದಿಗಳ ವ್ಯಾಪಾರವೆಲ್ಲವೂ ಪ್ರಾಣನದೇ ಎಂದಾಯಿತು. ಬೇರೊಂದು ಶ್ರುತಿಯಲ್ಲಿ ಮುಖ್ಯಪ್ರಾಣದ ಶ್ರೇಷ್ಠತ್ವವನ್ನು ಹೀಗೆಂದು ತಿಳಿಸಿದೆ: ಒಂದೊಂದು ಇಂಧ್ರಿಯವು ಹೋದರೆ, ಅದರದರ ಕಾರ್ಯವು ಮಾತ್ರ ನಿಂತೀತೇ ಹೊರತು ಜೀವನು ಬದುಕಿರುವದಕ್ಕೇನೂ ಅಡ್ಡಿಯಾಗುವದಿಲ್ಲ. ಉದಾಹರಣೆಗೆ ವಾಗಿಂದ್ರಿಯವಿಲ್ಲದಿದ್ದರೆ ಮೂಕನಾಗಿ ಜೀವಿಸುತ್ತಾನೆ; ಚಕ್ಷುರಿಂದ್ರಿಯವಿಲ್ಲದಿದ್ದರೆ ಕುರುಡನಾಗಿ ಜೀವಿಸುತ್ತಾನೆ; ಶ್ರೋತ್ರೇಂದ್ರಿಯವಿಲ್ಲದಿದ್ದರೆ ಕಿವುಡನಾಗಿ ಜೀವಿಸುತ್ತಾನೆ, ಇತ್ಯಾದಿ. ಆದರೆ ಪ್ರಾಣವು ವ್ಯಾಪಾರವನ್ನು ಮಾಡದಿದ್ದರೆ ಸಂಘಾತವು ಬದುಕಿರುವದೇ ಆಗಲಾರದು; ಆಗ ಮಿಕ್ಕ ಇಂದ್ರಿಯಗಳಲ್ಲಿ ಯಾವದೊಂದೂ ಕೆಲಸಕ್ಕೆ ಬರುವಂತಿಲ್ಲ. ಆದರೆ ಪ್ರಕೃತವಾದ ಉಪನಿಷದ್ಭಾಗದಲ್ಲಿ ಒಂದೇ ಒಂದು ದೃಷ್ಟಾಂತದಿಂದ ಮುಖ್ಯಪ್ರಾಣದ ಶ್ರೇಷ್ಠತ್ವವನ್ನೇ ಅಲ್ಲದೆ, ಮಿಕ್ಕ ಇಂದ್ರಿಯಗಳೆಲ್ಲವೂ ಪ್ರಾಣಕ್ಕೆ ಅಧೀನವಾಗಿಯೇ ಜೀವಿಸಿಕೊಂಡು ತಮ್ಮ ತಮ್ಮ ವ್ಯಾಪಾರವನ್ನು ಮಾಡಬೇಕಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸಿರುತ್ತದೆ.

ಜೇನುಹುಟ್ಟಿಯಲ್ಲಿ ಒಟ್ಟುಗೂಡಿ ಕೆಲಸ ಮಾಡುತ್ತಿರುವ ಜೇನುನೊಣಗಳೆಲ್ಲವೂ ಬೇರೆಬೇರೆಯ ಹೂಗಳಿಂದ ತಾವು ತಂದಿರುವ ರಸವನ್ನು ಹುಟ್ಟಿಯಲ್ಲಿಟ್ಟು

ಒಟ್ಟುಗೂಡಿಸಿದ ಜೇನುತುಪ್ಪವನ್ನು ಸಿದ್ಧಗೊಳಿಸುತ್ತವೆಯಷ್ಟೆ? ಇಲ್ಲಿ ಜೇನುತುಪ್ಪದ ಸಜ್ಜುಗೊಳಿಸುವಿಕೆಯಲ್ಲಿ ಆ ಹುಳುಗಳು ಮಾಡುವ ಕಾರ್ಯವು ಯಾರ ಅಧೀನವಾಗಿದೆ?- ಎಂದು ಕೇಳಿದರೆ ಆ ಗುಂಪಿನಲ್ಲಿ ಪ್ರತಿಯೊಬ್ಬರಿಗೂ ಸೇರಿದ್ದೆಂದು ಹೇಳಬೇಕಾಗುವದು. ಏಕೆಂದರೆ ಯಾವದೊಂದು ಹುಳುವಿನ ಕಾರ್ಯವಿಲ್ಲದಿದ್ದರೂ ಜೇನುತುಪ್ಪವು ಏರ್ಪಡದು. ಹೀಗಿದ್ದರೂ ದೃಷ್ಟಾಂತದ ಆ ಹುಳುಗಳ ಕಾರ್ಯವು ಸ್ವತಂತ್ರವಾಗಿರುವದಿಲ್ಲ. ಏಕೆಂದರೆ ಅಲ್ಲಿ ಒಂದೊಂದು ಹುಳುವೂ ತಾನು ತಾನೇ ತನ್ನ ತನ್ನ ಇಚ್ಛೆ ಬಂದ ಕಡೆಗೆ ಹಾರಿಹೋಗುತ್ತಲೂ ಬರುತ್ತಲೂ ಇರುವದಿಲ್ಲ. ಮುಖ್ಯವಾಗಿ ಅವುಗಳಿಗೆಲ್ಲ ಅರಸನಾದ* ಒಂದು ಜೇನುಹುಳುವಿರುತ್ತದೆ. ಅದು ಎದ್ದರೆ ಎಲ್ಲವೂ ಅದರೊಡನೆ ಒಗ್ಗಟ್ಟಿನಲ್ಲಿ ಹಾರಿ ಅದು ಎತ್ತ ಸರಿದರೆ ಅತ್ತ ಸರಿಯುತ್ತವೆ. ಅವಕ್ಕೆ ಸ್ವತಂತ್ರವಾದ ಗತಿಯಿಲ್ಲ. ಆ ಜೇನುಗಳರಸನು ಸುಮ್ಮನೆ ಕುಳಿತಿದ್ದರೆ ಮಿಕ್ಕವುಗಳೂ ಕುಳಿತುಕೊಂಡುಬಿಡುತ್ತವೆ. ಇದರಂತೆಯೇ ಪ್ರಾಣವು ಶರೀರವನ್ನು ಬಿಟ್ಟು ಹೊರಟರೆ, ಮಿಕ್ಕ ಇಂದ್ರಿಯಗಳೆಲ್ಲವೂ ಶರೀರವನ್ನು ಬಿಟ್ಟು ಪ್ರಾಣದ ಜೊತೆಯಲ್ಲಿಯೇ ಹೋಗುತ್ತವೆ; ಪ್ರಾಣವು ಶರೀರದಲ್ಲಿ ನಿಂತಿರುವವರೆಗೂ ಅವೂ ಅಲ್ಲಿಯೇ ಇದ್ದು ತಮ್ಮ ತಮ್ಮ ಕಾರ್ಯವನ್ನು ಮಾಡುತ್ತಿರುವವು. ಹೀಗಿರುವದರಿಂದ ಮುಖ್ಯಪ್ರಾಣನೇ ಮಿಕ್ಕ ಕರಣಗಳೆಲ್ಲಕ್ಕೂ ಒಡೆಯನು, ಶರೀರ ಧಾರಣೆಗೆ ಮುಖ್ಯಪ್ರಾಣನಿಲ್ಲದಿದ್ದರೆ ಆಗುವದೇ ಇಲ್ಲ - ಎಂದು ಸಿದ್ಧವಾಯಿತು.

ಇನ್ನೊಂದು ವಿಷಯ. ಸಂಸ್ಕೃತದಲ್ಲಿ ಮುಖ್ಯಪ್ರಾಣಕ್ಕೂ ಮಿಕ್ಕ ಕರಣಗಳಿಗೂ **'ಪ್ರಾಣಗಳು'** ಎಂದೇ ಹೆಸರಿರುತ್ತದೆ. ಜೀವನಿಗೆ 'ಪ್ರಾಣಿ' (ಎಂದರೆ ಪ್ರಾಣಗಳನ್ನು ಧರಿಸಿರುವಾತನು) ಎಂದೂ ಹೆಸರುಂಟು. ಅವುಗಳ ಈ ಹೆಸರಿಗೆ ಕಾರಣವೇನೆಂದರೆ, ಮಿಕ್ಕ ಕರಣಗಳೆಲ್ಲಕ್ಕೂ ಪ್ರಾಣನ ಅಧೀನವಾಗಿಯೇ ವ್ಯಾಪಾರವಿರುತ್ತದೆಯೇ ಹೊರತು ಸ್ವತಂತ್ರವಾಗಿ ವ್ಯಾಪಾರವಿರುವದಿಲ್ಲ. ಆದರೆ ಇಂದ್ರಿಯಗಳೆಂದರೆ ಪ್ರಾಣದ ವೃತ್ತಿಭೇದಗಳೇ ಎಂದು ತಿಳಿಯಬಾರದು. ಏಕೆಂದರೆ ಅವಕ್ಕೆಲ್ಲ ಬೇರೆಬೇರೆಯ ಅಸಾಧಾರಣವಿಷಯಗಳುಂಟು. ಮತ್ತು ಸ್ಮೃತಿಯಲ್ಲಿ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಅಂತಃಕರಣವೆಂಬ ಒಳಗಿನ ಇಂದ್ರಿಯವೊಂದು -

---

*. ರಾಣಿಜೇನು, ಗಂಡುಸೋಮಾರಿ ಜೇನುಗಳು, ಕೆಲಸಮಾಡುವ ಜೇನು- ಎಂಬ ಜೇನುಹುಳುಗಳಲ್ಲಿ ಮೂರು ಬಗೆಯಿರುತ್ತವೆ - ಎಂದು ಈಗಿನ ನಿರೀಕ್ಷಕರು **ಹೇಳುತ್ತಾರೆ.** ಶ್ರುತಿವಾಕ್ಯದಲ್ಲಿ ಜೇನುಗಳ ರಾಜನೆಂಬ ಶಬ್ದವೇ ಇರುವದರಿಂದ ಅದರಂತೆಯೇ ಇಲ್ಲಿ ವಿವರವನ್ನು ಬರೆದಿದೆ - ಎಂದು ತಿಳಿಯಬೇಕು.

ಹೀಗೆ ಹನ್ನೊಂದಕ್ಕೆ ಇಂದ್ರಿಯಗಳು ಎಂಬ ಬೇರೊಂದು ಹೆಸರನ್ನು ಕೊಟ್ಟಿದೆ. ಇಂದ್ರಿಯಗಳು ಹೀಗೆ ಬೇರೊಂದು ತತ್ತ್ವವೇ ಆಗಿದ್ದರೂ ಅವು ಮುಖ್ಯಪ್ರಾಣಕ್ಕೆ ಅಧೀನವಾಗಿರುವವೆಂಬುದಕ್ಕೆ ಮಾತ್ರ ಯಾವ ಪ್ರತಿಷೇಧವೂ ಇಲ್ಲ.

## ಮುಖ್ಯಪ್ರಾಣನ ಸ್ತುತಿ

*ಏಷೋಽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುಃ । ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್ ॥೫॥*

೫. ಈತನು ಅಗ್ನಿಯಾಗಿ ಸುಡುತ್ತಾನೆ ; ಈತನೇ ಸೂರ್ಯನು; ಈತನೇ ಪರ್ಜನ್ಯನು, ಇಂದ್ರನು ; ಈತನೇ ವಾಯು; ಈತನು ಪೃಥಿವಿ, ರಯಿ, ದೇವನು, ಸತ್ತೂ ಅಸತ್ತೂ; ಮತ್ತು ಅಮೃತವೆಂಬುದೂ ಈತನೇ.

ಮುಖ್ಯಪ್ರಾಣನನ್ನು ಇಂದ್ರಿಯಾಭಿಮಾನಿಗಳು ಹೊಗಳಿದ ರೀತಿಯನ್ನು ಮುಂದಿನ ಏಳು ವಾಕ್ಯಗಳಲ್ಲಿ ಕೊಟ್ಟಿರುತ್ತದೆ. ಪ್ರಾಣನನ್ನು ಹೊಗಳುವದೆಂದರೆ ಅವನಲ್ಲಿಲ್ಲದ ಗುಣಗಳನ್ನು ಆರೋಪಿಸಿ ಹೇಳುವದಲ್ಲ; ಇದ್ದ ಮಹಿಮೆಯನ್ನೇ ವಿಸ್ತರಿಸಿ ತಿಳಿಸುವದು.

ಪ್ರಾಣನು ಸರ್ವಾತ್ಮಕನಾಗಿರುತ್ತಾನೆ. ಆದ್ದರಿಂದಲೇ ಅವನು ಎಲ್ಲಾ ಇಂದ್ರಿಯಗಳನ್ನೂ ವ್ಯಾಪಿಸಿಕೊಂಡಿರುತ್ತಾನಾಗಿ ಅವನ ನೆರವಿಲ್ಲದೆ ಯಾವ ಇಂದ್ರಿಯವೂ ತನ್ನ ವ್ಯಾಪಾರವನ್ನು ಮಾಡಲಾರದೆ ಇರುತ್ತದೆ. ಇದನ್ನು ಈಗ ಮಂತ್ರಗಳ ಮೂಲಕವಾಗಿ ವಿವರಿಸಲಾಗುತ್ತಿದೆ. ಅಧ್ಯಾತ್ಮವಾಗಿ ಪ್ರಾಣನು ವಾಗಿಂದ್ರಿಯಕ್ಕೆ ಅಧಿದೇವತೆಯಾಗಿರುವಂತೆ, ಅಧಿದೈವತವಾಗಿ ಇವನೇ ಅಗ್ನಿಯಾಗಿರುತ್ತಾನೆ. ಉಷ್ಣವಾಗಿರುವ ಬೆಂಕಿ ಮುಂತಾದವುಗಳು ಕಟ್ಟಿಗೆ ಮುಂತಾದವುಗಳನ್ನು ಸುಡುವ ಶಕ್ತಿಯು ಈ ಪ್ರಾಣನದೇ. ಹೀಗೆಯೇ ಈತನು ಅಧ್ಯಾತ್ಮವಾಗಿ ಚಕ್ಷುರಿಂದ್ರಿಯಕ್ಕೆ ನೋಡುವ ಶಕ್ತಿಯನ್ನು ಕೊಟ್ಟಿರುವಂತೆ, ಅಧಿದೈವವಾಗಿ ಸೂರ್ಯನಿಗೆ ಲೋಕಕ್ಕೆಲ್ಲ ಬೆಳಕನ್ನು ಕೊಟ್ಟು ಕಾಪಾಡುತ್ತಿರುತ್ತಾನೆ. ಆ ಬೆಳಕಿನ ಸಹಾಯದಿಂದ ಪ್ರಾಣಿಗಳು ವಸ್ತುಗಳನ್ನು ನೋಡುತ್ತಿರುತ್ತವೆ. ಇದರಂತೆ ಪರ್ಜನ್ಯನಾಗಿ ಈತನೇ ಮಳೆಯನ್ನು ಕರೆಯುತ್ತಿರುತ್ತಾನೆ; ಆ ಮಳೆಯಿಂದಲೇ ಪ್ರಾಣಿಗಳಿಗೆ ಆಹಾರಪದಾರ್ಥಗಳು ದೊರೆಯುವವು. ಈತನೇ ಮಘವಂತನೆಂಬ ಹೆಸರಿನ ಇಂದ್ರನಾಗಿ ದೇವತೆಗಳನ್ನು ಕಾಪಾಡುತ್ತಾನೆ, ಅಸುರರನ್ನು ರಕ್ಕಸರನ್ನು ಒಕ್ಕಲಿಕ್ಕಿ ಅಂಜಿಕೆಯಿಂದ ತಪ್ಪಿಸುತ್ತಾನೆ.

ಈತನೇ ಆವಹ, ಪ್ರವಹ, ಉದ್ವಹ, ಸಂವಹ, ವಿವಹ, ಪರಿವಹ, ಪರಾವಹ-ಎಂಬ ಹೆಸರಿನಿಂದ **ವಾಯುವಾಗಿ** ನಮ್ಮ ಕಡೆಗೆ, ನಮ್ಮಿಂದ ಮುಂದಕ್ಕೆ, ಮೇಲಕ್ಕೆ, ಬಲಕ್ಕೆ, ಎಡಕ್ಕೆ, ಸುತ್ತಲೂ, ಎಲ್ಲಾ ಕಡೆಗೂ ಬೀಸುವ ಗಾಳಿಗೆ ಅನುಗ್ರಹವನ್ನು ಮಾಡುತ್ತಾನೆ. ಇದಲ್ಲದೆ ಈತನೇ ಪೃಥಿವಿಯಾಗಿ ಸಮಸ್ತಭೂತಗಳಿಗೂ ಆಶ್ರಯನಾಗಿರುತ್ತಾನೆ, ರಯಿ ಎಂದರೆ ಅನ್ನವಾಗಿ ಎಲ್ಲರಿಗೂ ಪೋಷಕನಾಗಿರುವವನು, ಸರ್ವಜಗತ್ತಿಗೂ ದೇವನಾಗಿರುವವನೂ ಈತನೇ. **ಸದಸತ್ತುಗಳು** ಎಂದರೆ ಮೂರ್ತಾಮೂರ್ತವಸ್ತುಗಳೂ ದೇವತೆಗಳ ಜೀವನಕ್ಕೆ ಆಧಾರವಾಗಿರುವ **ಅಮೃತವೂ** ಈತನೇ.

***ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್ । ಋಚೋ ಯಜೂಂಷಿ ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ ॥೬॥***

೬. ಬಂಡಿಯಚಕ್ರದ ಗುಂಬದಲ್ಲಿ ಹಾರೆಕೋಲುಗಳು (ಬಂದು ಸೇರಿಕೊಂಡಿರುವಂತೆ) ಪ್ರಾಣನಲ್ಲಿ ಎಲ್ಲವೂ ಬಂದು ಸೇರಿಕೊಂಡಿರುತ್ತದೆ. ಋಕ್ಕುಗಳು, ಯಜುಸ್ಸುಗಳು, ಸಾಮಗಳು ಯಜ್ಞ, ಕ್ಷತ್ರ, ಬ್ರಹ್ಮ - ಈತನಲ್ಲಿಯೇ ಬಂದು ಸೇರಿಕೊಂಡಿವೆ.

ಈ ಸರ್ವಾತ್ಮಕನೆಂಬುದನ್ನು ಮನಗಾಣಿಸುವದಕ್ಕೆ ಈತನು ಅಗ್ನಿ, ಸೂರ್ಯ ಮುಂತಾದ ದೇವತೆಗಳ ರೂಪದಲ್ಲಿರುತ್ತಾನೆಂದು ಒಂದೊಂದಾಗಿ ಬಿಡಿಸಿ ಹೇಳಿದರೆ ಸಾಲದು. ಮುಂದೆ ಆರನೆಯ ಪ್ರಶ್ನೆಯಲ್ಲಿ ಹೇಳಿರುವ ಶ್ರದ್ಧೆ ಮೊದಲಾಗಿ ನಾಮದವರೆಗಿನ ಹದಿನಾರು **ಕಲೆಗಳೂ** ಜಗತ್ತಿನ ಸ್ಥಿತಿಯಕಾಲದಲ್ಲಿ ಈ ಪ್ರಾಣನನ್ನು ಅವಲಂಬಿಸಿಯೇ ಇದ್ದುಕೊಂಡಿರುತ್ತವೆ. ಬಂಡಿಯಗಾಲಿಯ ಹಳಿಯಿಂದ ಮೊದಲಾಗಿ ಗುಂಬದವರೆಗೆ ಬಂದಿರುವ ಪ್ರತಿಯೊಂದು ಹಾರೆಕೋಲೂ ಹೇಗೆ ಗುಂಬಕ್ಕೆ ಸೇರಿಕೊಂಡೇ ನಿಂತಿರುವದೋ ಹಾಗೆ ಎಲ್ಲವೂ ಪ್ರಾಣನ ಆಧಾರದಿಂದಲೆ ನಿಂತುಕೊಂಡಿರುತ್ತದೆ. ಈ ಜಗತ್ತೆಲ್ಲವೂ **ಯಜ್ಞದ** ಕಾರ್ಯವೆಂದು ವೇದದ ಬ್ರಾಹ್ಮಣಗಳಲ್ಲಿ ವರ್ಣಿಸಿರುತ್ತದೆ. ಆ ಯಜ್ಞಕ್ಕೆ **ಋಕ್ಕು, ಯಜುಸ್ಸು, ಸಾಮ** - ಎಂಬ ಮೂರು ಬಗೆಯ ಮಂತ್ರಗಳು ಬೇಕಾಗುವವು; ಶುಭಕರ್ಮವನ್ನು ಮಾಡುವ **ಬ್ರಾಹ್ಮಣ್ಯವೂ**, ಬ್ರಾಹ್ಮಣ್ಯವನ್ನೂ ಮಿಕ್ಕ ಎಲ್ಲವನ್ನೂ ಕಾಪಾಡುವ **ಕ್ಷತ್ರಜಾತಿಯೂ** ಅವುಗಳನ್ನವಲಂಬಿಸಿರುವ **ಯಜ್ಞವೂ** ಯಜ್ಞಕ್ಕೆ ಬೇಕಾದ **ಋಗಾದಿಗಳೂ** ಈ ಪ್ರಾಣನನ್ನಾಶ್ರಯಿಸಿಯೇ ನಿಂತಿರುತ್ತವೆ; ಎಂದರೆ ಇಡಿಯ ಜಗತ್ತಿನ ಸ್ಥಿತಿಯು ಈ ಪ್ರಾಣನ ಅವಲಂಬನೆಯಿಂದ ಸಾಗಿರುತ್ತದೆ.

***ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ। ತುಭ್ಯಂ ಪ್ರಾಣ ಪ್ರಜಾಸ್ತ್ವಿಮಾ ಬಲಿಂ ಹರನ್ತಿ ಯಃ ಪ್ರಾಣೈಃ ಪ್ರತಿತಿಷ್ಠಸಿ ॥ ೭ ॥***

೭. ಎಲೈ ಪ್ರಾಣನೆ, ನೀನೇ ಪ್ರಜಾಪತಿಯಾಗಿ ಗರ್ಭದಲ್ಲಿ ಸಂಚರಿಸುತ್ತಿರುವೆ, ನೀನೇ ಪ್ರತಿಯಾಗಿ ಹುಟ್ಟುತ್ತಿರುವೆ. ಪ್ರಾಣಗಳೊಡನೆ ನಿಂತಿರುವೆಯಲ್ಲ, ಆ ಪ್ರಾಣನಾದ ನಿನಗೇ ಈ ಪ್ರಜೆಗಳು ಕಾಣಿಕೆಯನ್ನು ಒಪ್ಪಿಸುತ್ತಿರುವರು.

ಎಲೈ ಪ್ರಾಣನೆ, ನೀನೇ ಪ್ರಜಾಪತಿಯಾಗಿರುವದರಿಂದ ಸರ್ವರಿಗೂ ಮೊದಲೇ ಮಾತಾಪಿತೃವಾಗಿರುತ್ತೀಯೆ. ಈ ಲೋಕದಲ್ಲಿ ತಾಯಿಯ ಗರ್ಭದಲ್ಲಿ ತೋರಿಕೊಳ್ಳುವವನೂ ನೀನೇ, ತಾಯಿತಂದೆಗಳಿಗೆ ಅನುರೂಪವಾದ ದೇಹವನ್ನು ತೆಗೆದುಕೊಂಡು ಹುಟ್ಟುವ ಮಗುವೂ ನೀನೇ. ಬೇರೆಬೇರೆಯ ಆಕೃತಿಯಿಂದ ಕಾಣುವ ಪ್ರಾಣಿಗಳು ಎಷ್ಟೇ ಭಿನ್ನವಾಗಿರಲಿ, ನಿಜವಾಗಿ ಅವೆಲ್ಲ ಪ್ರಾಣನಾದ ನೀನೇ ಹೊರತು, ನಿನಗಿಂತ ಬೇರೆಯಾಗಿ ಯಾವದೊಂದೂ ಇರುವದಿಲ್ಲ. ದೇಹದಲ್ಲಿ ಮನುಷ್ಯರೇ ಮುಂತಾದ ಪ್ರಾಣಿಗಳೂ ಇಂದ್ರಿಯಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಎಂಬ ಕಾಣಿಕೆಯನ್ನು ತಂದೊಪ್ಪಿಸುತ್ತಿರುವದು ನಿನಗೇ. ಆ ಚಕ್ಷುರಾದಿಪ್ರಾಣಗಳೊಡನೆ ಎಲ್ಲಾ ಪ್ರಾಣಿಗಳ ಶರೀರದಲ್ಲಿದ್ದುಕೊಂಡು ಸರ್ವವ್ಯಾಪಾರಗಳನ್ನೂ ನಡೆಯಿಸುತ್ತಿರುವವನು ನೀನಲ್ಲದೆ, ಬೇರೊಬ್ಬನಿಲ್ಲ; ಆದ್ದರಿಂದ ನಿನಗಲ್ಲದೆ ಈ ಕಾಣಿಕೆಯು ಮತ್ತೆ ಯಾರಿಗೆತಾನೆ ಸಲ್ಲತಕ್ಕದ್ದಾದೀತು? ನೀನೇ ಅಲ್ಲವೆ, ಎಲ್ಲಕ್ಕೂ ಭೋಕ್ತನು? ನಿನಗೇ ಎಲ್ಲವೂ ಭೋಜ್ಯವಾಗಿರುತ್ತದೆ.

***ದೇವಾನಾಮಸಿ ವಹ್ನಿತಮಃ ಪಿತೃಣಾಂ ಪ್ರಥಮಾ ಸ್ವಧಾ।***
***ಋಷೀಣಾಂ ಚರಿತಂ ಸತ್ಯಮಥರ್ವಾಙ್ಗಿರಸಾಮಸಿ ॥ ೮ ॥***

೮. ದೇವತೆಗಳ ಉತ್ತಮವಹ್ನಿಯಾಗಿರುವವನು ನೀನು; ಪಿತೃಗಳಿಗೆ ಮೊದಲನೆಯ ಸ್ವಧೆ ನೀನು; ಅಥರ್ವಾಂಗಿರಸ ಋಷಿಗಳಿಗೆ ಸತ್ಯವಾದ ನಡತೆಯಾಗಿರುವವನು ನೀನೇ.

ಪ್ರಾಣಿಗಳ ಹುಟ್ಟಿಗೆ, ಇರವಿಗೆ, ವ್ಯಾಪಾರಕ್ಕೆ- ಎಲ್ಲಕ್ಕೂ ಪ್ರಾಣನಾದ ನೀನೇ ಕಾರಣನಾಗಿರುವಂತೆ ದೇವತೆಗಳಿಗೆ ಹವಿಸ್ಸನ್ನು ಹೊತ್ತುಕೊಂಡುಹೋಗಿ ತಲುಪಿಸುವ ಉತ್ತಮವಹ್ನಿಯು ನೀನೇ; ವಹ್ನಿ, ಎಂದರೆ ಹೊರುವವನು. ಕ್ರಿಯಾಪ್ರಧಾನವಾದ ಪ್ರಾಣನ ನೆರವಿಲ್ಲದೆ ವಹ್ನಿಯು ಹೇಗೆತಾನೆ ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡು ಹೋಗಿ ಕೊಟ್ಟಾನು? ದೇವತೆಗಳಿಗೆ ಕೊಡುವ ಹೋಮಕ್ಕಿಂತ ಮುಂಚೆಯೇ

ನಾಂದೀಮುಖಶ್ರಾದ್ಧದಲ್ಲಿ ಸ್ವಧೆ ಎಂಬ ಅನ್ನವನ್ನು ಪಿತೃಗಳಿಗೆ ಕೊಡುತ್ತಾರಲ್ಲವೆ? ಆ ಸ್ವಧೆಯನ್ನು ಪಿತೃಗಳಿಗೆ ತಲುಪಿಸುವವನೂ ನೀನೇ ಮತ್ತು ಶರೀರದಲ್ಲಿರುವ ಋಷಿಗಳೆಂದರೆ ಚಕ್ಷುರಾದೀಂದ್ರಿಯಗಳು, ಅವು ತಪ್ಪದೆ ದೇಹಧಾರಣೆಯನ್ನು ಮಾಡುವದೇ ಮುಂತಾದ ಕಾರ್ಯವನ್ನು ಮಾಡುತ್ತಿರುವವಷ್ಟೆ? ಆ ಕಾರ್ಯವು ನಿನ್ನದೇ. ಮುಖ್ಯಪ್ರಾಣನಾದ ನಿನ್ನ ನೆರವಿಲ್ಲದೆ ಇದ್ದರೆ ಈ ಚಕ್ಷುರಾದಿಋಷಿಗಳು ಹೇಗೆತಾನೆ ಸ್ವಲ್ಪವೂ ತಪ್ಪದೆ ತಮ್ಮತಮ್ಮ ಕಾರ್ಯದಲ್ಲಿ ನಿರತರಾಗಿದ್ದಾರು?

***ಇನ್ದ್ರಸ್ತ್ವಂ ಪ್ರಾಣ ತೇಜಸಾ ರುದ್ರೋऽಸಿ ಪರಿರಕ್ಷಿತಾ। ತ್ವಮನ್ತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥೯॥***

೯. ಪ್ರಾಣನೆ, ನೀನು ಇಂದ್ರನು, ತೇಜಸ್ಸಿನಿಂದ ರುದ್ರನಾಗಿರುವೆ ! ನೀನೇ ಕಾಪಾಡುವವನು. ಸೂರ್ಯನಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಿರುವವನು ನೀನೇ. ಜ್ಯೋತಿಗಳಿಗೆಲ್ಲ ಒಡೆಯನು ನೀನೇ.

ಪ್ರಾಣನೆ, ನೀನೇ ಇಂದ್ರನು, ಪರಮೇಶ್ವರನು. 'ಇದಿ ಪರಮೈಶ್ವರ್ಯೇ' - ಎಂಬ ಧಾತುವಿನಿಂದ ಇಂದ್ರಶಬ್ದವು ಹುಟ್ಟಿರುತ್ತದೆ. ಎಲ್ಲಕ್ಕೂ ಸೃಷ್ಟಿಕರ್ತನು ಪ್ರಾಣನೇ, ಮಹಾವೀರ್ಯದಿಂದ ಜಗತ್ತನ್ನು ಸಂಹಾರಮಾಡುವ ರುದ್ರನೂ ಪ್ರಾಣನಾದ ನೀನೇ, ಸ್ಥಿತಿಕಾಲದಲ್ಲಿ ಜಗತ್ತೆಲ್ಲವನ್ನೂ ಕಾಪಾಡುತ್ತಿರುವ ಸೌಮ್ಯ ರೂಪನಾದ ವಿಷ್ಣುವು ನೀನೇ. ಹುಟ್ಟುತ್ತಲೂ ಮುಳುಗುತ್ತಲೂ ಎಡೆಬಿಡದೆ ಅಂತರಿಕ್ಷದಲ್ಲಿ ಸಂಚರಿಸುತ್ತಾ ಲೋಕಕ್ಕೆಲ್ಲ ಅನುಗ್ರಹವನ್ನು ಮಾಡುತ್ತಿರುವ ಜ್ಯೋತಿಗಳ ಒಡೆಯನಾದ ಸೂರ್ಯನೂ ನೀನೇ, ನಕ್ಷತ್ರಗಳ ಒಡೆಯನಾದ ಚಂದ್ರನೂ ನೀನೇ.

***ಯದಾ ತ್ವಮಭಿವರ್ಷಸ್ಯಥೇಮಾಃ ಪ್ರಾಣತೇ ಪ್ರಜಾಃ। ಆನನ್ದರೂಪಾಸ್ತಿಷ್ಠನ್ತಿ ಕಾಮಾಯಾನ್ನಂ ಭವಿಷ್ಯತೀತಿ ॥೧೦॥***

೧೦. ನೀನು ಯಾವಾಗ ಮಳೆಗರೆಯುವೆಯೋ ಆಗ ಈ ಪ್ರಜೆಗಳು ಬದುಕಿರುವರು, ಈ ನಿನ್ನ ಪ್ರಜೆಗಳು 'ನಮಗೆ ಬೇಕಾದಷ್ಟು ಅನ್ನವು ದೊರಕುವದು' ಎಂದು ಆನಂದರೂಪರಾಗಿರುತ್ತಾರೆ.

ಪ್ರಾಣನಾದ ನೀನೇ ಪರ್ಜನ್ಯನಾಗಿ ಮಳೆಯನ್ನು ಕರೆಯುತ್ತಿರುವೆಯಷ್ಟೆ? ಅದರಿಂದ ಎಲ್ಲಾ ಪ್ರಾಣಿಗಳೂ ಬದುಕಿರುತ್ತವೆ. ಆತ್ಮರೂಪನಾಗಿದ್ದ ನೀನು ಕೊಡುವ ಅನ್ನದಿಂದ ಬದುಕಿರುವ ಈ ಪ್ರಾಣಿಗಳು, ನೀನು ಮಳೆಗರೆದಾಗ 'ಇನ್ನು ನಮಗೆ ಬೇಕಾದಷ್ಟು ಅನ್ನವು ದೊರಕುವದು' ಎಂದು ಹಿಗ್ಗುವರು!

**ವ್ರಾತ್ಯಸ್ತ್ವಂ ಪ್ರಾಣೈಕರ್ಷಿರತ್ತಾ ವಿಶ್ವಸ್ಯ ಸತ್ಪತಿಃ ।**
**ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ ॥೧೧॥**

೧೧. ಪ್ರಾಣನೆ, ನೀನು ವ್ರಾತ್ಯನು; ಏಕರ್ಷಿಯಾದ ಅತ್ತೃ; ವಿಶ್ವಕ್ಕೆ ಸತ್ಪತಿಯು; ನಾವು ಅನ್ನವನ್ನು ಕೊಡುವವರು; ಮಾತರಿಶ್ವನೆ, ನೀನು ನಮಗೆ ತಂದೆ.

ಪ್ರಾಣನೇ ಹಿರಣ್ಯಗರ್ಭನಾದ್ದರಿಂದ ಪರಮೇಶ್ವರನಿಂದ ಮೊದಲು ಹುಟ್ಟಿವಾತನು, ಅವನನ್ನು ಪರಮೇಶ್ವರನು ಮೊದಲು ಸೃಷ್ಟಿಮಾಡುವದರಿಂದಲೂ ಅವನಿಗೆ ಉಪನಯನಾದಿಸಂಸ್ಕಾರವನ್ನು ಮಾಡುವವರೂ ಯಾರೂ ಇಲ್ಲದಿರುವದರಿಂದಲೂ ಆತನು ಯಾವ ಸಂಸ್ಕಾರದ ಆವಶ್ಯಕತೆಯೂ ಇಲ್ಲದೆ ತಾನೇ ಪರಿಶುದ್ಧನಾಗಿರುವದರಿಂದಲೂ ಅವನು ವ್ರಾತ್ಯ. ವ್ರಾತ್ಯನೆಂಬ ಮಾತು ವೇದದಲ್ಲಿ ಯಾವ ಸಂಸ್ಕಾರವೂ ಬೇಕಿಲ್ಲದ ಪವಿತ್ರಾತ್ಮನಿಗೆ ಕೊಟ್ಟಿರತಕ್ಕದ್ದು. ಪ್ರಾಣನು ಹೀಗೆ ಸ್ವತಃಶುದ್ಧನಾಗಿರುತ್ತಾನೆ. ಅಥರ್ವವೇದವನ್ನು ಅಧ್ಯಯನಮಾಡುವವರು ಶಿರಸ್ಸಿನಲ್ಲಿ ಧಾರಣೆಮಾಡುವ ಏಕರ್ಷಿ ಎಂಬ ಅಗ್ನಿಯೂ ಅವನ ವಿಭೂತಿಯೇ. ಆ ಅಗ್ನಿಯು ಎಲ್ಲವನ್ನೂ ತಿನ್ನುವ ಅತ್ತೃವಾಗಿರುತ್ತಾನೆ. ಆ ಪ್ರಾಣನೇ ಈ ವಿಶ್ವಕ್ಕೆಲ್ಲ ಪತಿ, ಅಥವಾ ವಿಶ್ವವೆಲ್ಲಕ್ಕೂ ಉತ್ತಮನಾದ ಪತಿ. ಹೀಗೆಂದು ಹೊಗಳಿದ ಬಳಿಕ ಇಂದ್ರಿಯಗಳು ಮುಖ್ಯಪ್ರಾಣನನ್ನು ಕುರಿತು ಹೇಳುತ್ತವೆ, "ಎಲೈ ಪ್ರಾಣನೆ, ನಿನಗೆ ಅನ್ನವಾದ ಹವಿಸ್ಸನ್ನು ತಂದೊಪ್ಪಿಸುವವರು ನಾವು; ನೀನಾದರೋ ನಮಗೆಲ್ಲ ತಂದೆ".

## ಇಂದ್ರಿಯಗಳ ಪ್ರಾರ್ಥನೆ

***ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ । ಯಾ ಚ ಮನಸಿ ಸನ್ತತಾ ಶಿವಾಂ ತಾಂ ಕುರು ಮೋತ್ಕ್ರಮೀಃ ॥೧೨॥***

೧೨. ನಿನ್ನ ಯಾವ ಶರೀರವು ವಾಕ್ಕಿನಲ್ಲಿ ಇದ್ದುಕೊಂಡಿರುವದೋ, ಯಾವದು ಶ್ರೋತ್ರದಲ್ಲಿಯೂ, ಯಾವದು ಚಕ್ಷುಸ್ಸಿನಲ್ಲಿಯೂ, ಯಾವದು ಮನಸ್ಸಿನಲ್ಲಿಯೂ ಸಂತತವಾಗಿ ಇದ್ದುಕೊಂಡಿರುವದೋ ಅದನ್ನು ಮಂಗಲವಾಗಿ ಮಾಡು, ಮೇಲಕ್ಕೆದ್ದು ಹೋಗದಿರು.

ಹೀಗೆ ಪ್ರಾಣನನ್ನು ಬಗೆಬಗೆಯಾಗಿ ಸ್ತುತಿಸಿದ ಬಳಿಕ, ಆ ಇಂದ್ರಿಯಗಳು ಅವನನ್ನು ಇಂತು ಪ್ರಾರ್ಥಿಸಿಕೊಂಡವು. ಎಲೈ ಪ್ರಾಣದೇವನೆ, ವಾಕ್ಕು ಮೊದಲಾದ ಕರ್ಮೇಂದ್ರಿಯಗಳಲ್ಲಿಯೂ ಚಕ್ಷುಃಶ್ರೋತ್ರಗಳೇ ಮುಂತಾದ ಜ್ಞಾನೇಂದ್ರಿಯಗಳಲ್ಲಿಯೂ ನಿನ್ನ ಸ್ವರೂಪದ ಸಂನಿಧಿಯೇ ಇದ್ದುಕೊಂಡು ಅವುಗಳಿಗೆ ಆಯಾ ವ್ಯಾಪಾರವನ್ನು

ಮಾಡುವದಕ್ಕೆ ಸಾಧಕವಾಗಿರುತ್ತದೆ. ವಾಕ್ಕು ಮಾತನಾಡುವದಕ್ಕೂ ಪಾಣಿಯು ಹಿಡಿದುಕೊಳ್ಳುವದಕ್ಕೂ ಪಾದವು ನಡೆಯುವದಕ್ಕೂ ಪಾಯುವು ವಿಸರ್ಜನಮಾಡುವದಕ್ಕೂ ಕ್ರಿಯಾಪ್ರಧಾನನಾದ ನಿನ್ನ ಅನುಗ್ರಹವೇ ಕಾರಣವಾಗಿರುತ್ತದೆ. ನಿನ್ನ ಅನುಗ್ರಹವಿಲ್ಲದೆ ವಾಕ್ಕು ಎಂದಿಗೂ ಮಾತನಾಡುವದಕ್ಕೆ ಶಕ್ತವಾಗಲಾರದು. ಇದರಂತೆ ಚಕ್ಷುಸ್ಸು ನೋಡುವದಕ್ಕೂ ಶ್ರೋತ್ರವು ಕೇಳುವದಕ್ಕೂ ಘ್ರಾಣವು ಮೂಸುವದಕ್ಕೂ ತ್ವಕ್ಕು ಮುಟ್ಟುವದಕ್ಕೂ ಜಿಹ್ವೆಯು ಸವಿಯುವದಕ್ಕೂ ನಿನ್ನ ಅನುಗ್ರಹವೇ ಬೇಕು. ಮನಸ್ಸಿನಲ್ಲಿ ಆಗುತ್ತಿರುವ ಸಂಕಲ್ಪ, ವಿಕಲ್ಪ, ನಿಶ್ಚಯ, ಅನುಸಂಧಾನ, ಅಭಿಮಾನ- ಈ ಎಲ್ಲಾ ವೃತ್ತಿಗಳೂ ನಿನ್ನ ಅನುಗ್ರಹದಿಂದಲೇ ವ್ಯಾಪ್ತವಾಗಿರುತ್ತವೆ. ನಾವುನಾವೇ ಈ ನಮ್ಮ ವ್ಯಾಪಾರಗಳನ್ನು ಮಾಡುತ್ತಿರುವೆವೆಂದು ಈವರೆಗೂ ನಾವು ಹೆಮ್ಮೆಪಡುತ್ತಿದ್ದೆವು; ನಮ್ಮ ಒಬ್ಬೊಬ್ಬನ ಶಕ್ತಿಯಿಂದಲೇ ಈ ಒಟ್ಟು ಕಾರ್ಯಕರಣ ಸಂಘಾತವು ತನ್ನ ಸಕಲ ವ್ಯಾಪಾರಗಳನ್ನೂ ಮಾಡುತ್ತಾ ಇರುವದೆಂಬ ಭ್ರಾಂತಿಯು ನಮ್ಮಲ್ಲಿತ್ತು. ಈಗ ನಿನ್ನ ಮಹಿಮೆಯನ್ನು ಅರಿತುಕೊಂಡೆವು. ನಮ್ಮಗಳ ಬೇರೆಬೇರೆಯ ವ್ಯಾಪಾರವೆಂಬುದೆಲ್ಲವೂ ನಿನ್ನದೇ ಆಗಿದೆ. ನೀನಿರುವದರಿಂದಲೇ ನಮಗೆ ಈ ಮಂಗಲರೂಪವಿರುತ್ತದೆ; ನೀನು ನಮ್ಮನ್ನು ಬಿಟ್ಟು ಉತ್ಕ್ರಾಂತನಾದರೆ ನಾವೆಲ್ಲರೂ ಅಮಂಗಲ ರೂಪರಾಗಿಬಿಟ್ಟೇವು. ಆದ್ದರಿಂದ ದಯವಿಟ್ಟು ನಮ್ಮಲ್ಲಿಯೇ ಸಂನಿಹಿತನಾಗಿರು.

*ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಮ್ । ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ನ ಇತಿ ॥೧೩॥*

೧೩. ಇದೆಲ್ಲವೂ ಪ್ರಾಣನ ವಶದಲ್ಲಿರುವದು. ತ್ರಿದಿವದಲ್ಲಿ ಯಾವದು ಇರುವದೋ ಅದು ಪ್ರಾಣನ ವಶದಲ್ಲಿಯೇ ಇರುವದು. ತಾಯಿಯು ಪುತ್ರರನ್ನು ರಕ್ಷಿಸುವಂತೆ ನಮ್ಮನ್ನು ಕಾಪಾಡು. ಶ್ರೀಗಳನ್ನೂ ಪ್ರಜ್ಞೆಯನ್ನೂ ನಮಗೆ ಕೊಡು !

ಎಲೈ ಪ್ರಾಣನೆ, ಜಗತ್ತಿನಲ್ಲಿ ಏನೇನಿರುವದೋ, ಯಾವಯಾವದು ಇಲ್ಲಿ ಜೀವರುಗಳಿಗೆ ಉಪಭೋಗಕ್ಕೆ ಸಾಮಗ್ರಿಯೆನಿಸಿರುವದೋ, ಅದೆಲ್ಲವೂ ನಿನ್ನ ವಶದಲ್ಲಿಯೇ ಇರುತ್ತದೆ. ನಿನ್ನ ಅನುಗ್ರಹದಿಂದಲೇ ವಸ್ತುಗಳೆಲ್ಲವೂ ಪ್ರಾಣಿಗಳಿಗೆ ಉಪಭೋಗಕ್ಕೆ ಅನುಕೂಲಿಸುತ್ತಿವೆ. ಸ್ವರ್ಗದಲ್ಲಿಯೂ ದೇವತೆಗಳೇ ಮೊದಲಾದವರಿಗೆ ಯಾವಯಾವದು ಉಪಭೋಗ್ಯವಾಗಿರುತ್ತದೆಯೋ ಅದೂ ನಿನ್ನ ವಶದಲ್ಲಿಯೇ ಇರುವದು. ನಿನ್ನ ನಿಯಮಕ್ಕೆ ಒಳಪಡದೆ ಇರುವ ವಸ್ತುವೆಂಬುದೇ ಇಲ್ಲ. ತಾಯಿಯು ಮಕ್ಕಳಿಗೆ ಆಹಾರವನ್ನು ಕೊಟ್ಟು ಪೋಷಿಸುವಂತೆ, ನೀನು ನಮ್ಮನ್ನು

ಕಾಪಾಡಬೇಕು. ನಿನ್ನ ಅನುಗ್ರಹವಿಲ್ಲದಿದ್ದರೆ ನಾವು ಸೊರಗಿಹೋಗುವೆವು. ಬ್ರಾಹ್ಮಣರ ಮತ್ತು ಕ್ಷತ್ರಿಯರ ವಿದ್ಯಾಸಂಪತ್ತುಗಳೂ ಬಲಸಂಪತ್ತುಗಳೂ ನಿನ್ನ ಅನುಗ್ರಹದಿಂದಲೇ ದೊರಕಬೇಕಾಗಿದೆ. ಯಾವಯಾವದು, ಶ್ರೀಮಂತವೆನಿಸಿರುವದೋ ಯಾವ ಯಾವದು ಬಲಯುತವೆನಿಸಿರುವದೋ ಅದೆಲ್ಲವೂ ನೀನೀಯುತ್ತಿರುವ ಸೌಭಾಗ್ಯವೇ. ಮತ್ತು ಸಕಲರಿಗೂ ಪ್ರಜ್ಞೆಯು - ಅರಿವು ಇರುವದಕ್ಕೆ ಪ್ರಾಣನಾದ ನಿನ್ನ ಸಂನಿಧಿಯೇ ಅವಶ್ಯವಾಗಿರುತ್ತದೆ. ಪ್ರಾಣವಿದ್ದರೆ ಪ್ರಜ್ಞೆ; ಪ್ರಾಣವೇ ಪ್ರಜ್ಞೆ, ಪ್ರಜ್ಞೆಯೇ ಪ್ರಾಣ - ಎಂದರೂ ಸಲ್ಲುತ್ತದೆ. ಆದ್ದರಿಂದ ನಮ್ಮಗಳಿಗೆ ವೀರ್ಯಬಲಪ್ರಜ್ಞೆಗಳುಂಟಾಗುವಂತೆ ನಮ್ಮಗಳಲ್ಲೆಲ್ಲ ವ್ಯಾಪಿಸಿಕೊಂಡು ನಿನ್ನ ಸಂನಿಧಿಯಿಂದ ನಮ್ಮನ್ನು ಪೋಷಿಸುತ್ತಿರಬೇಕು - ಎಂದು ಇಂದ್ರಿಯಗಳು ಬೇಡಿಕೊಂಡವು.

ಇಲ್ಲಿಗೆ ಭಾರ್ಗವವೈದರ್ಭಿಯ ಎರಡನೆಯ ಪ್ರಶ್ನೆಗೆ ಪಿಪ್ಪಲಾದನು ಕೊಟ್ಟ ಉತ್ತರವು ಮುಗಿಯಿತು. ಈ ನಮ್ಮ ಶರೀರದಲ್ಲಿ ಆಕಾಶಾದಿ ಪಂಚಭೂತಗಳ ಮಹಿಮೆಯಿರುವದು ನಿಜ; ಇದರ ಕಾರ್ಯವು ಸಲೀಸಾಗಿ ನಡೆಯುವದಕ್ಕೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಮತ್ತು ಮನಸ್ಸಿನ ವ್ಯಾಪಾರವು ಅವಶ್ಯವೆಂಬುದೂ ನಿಜ. ಆದರೆ ಇವುಗಳೆಲ್ಲ ಹಣ್ಣಿನ ಸಿಪ್ಪೆಯಿದ್ದಂತೆ. ಇವುಗಳೊಳಗೆ ತಿರುಳಾಗಿರುವದು ಪ್ರಾಣನು. ಈ ಪ್ರಾಣನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವಾಗಿರುವ ಸರ್ವಕ್ಕೂ ಆತ್ಮನಾಗಿ ಶಕ್ತಿಯನ್ನು ಕೊಡುವವನಾಗಿರುತ್ತಾನೆ. ಒಂದೊಂದು ಇಂದ್ರಿಯದ ವ್ಯಾಪಾರವನ್ನು ನೋಡಿದರೆ ಅದ್ಭುತವಾಗಿ ಕಾಣಿಸುತ್ತಿರುತ್ತದೆ. ಕಣ್ಣು ಇದ್ದಲ್ಲಿದ್ದು ಎಷ್ಟೋ ದೂರವಿರುವ ವಸ್ತುವಿನ ರೂಪಭೇದಗಳನ್ನು ತಿಳಿಸಿಬಿಡುತ್ತದೆ. ಹೀಗೆಯೇ ಕಿವಿಯು ಎಷ್ಟು ವಿಚಿತ್ರವಾದ ರೀತಿಯಿಂದ ಶಬ್ದವಿಶೇಷಗಳನ್ನು ತಿಳಿಸಿಕೊಡುತ್ತದೆ! ಇದರಂತೆಯೇ ಮಿಕ್ಕ ಇಂದ್ರಿಯಗಳೂ ತಮ್ಮತಮ್ಮ ಕೆಲಸವನ್ನು ಮಾಡುವ ಬಗೆಯನ್ನು ನೋಡಿದರೆ ಯಾರಾದರೂ ಬೆರಗಾಗುವಂತೆ ಇರುತ್ತದೆ. ಆದರೆ ಇನ್ನೂ ಒಳಹೊಕ್ಕು ನೋಡಿದರೊ, ಈ ಎಲ್ಲಾ ಇಂದ್ರಿಯಗಳನ್ನೂ ವ್ಯಾಪಿಸಿಕೊಂಡಿರುವ ಶಕ್ತಿಯೊಂದು ಇದೆ. ಅದೇ ಪ್ರಾಣ. ಪ್ರಾಣವು ಒಂದೊಂದು ವ್ಯಕ್ತಿಗೂ ಒಂದೊಂದು ಇರುವದಿಲ್ಲ. ಒಂದೊಂದು ಇಂದ್ರಿಯಕ್ಕೆ ಬೇರೆಬೇರೆಯ ಶಕ್ತಿಯೂ ಇರುವದಿಲ್ಲ. ಸಕಲಪ್ರಾಣಿಗಳ ಸಕಲೇಂದ್ರಿಯಗಳಿಗೂ ಅನುಗ್ರಾಹಕವಾಗಿ ಪ್ರಾಣಿಗಳ ಚಲನವಲನಗಳನ್ನೂ ಅರಿವನ್ನೂ ಕೊಡುತ್ತಾ ಅವರನ್ನೂ 'ಕರ್ತೃಭೋಕ್ತೃಗಳು' ಎನಿಸಿರುವದೆಂದರೆ ಈ ಪ್ರಾಣವೇ. ಇದರ ಅನುಗ್ರಹದಿಂದಲೇ ನಮ್ಮೆಲ್ಲರ ಶರೀರಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಾ ಜೀವಿಸಿಕೊಂಡಿರುತ್ತವೆ - ಎಂದು ಸಿದ್ಧಾಂತವಾಯಿತು.

# ೪. ಮೂರನೆಯ ಪ್ರಶ್ನೆ : ಪ್ರಾಣನ ಮೂಲ

**ಅಥ ಹೈನಂ ಕೌಸಲ್ಯಶ್ಚಾಶ್ವಲಾಯನಃ ಪಪ್ರಚ್ಛ । ಭಗವನ್ ಕುತ ಏಷ ಪ್ರಾಣೋ ಜಾಯತೇ ಕಥಮಾಯಾತ್ಯಸ್ಮಿಞ್ಶರೀರ ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರಾತಿಷ್ಠತೇ ಕೇನೋತ್ಕ್ರಮತೇ ಕಥಂ ಬಾಹ್ಯಮಭಿಧತ್ತೇ ಕಥಮಧ್ಯಾತ್ಮಮಿತಿ ॥೧॥**

೧. ಆಮೇಲೆ ಈತನನ್ನು ಕೌಸಲ್ಯ ಆಶ್ವಲಾಯನನು ಹೀಗೆಂದು ಕೇಳಿದನು: ಭಗವಂತನೆ, ಈ ಪ್ರಾಣನು ಎತರಿಂದ ಹುಟ್ಟುವನು, ಈ ಶರೀರದೊಳಕ್ಕೆ ಹೇಗೆ ಬಂದನು? ತನ್ನನ್ನು ವಿಂಗಡಿಸಿಕೊಂಡು ಸಂಚರಿಸುತ್ತಿರುವದಾದರೂ ಹೇಗೆ? ಯಾವದರಿಂದ ಮೇಲಕ್ಕೇರಿ ಹೋಗುವನು? ಹೊರಗಿನದನ್ನು ಹೇಗೆ ತಡೆದಿಟ್ಟುಕೊಂಡಿರುವನು? ಒಳಗಿನದನ್ನು ಹೇಗೆ (ತಡೆದಿಟ್ಟುಕೊಂಡಿರುವನು)?

## ಪ್ರಾಣನ ಉತ್ಪತ್ತ್ಯಾದಿಗಳನ್ನು ಕುರಿತ ಪ್ರಶ್ನೆ

ಇದುವರೆಗೆ ಪ್ರಾಣನ ಹೆಚ್ಚುಗಾರಿಕೆಯನ್ನು ತಿಳಿದುಕೊಂಡದ್ದಾಯಿತು. ಪ್ರಾಣನ ಬೆಂಬಲವಿಲ್ಲದೆ ಯಾವ ಇಂದ್ರಿಯವೂ ತನ್ನ ವ್ಯಾಪಾರವನ್ನು ಮಾಡಲಾರದೆಂದು ಗೊತ್ತಾಯಿತು. ಆಧ್ಯಾತ್ಮಿಕವಾಗಿಯೂ ಆಧಿದೈವಿಕವಾಗಿಯೂ ಆಗುತ್ತಿರುವದೆಲ್ಲವೂ ಈ ಪ್ರಾಣನ ವ್ಯಾಪಾರವೇ ಎಂದು ನಿಶ್ಚಿತವಾಯಿತು. ಈಗ ಮೂರನೆಯ ಶಿಷ್ಯನಾದ ಕೌಸಲ್ಯಾಶ್ವಲಾಯನನು ಮತ್ತೊಂದು ಪ್ರಶ್ನೆಯನ್ನು ಹಾಕಿರುತ್ತಾನೆ.

ಈ ಪ್ರಾಣನು ಎತರಿಂದ ಹುಟ್ಟುತ್ತಾನೆ, ಈ ಶರೀರದೊಳಗೆ ಅವನ ಪ್ರವೇಶವು ಹೇಗಾಗುತ್ತದೆ? ಪ್ರಾಣದ ವ್ಯಾಪಾರಗಳು ಯಾವವು, ಹೇಗೆಹೇಗೆ ಅವು ಇಲ್ಲಿ ತೋರಿಕೊಳ್ಳುತ್ತಿರುತ್ತವೆ? ಇದು ಎಲ್ಲಕ್ಕೂ ಆಧಾರವಾಗಿರುವದೆಂದರೆ ಹೇಗೆ? ಪ್ರಾಣವು ಶರೀರವನ್ನು ಬಿಟ್ಟು ಹೋಗುವದೆಂದರೆ ಹೇಗೆ? ಇಂದ್ರಿಯಗಳು ಕಣ್ಣು ಮುಂತಾದ ಸ್ಥಾನಗಳಲ್ಲಿ ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಿದ್ದರೂ ಅವುಗಳ ಸ್ವರೂಪವನ್ನು ನಿಶ್ಚಯಿಸುವದೇ ಕಷ್ಟ. ಏಕೆಂದರೆ ಅವು ಅತೀಂದ್ರಿಯ, ಎಂದರೆ ಇಂದ್ರಿಯಗಳು ಇಂದ್ರಿಯಕ್ಕೆ ಗೋಚರವಾಗುವಂಥವಲ್ಲ. ಹೀಗಿರುವಲ್ಲಿ ಈ ಇಂದ್ರಿಯಗಳಿಗೂ ಆಶ್ರಯವಾಗಿದ್ದುಕೊಂಡು ಅವುಗಳ ವ್ಯಾಪಾರವನ್ನೆಲ್ಲ ತನ್ನ ವಶದಲ್ಲಿಟ್ಟುಕೊಂಡಿರುವ ಪ್ರಾಣನ ವಿಚಾರವನ್ನು ಸಾಮಾನ್ಯರು ಹೇಗೆತಾನೆ ಅರಿತುಕೊಳ್ಳಬಲ್ಲರು? ಆದರೂ ಪ್ರಾಣವು ಕೂಡ ಎಲ್ಲಿಂದಲೋ ಹುಟ್ಟಿ ಹೇಗೋ ಈ

ಶರೀರದೊಳಕ್ಕೆ ಹೊಕ್ಕಿರಬೇಕು. ಏಕೆಂದರೆ ಯಾವಯಾವದು ಸಂಹತವಾಗಿರುವದೋ-ಬೇರೆಬೇರೆಯ ಪದಾರ್ಥಗಳೊಡನೆ ಸೇರಿಕೊಂಡು ಕೆಲಸವನ್ನು ಮಾಡುತ್ತಿರುವದೋ-ಅದೆಲ್ಲವೂ ಕಾರ್ಯವೇ ಆಗಿರಬೇಕು. ಕಂಬ, ಇಟ್ಟಿಗೆ, ಗಾರೆ, ನೀರು-ಮುಂತಾದವುಗಳೆಲ್ಲ ಸೇರಿ ಮನೆಯೆಂಬ ಆಶ್ರಯಸ್ಥಾನವಾಗಿ ಮನುಷ್ಯನಿಗೆ ಪ್ರಯೋಜನವನ್ನುಂಟುಮಾಡುತ್ತಿರುತ್ತವೆ. ಅವೆಲ್ಲ ಹುಟ್ಟಿದ ವಸ್ತುಗಳು. ಈ ಪ್ರಾಣವೂ ಇಂದ್ರಿಯಗಳೊಡನೆ ಸೇರಿಕೊಂಡೇ ಜೀವನಿಗೆ ಪ್ರಯೋಜನವನ್ನುಂಟು ಮಾಡುವ ವ್ಯಾಪಾರವನ್ನು ಮಾಡುತ್ತಿರುವದು ಕಂಡುಬರುವದರಿಂದ ಇದೂ ಕಾರ್ಯವಾಗಿರಬೇಕು. ಏತರಿಂದಲೋ ಹುಟ್ಟಿರಬೇಕು. ಅದು ಏತರಿಂದ? - ಎಂಬುದೀಗ ಕೌಸಲ್ಯನ ಪ್ರಶ್ನೆ.

ಇಲ್ಲಿ ಕೌಸಲ್ಯನು ಪಿಪ್ಪಲಾದನನ್ನು 'ಭಗವಾನ್' (ಭಗವಂತನೆ) ಎಂದು ಕರೆದಿರುವದನ್ನು ಲಕ್ಷಿಸಬೇಕು. ಭಗವಂತನೆಂಬ ಶಬ್ದವನ್ನು ಸಂಸ್ಕೃತದಲ್ಲಿ ಪೂಜ್ಯನು ಎಂಬರ್ಥದಲ್ಲಿಯೇ ಪ್ರಯೋಗಿಸುತ್ತಿರುವದು ರೂಢಿಯಲ್ಲಿದ್ದರೂ ಅದರ ವ್ಯುತ್ಪತ್ತಿಯನ್ನು ನೋಡಿದರೆ ಅದರೊಳಗೆ ಒಂದಾನೊಂದು ವಿಶಿಷ್ಟಾರ್ಥವು ಅಡಗಿಕೊಂಡಿರುವದೆಂದು ತಿಳಿಯಬರುತ್ತದೆ. '**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್। ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥**'(ವಿ.ಪು. ೬-೫-೭೮). ಭೂತಗಳ ಉತ್ಪತ್ತಿ, ನಾಶ, ಬರುವಿಕೆ, ಹೋಗುವಿಕೆ, ವಿದ್ಯೆ, ಅವಿದ್ಯೆ- ಇವನ್ನು ಅರಿತಿರುವವನು ಭಗವಂತನೆನಿಸುವನು ಎಂದು ಪುರಾಣವಾಕ್ಯ. ಪ್ರಕೃತದಲ್ಲಿ ಸಾಮಾನ್ಯ ಜನರಿಗೆ ತಿಳಿಯದ ಪ್ರಾಣದ ಉತ್ಪತ್ತಿ, ಆಗತಿ, ಗತಿ- ಮುಂತಾದವುಗಳ ವಿಷಯವನ್ನು ಕುರಿತ ಪ್ರಶ್ನೆಯನ್ನು ಮಾಡಿರುವದರಿಂದ ಪಿಪ್ಪಲಾದನನ್ನು 'ಭಗವನ್' ಎಂದು ಸಂಬೋಧಿಸಿರುವದು ಬಹಳ ಯೋಗ್ಯವಾಗಿರುತ್ತದೆ.

ಪ್ರಾಣವು ಯಾವ ವೃತ್ತಿಯಿಂದ ಶರೀರದೊಳಕ್ಕೆ ಬರುತ್ತದೆ? ಇಲ್ಲಿಗೆ ಬರುವದಕ್ಕೆ ನಿಮಿತ್ತವೇನು? ಈ ಶರೀರದಲ್ಲಿ ಹೇಗೆ ಇದ್ದುಕೊಂಡಿರುತ್ತದೆ? ಹೋಗುವಾಗ ಯಾವ ವೃತ್ತಿಯಿಂದ ಹೋಗುವದು? ಹೊರಗಿರುವ ಅಧಿಭೂತ, ಅಧಿದೈವ - ಇವುಗಳನ್ನು ಧರಿಸಿರುವದು ಹೇಗೆ, ಶರೀರವನ್ನು ಧರಿಸಿರುವದು ಹೇಗೆ? -ಇದನ್ನೆಲ್ಲ ಹೇಳು ಎಂದು ಕೌಸಲ್ಯನು ಕೇಳಿರುತ್ತಾನೆ.

## ಉತ್ತರ : ಪ್ರಾಣನ ಹುಟ್ಟು ಮತ್ತು ಬರುವಿಕೆ

***ತಸ್ಮೈ ಸ ಹೋವಾಚಾತಿಪ್ರಶ್ನಾನ್ ಪೃಚ್ಛಸಿ ಬ್ರಹ್ಮಿಷ್ಠೋಽಸಿ ತಸ್ಮಾತ್ ತೇಽಹಂ ಬ್ರವೀಮಿ ॥೨॥***

**ಆತ್ಮನ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯೈತಸ್ಮಿನ್ನೇತದಾತತಂ ಮನೋಕೃತೇನಾಯಾತ್ಯಸ್ಮಿಞ್ಛರೀರೇ ॥೩॥**

೨-೩. ಅವನಿಗೆ ಆತನು ಹೇಳಿದನೇನೆಂದರೆ, ಅತಿಪ್ರಶ್ನೆಗಳನ್ನು ಕೇಳುತ್ತಿರುವೆ, ಬ್ರಹ್ಮನಿಷ್ಠನಾಗಿದ್ದೀಯೆ. ಆದ್ದರಿಂದ ನಿನಗೆ ನಾನು ಹೇಳುತ್ತೇನೆ. ಈ ಪ್ರಾಣನು ಆತ್ಮನಿಂದ ಹುಟ್ಟುತ್ತಾನೆ. ಮನುಷ್ಯನಲ್ಲಿ ನೆರಳುಂಟಾಗುವಂತೆ ಇವನಲ್ಲಿ ಇದು ಸೇರಿಕೊಂಡಿರುತ್ತದೆ. ಮನಸ್ಸಿನ ಕೃತ್ಯದಿಂದ ಇದು ಈ ಶರೀರದೊಳಕ್ಕೆ ಬರುತ್ತದೆ.

ಪ್ರಾಣನು ಹೇಗೆ ಹುಟ್ಟುತ್ತಾನೆ? -ಎಂದು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವ ಮೊದಲು ಪಿಪ್ಪಲಾದನು ಆಶ್ವಲಾಯನ ಕೌಸಲ್ಯನನ್ನು ಮೆಚ್ಚಿ ಕೊಂಡಾಡುತ್ತಿದಾನೆ. ಯಾವನ ತತ್ತ್ವವನ್ನು ಅರಿಯುವದೇ ಸಾಮಾನ್ಯರಿಗೆ ಅಸದಳವೋ ಅವನಿಗೂ ಜನ್ಮಾದಿಗಳು ಹೇಗಾಗುವವು? ಎಂದು ಕೇಳುತ್ತಿರುವೆಯಲ್ಲ! ಎಂಥ ಬ್ರಹ್ಮಜ್ಞಾನಿಯು ನೀನು ! ನನಗೆ ಇದರಿಂದ ಬಹಳ ಸಂತೋಷವಾಗುತ್ತದೆ. ಆದ್ದರಿಂದ ನಿನಗೆ ಅವಶ್ಯವಾಗಿ ಉತ್ತರವನ್ನು ಹೇಳಲೇಬೇಕು. ಯೋಗ್ಯನಾದ ಶಿಷ್ಯನಿಗಲ್ಲದಿದ್ದರೆ ಮತ್ತೆ ಯಾರಿಗೆ ಗುರುವು ಉತ್ತರವನ್ನು ಹೇಳಬೇಕು? -ಎಂದು ಪಿಪ್ಪಲಾದನು ಹೊಗಳಿರುತ್ತಾನೆ.

ಕೌಸಲ್ಯನು ಕೇಳಿದ ಪ್ರಶ್ನೆ ಕೇವಲ ಪ್ರಾಣದ ವಿಷಯವೊ, ಪ್ರಾಣೋಪಾಧಿಕನಾದ ಆತ್ಮನ ವಿಷಯವೊ? -ಎಂಬುದನ್ನು ಮೊದಲು ನಿರ್ಧರಿಸಿಕೊಳ್ಳಬೇಕು. ಏಕೆಂದರೆ ಹಿಂದಿನ ಪ್ರಶ್ನೆಯಲ್ಲಿ ಪ್ರಾಣನ ಮಹಿಮೆಯನ್ನು ಹೇಳಿರುವಾಗ ಬಾಹ್ಯಾಧ್ಯಾತ್ಮಿಕ ವ್ಯಾಪಾರಗಳೆಲ್ಲವೂ ಪ್ರಾಣನ ವಶವಾಗಿದೆ ಎಂದು ಹೊಗಳಿರುವದನ್ನು ನೋಡಿದರೆ, ಪ್ರಾಣಾತ್ಮನನ್ನು ಕುರಿತೇ ಇಲ್ಲಿ ಪ್ರಶ್ನೆಯನ್ನು ಮಾಡಿದೆ ಎನ್ನಬೇಕು. ಆದರೆ ಮುಂದೆ ಪ್ರಾಣಾಪಾನಾದಿವೃತ್ತಿಗಳನ್ನು ಕುರಿತು ಹೇಳುತ್ತಿರುವದರಿಂದ ಕೇವಲ ಉಪಾಧಿರೂಪವಾದ ಪ್ರಾಣವನ್ನೇ ವಿಚಾರಮಾಡಲಾಗುತ್ತಿದೆ- ಎಂಬ ಬುದ್ಧಿಯೂ ಬರಬಹುದಾಗಿರುತ್ತದೆ. ಈ ಸಂಶಯಕ್ಕೆ ನಿವಾರಣೆ ಹೇಗೆಂದರೆ, ಈ ಎರಡು ಪಕ್ಷಗಳೂ ಬೇರೆಬೇರೆಯಲ್ಲ; ಏಕೆಂದರೆ ವೇದಾಂತ ಸಿದ್ಧಾಂತದಲ್ಲಿ ಆತ್ಮನು ಒಬ್ಬನೇ, ಅದ್ವಿತೀಯನಾಗಿರುತ್ತಾನೆ. ಆದರೂ ಉಪಾಧಿನಿಮಿತ್ತದಿಂದ ಅವನಲ್ಲಿ ನಾನಾತ್ವವೂ ಆಗಿರುತ್ತದೆ. ಇಲ್ಲಿ ಬರಿಯ ಉಪಾಧಿಗಳ ನಾನಾತ್ವವನ್ನು ಹೇಳುವದರಿಂದ ಪ್ರಯೋಜನವೇನೂ ಇಲ್ಲ; ಏಕೆಂದರೆ ಉಪಾಧಿಗಳು ಅಚೇತನವಾಗಿರುವದರಿಂದ ಅವುಗಳಿಗೆ ಯಾವ ಪ್ರಾಮುಖ್ಯವನ್ನೂ ಕೊಡುವಂತಿಲ್ಲ. ಹೇಗೆ ಮಣ್ಣು ಒಂದೇ

ಆದರೂ ಮಡಕೆ, ಕುಡಿಕೆ, ಗಡಿಗೆ- ಎಂದು ಮುಂತಾದ ನಾಮರೂಪಗಳಿಂದಾಗಿರುವ ಉಪಾಧಿಗಳಿಂದ ಬೇರೆ ಬೇರೆಯ ಕಾರ್ಯಗಳಾಗುವದಲ್ಲದೆ, ಆಯಾ ಉಪಾಧಿಗಳಿಂದ ಕೂಡಿರುವ ಮಡಿಕೆ, ಕುಡಿಕೆ - ಮುಂತಾದವುಗಳ ಸುತ್ತುವಳೆಯದಲ್ಲಿ ಸಿಕ್ಕಿರುವಷ್ಟು ಆಕಾಶಕ್ಕೆ ಆಯಾ ಉಪಾಧಿಯಿಂದ ಇದು ದುರ್ಗಂಧಯುಕ್ತವಾದ ಪಾತ್ರೆಯಾದ್ದರಿಂದ ಇದರಲ್ಲಿ ನೀರುಹಾಕಬಾರದು, ಮತ್ತೊಂದು ಶುದ್ಧವಾಗಿರುವದರಿಂದ ಅದರಲ್ಲಿಡಬಹುದು- ಎಂದು ಮುಂತಾದ ಹೆಚ್ಚು ಕಡಿಮೆಗಳು ಹೇಗೆ ಅಧ್ಯಾರೋಪದಿಂದ ಆಕಾಶದಲ್ಲಿಯೂ ಉಂಟಾಗುವವೋ ಹಾಗೆಯೇ ಇಲ್ಲಿಯೂ ಪರಮಾತ್ಮನು ಒಬ್ಬನೇ ಅದ್ವಿತೀಯನೇ ಆಗಿರುತ್ತಿದ್ದರೂ ಅವನಲ್ಲಿ ಉತ್ತಮಮಧ್ಯಮವರ್ಗದ ಉಪಾಧಿಗಳಿಂದ ಆತ್ಮನಲ್ಲಿಯೇ ಆಯಾ ವ್ಯವಹಾರವು ಉಂಟಾಗುತ್ತದೆ. ಹೀಗಲ್ಲದಿದ್ದರೆ ಆತ್ಮನು ಒಬ್ಬನೇ ಆದರೂ ಅವನು 'ಸಂಸಾರಿ' ಎಂದು ಆಗಿರುವದು ಹೇಗೆ? ಜೀವನು ಒಬ್ಬನೇ ಆಗಿದ್ದರೂ ಬೇರೆಬೇರೆಯ ಉಪಾಧಿಯಲ್ಲಿರುವ ತಾದಾತ್ಮ್ಯಬುದ್ಧಿಯಿಂದ ಶಾರೀರಾತ್ಮ ಜೀವಾತ್ಮ ವಿಜ್ಞಾನಾತ್ಮ ಭೋಕ್ತ್ರಾತ್ಮ- ಎಂದು ಮುಂತಾಗಿ ಒಬ್ಬನಿಗೇ ಬೇರೆಬೇರೆಯ ಹೆಸರುಗಳೂ ಪ್ರತ್ಯಯಗಳೂ ಸಲ್ಲುವಂತೆ ಒಬ್ಬನೇ ಪರಮಾತ್ಮನಿಗೇ ಪರಮಾತ್ಮ, ಹಿರಣ್ಯಗರ್ಭ(ಪ್ರಾಣ, ಸೂತ್ರಾತ್ಮ ಬುದ್ಧ್ಯಾತ್ಮ) ವಿರಾಡಾತ್ಮ ದೇವತೆಗಳು- ಎಂದು ಮುಂತಾಗಿ ಭೇದವನ್ನು ತಿಳಿಸುವ ಪ್ರತ್ಯಯಗಳೂ ಆಯಾ ನಾಮಗಳೂ ವ್ಯವಹಾರದೃಷ್ಟಿಯಿಂದ ಬರುತ್ತವೆ. ಒಂದು ನಿವೇಶನವನ್ನು ಕೊಂಡುಕೊಂಡವನು ಅದರಲ್ಲಿ ಒಂದು ಮನೆಯನ್ನು ಕಟ್ಟಿಕೊಂಡು ಇದು ಮನೆಯ ಅಂಗಳ, ಇದು ಹಜಾರ, ಇದು ನಡುಮನೆ, ಇದು ಎಡಗೋಣೆ, ಇದು ಅಡಿಗೆಯ ಮನೆ, ಇದು ದೇವರ ಕೋಣೆ, ಇದು ಸ್ನಾನದ ಮನೆ, ಇದು ಹಿತ್ತಲು - ಎಂದು ವಿಧವಿಧವಾದ ನಾನಾರೂಪಗಳ ದೃಷ್ಟಿಯಿಂದ ವ್ಯವಹರಿಸುವಂತೆಯೇ ಇಲ್ಲಿಯೂ ತಿಳಿಯಬೇಕು. ಪ್ರಕೃತದಲ್ಲಿ ನಿರುಪಾಧಿಕನಾದ ಪರಮಾತ್ಮನ ತತ್ತ್ವವನ್ನು ತಿಳಿಯುವದಕ್ಕೆಂದು ಸುಕೇಶಾದಿಗಳು ಬಂದಿರುತ್ತಾರೆ. ಅವರಲ್ಲಿ ಕಬಂಧಿಯು ಪ್ರಜೆಗಳ ಉತ್ಪತ್ತಿಯು ಯಾರಿಂದಾಗುವದೋ ಆ ಪ್ರಜಾಪತಿಯನ್ನು ಕುರಿತು ಪ್ರಶ್ನೆಯನ್ನು ಮಾಡಿರುತ್ತಾನೆ; ವೈದರ್ಭಿಯು ಪ್ರಜಾಪತಿ ಅಥವಾ ವಿರಾಡಾತ್ಮನಿಗಿಂತಲೂ ಅಂತರನಾಗಿರುವ ಪ್ರಾಣಾತ್ಮನನ್ನು (ಹಿರಣ್ಯಗರ್ಭನನ್ನು) ಕುರಿತು ಪ್ರಶ್ನೆಯನ್ನು ಮಾಡಿ, ಈಗ ಕೌಸಲ್ಯನು ಪ್ರಾಣನಿಗಿಂತಲೂ ಒಳಗಿರುವ ಸರ್ವಾಂತರನಾದ ಪರಮಾತ್ಮನನ್ನು ಕುರಿತು ಪ್ರಶ್ನೆ ಮಾಡುವದಕ್ಕೆ ಹೊರಟಿರುತ್ತಾನೆ. ಈ ಮೂವರಿಗೂ ಉಪಾಧಿಯಿಂದ ಭೇದವೇ ಹೊರತು ಸ್ವತಃ ಯಾವ ಭೇದವೂ ಇರುವದಿಲ್ಲ.

ಈಗ ಪಿಪ್ಪಲಾದನು ಕೊಟ್ಟ ಉತ್ತರದ ಅಭಿಪ್ರಾಯವೇನೆಂಬುದು ಸುಲಭವಾಗಿ ಗೊತ್ತಾಗುತ್ತದೆ. ಈ ಪ್ರಾಣನು ಆತ್ಮನಿಂದ ಹುಟ್ಟುತ್ತಾನೆ. ಇಲ್ಲಿ ಆತ್ಮನೆಂದರೆ ಪರಮಾತ್ಮನೇ, ಮುಂಡಕದಲ್ಲಿ ಅಕ್ಷರನೆಂದೂ ಪುರುಷನೆಂದೂ ಹೇಳಿರುವ ಪರಮಾರ್ಥ ತತ್ತ್ವವೇ. ಅಕ್ಷರದಿಂದ, ಎಂದರೆ 'ಅದೃಶ್ಯ, ಅಗ್ರಾಹ್ಯ' ಎಂದು ಮುಂತಾಗಿ ವರ್ಣಿಸಿರುವ, ಯಾವದೊಂದು ವಿಶೇಷವೂ ಇಲ್ಲದ, ಆ ಅಕ್ಷರನಿಂದ, ಪರಮಾತ್ಮನಿಂದ ಪ್ರಾಣನು ಹುಟ್ಟುತ್ತಾನೆ ; ಅಕ್ಷರಬ್ರಹ್ಮದಿಂದ ಅನ್ನ (ವ್ಯಾಕೃತಾವಸ್ಥೆಗೆ ತಿರುಗಲಿರುವ ಅವ್ಯಾಕೃತ), ಪ್ರಾಣ, ಮನಸ್ಸು, ಸತ್ಯ, ಲೋಕಗಳು- ಈ ಕ್ರಮದಿಂದ ಒಂದರ ಹಿಂದೊಂದು ಉಂಟಾಗುವವೆಂದು ಅಲ್ಲಿ (ಮುಂ. ೧-೧-೮) ಹೇಳಿರುತ್ತದೆ. ಈ ಪ್ರಾಣನು **'ಅವಿದ್ಯಾ ಕಾಮಕರ್ಮಭೂತಸಮುದಾಯ ಬೀಜಾಙ್ಕುರನು'** ಎಂದು ಭಾಷ್ಯಕಾರರು ಅಲ್ಲಿ ವರ್ಣಿಸಿರುತ್ತಾರೆ. ಮೊಟ್ಟ ಮೊದಲು ಅವಿದ್ಯೆಯಿಂದ ಆತ್ಮನಲ್ಲಿ ಕಲ್ಪಿತವಾಗಿರುವ ಅವ್ಯಕ್ತವು ವ್ಯಾಕೃತಾವಸ್ಥೆಗೆ ತಿರುಗುತ್ತದೆ; ಆ ಅವ್ಯಕ್ತದಿಂದ - ಬೀಜದಿಂದ ಮೊಳಕೆಯು ಹೊರತೋರಿಕೊಳ್ಳುವಂತೆ- ಬ್ರಹ್ಮದ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿಂದೊಡಗೂಡಿ ಹಿರಣ್ಯಗರ್ಭನು ಹುಟ್ಟುತ್ತಾನೆ.

ಇಲ್ಲಿ ಒಂದು ಶಂಕೆ : ಯಾವ ವಿಶೇಷವೂ ಇಲ್ಲದ ಪರಮಾತ್ಮನಿಂದ ಹಿರಣ್ಯ ಗರ್ಭನು ಅಥವಾ ಪ್ರಾಣನು ಹುಟ್ಟುತ್ತಾನೆಂದರೆ ಹೇಗೆ? ಯಾವದರಲ್ಲಿ ಯಾವದು ಇರುತ್ತದೆಯೋ ಅದರಿಂದಲೇ ಅದು ಹುಟ್ಟಬೇಕು. ಉದಾಹರಣೆಗೆ ಎಳ್ಳಿನಲ್ಲಿ ಎಣ್ಣೆಯಿರುವದರಿಂದಲೇ ಅದರಿಂದ ಎಣ್ಣೆಯನ್ನು ತೆಗೆಯುವದಕ್ಕೆ ಬರುತ್ತದೆ; ಆದರೆ ಮರಳಿನಿಂದ ಯಾವ ಜಾಣನಾದ ಗಾಣಿಗನೂ ಎಣ್ಣೆಯನ್ನು ತೆಗೆಯಲಾರನು. ಅಲ್ಲವೆ? ಹೀಗಿರುವಲ್ಲಿ ನಿರ್ವಿಶೇಷನಾದ - ಪ್ರಾಣ ಮನಸ್ಸು ಮುಂತಾದವುಗಳ ಸೋಂಕೇ ಇಲ್ಲದ - ಅಕ್ಷರರೂಪನಾದ ಆತ್ಮನಿಂದ ಪ್ರಾಣನು ಹುಟ್ಟಿದನೆಂದರೆ ಹೇಗೆ? ಈ ಶಂಕೆಯು ಬಂದೀತೆಂದು ಪಿಪ್ಪಲಾದನು ಇಲ್ಲಿ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾನೆ. ಮನುಷ್ಯನಿಂದ ನೆರಳು ಉಂಟಾಗುವಂತೆ ಈ ಪ್ರಾಣನು ಹುಟ್ಟುತ್ತಾನೆ. ಮನುಷ್ಯನಿಗೆ ನೆರಳೆಂಬುದೇನೂ ಧರ್ಮವಲ್ಲ. ಅವನ ಯಾವ ಕಡೆಯಲ್ಲಿ ನೋಡಿದರೂ ನೆರಳೆಂಬುದು ಕಾಣಿಸುವದಿಲ್ಲ; ಹೀಗಿದ್ದರೂ ಬಿಸಿಲು ಬಂದಾಗ, ಅಥವಾ ದೀಪವೇ ಮುಂತಾದ ಬೆಳಕಿನಲ್ಲಿ ಅವನು ನಿಂತಾಗ, ಅವನ ಹಿಂದೆ ನೆರಳು ಬೀಳುವದಿಲ್ಲವೆ? ಹಾಗೆಯೇ ಅಕ್ಷರರೂಪನಾದ ಪರಮಾತ್ಮನಿಂದ ಪ್ರಾಣನು ಉಂಟಾಗುತ್ತಾನೆ. ನೆರಳೆಂಬುದು ಹುಟ್ಟಿದ ಮೇಲೂ ಅದು ನಿಜವಾಗಿ ಮನುಷ್ಯನಿಗೆ ಎರಡನೆಯದಾಗಿರುವ ವಸ್ತುವಾಗಿರುವದಿಲ್ಲ. ಮನುಷ್ಯನೊಬ್ಬ ಅವನ ನೆರಳು ಒಂದು - ಹೀಗೆ ಎರಡು ಪದಾರ್ಥಗಳಿವೆ ಎಂದು ಯಾರೂ ಭಾವಿಸುವದೇ ಇಲ್ಲ. ಅಲ್ಲವೆ? ನೆರಳೆಂಬುದು

ತಟ್ಟನೆ ನೋಡಿದರೆ ಮನುಷ್ಯನಿಗಿಂತ ಬೇರೆಯಾಗಿರುವ ವಸ್ತುವೆಂದು ತೋರಿದರೂ ಅದರ ತತ್ತ್ವವನ್ನು ವಿಚಾರಿಸಿದ ಮೇಲೆ, 'ಮನುಷ್ಯನೊಬ್ಬನೇ ಇದ್ದಾನೆ, ನೆರಳು ಮನುಷ್ಯನಲ್ಲ, ಮನುಷ್ಯನಿಗಿಂತ ಬೇರೆಯಾದ ವಸ್ತುವೂ ಅಲ್ಲ' ಎಂದು ನಿಶ್ಚಯಿಸುವಂತೆ ಈ ಹಿರಣ್ಯಗರ್ಭನು ವ್ಯವಹಾರದೃಷ್ಟಿಯಿಂದ ನೋಡಿದರೆ ಪರಮಾತ್ಮನಿಂದ ಹುಟ್ಟಿದ ಬೇರೆಯವನಾಗಿರುತ್ತಾನೆ. ಆದರೆ ತತ್ತ್ವದೃಷ್ಟಿಯಿಂದ ನೋಡಿದಾಗ ಆ ಪರಮಾತ್ಮನಿಗಿಂತ ಬೇರೆಯೆಂದಾಗಲಿ, ಬೇರೆಯಲ್ಲವೆಂದಾಗಲಿ ಹೇಳುವದಕ್ಕಾಗದ ಸ್ವರೂಪನಾಗಿರುತ್ತಾನೆ.

ಇದಂತಿರಲಿ. ಹೀಗೆ ಪರಮಾತ್ಮನಿಂದ ಹುಟ್ಟುವ ಹಿರಣ್ಯಗರ್ಭನೇ ಆಧಿದೈವಿಕದೃಷ್ಟಿಯಿಂದ ವಾಯುವೆನಿಸುತ್ತಾನೆ; ಅವನ ಉಪಾಧಿಯ ಅಂಶವೇ ವ್ಯಷ್ಟಿಯಾಗಿ ಒಬ್ಬೊಬ್ಬರ ಶರೀರದೊಳಗೂ ಬಂದು ಸೇರಿಕೊಂಡಿರುವ ಪ್ರಾಣವು. ಈ ಪ್ರಾಣವು ಸ್ವತಂತ್ರವಾಗಿರುವದಿಲ್ಲ; ಜೀವನಿಗೆ ಉಪಾಧಿಯಾಗಿ ಅವನಿಗೇ ಅಂಟಿಕೊಂಡಿರುತ್ತದೆ. ಜೀವನು ಶರೀರದಲ್ಲಿದ್ದುಕೊಂಡು ಒಳ್ಳೆಯ ಅಥವಾ ಕೆಟ್ಟ ಕರ್ಮಗಳನ್ನು ಮಾಡುತ್ತಾನೆ. ಅವುಗಳಲ್ಲಿ ಕೆಲವು ಕರ್ಮಗಳ ಫಲವನ್ನು ಈ ಜನ್ಮದಲ್ಲಿಯೇ ಅನುಭವಿಸುತ್ತಾನೆ; ಮಿಕ್ಕ ಕರ್ಮಗಳಿಗೆ ಫಲವನ್ನು ಲೋಕಾಂತರದಲ್ಲಿಯೋ ಜನ್ಮಾಂತರದಲ್ಲಿಯೋ ಅನುಭವಿಸಬೇಕಾಗಿರುತ್ತದೆ. ಹೀಗೆ ಜೀವನ ಮನಸ್ಸಿನಲ್ಲುಂಟಾಗುವ ಸಂಕಲ್ಪ, ಇಚ್ಛೆ, ದ್ವೇಷ - ಮುಂತಾದವುಗಳ ಫಲವಾಗಿ ಜೀವನೊಡನೆ ಪ್ರಾಣವೂ ಈ ಶರೀರದೊಳಕ್ಕೆ ಬಂದು ಸೇರಿಕೊಳ್ಳುತ್ತದೆ. ಈ ಪ್ರಾಣನ ಜ್ಞಾನಶಕ್ತಿಕ್ರಿಯಾಶಕ್ತಿಗಳಿಂದಲೇ ಜೀವನು ಶರೀರದಲ್ಲಿ ಹೊರಗಿನ ವಿಷಯಗಳನ್ನು ಅರಿಯುವದು, ಅವುಗಳಲ್ಲಿ ಇಚ್ಛಾದ್ವೇಷಗಳನ್ನು ತಳೆಯುವದು, ಆ ಇಚ್ಛಾದ್ವೇಷಗಳಿಗನುಗುಣವಾಗಿ ಕರ್ಮವನ್ನು ಮಾಡುವದು- ಹೀಗೆ ಕರ್ಮದಲ್ಲಿ ತೊಡಗುತ್ತಿರುವನು. ಆದ್ದರಿಂದ ಪ್ರಾಣವು ಇಲ್ಲಿಗೆ ಹೇಗೆ ಬರುತ್ತದೆ?- ಎಂಬ ಪ್ರಶ್ನೆಗೆ ಜೀವನ ಇಚ್ಛಾದ್ವೇಷಾದಿಗಳಿಗೆ ಅನುಗುಣವಾಗಿ ಈ ಶರೀರದಲ್ಲಿ ಕರ್ಮದ ಫಲವನ್ನು ಅನುಭವಿಸಬೇಕಾಗಿರುವದರಿಂದ ಬರುತ್ತದೆ- ಎಂದು ಉತ್ತರವನ್ನು ಹೇಳಿದಂತೆ ಆಯಿತು.

## ಪ್ರಾಣದ ವಿಭಾಗಕ್ರಮ

*ಯಥಾ ಸಮ್ರಾಡೇವಾಧಿಕೃತಾನ್ ವಿನಿಯುಙ್ಕ್ತೇ ಏತಾನ್ ಗ್ರಾಮಾನೇತಾನ್ ಗ್ರಾಮಾನಧಿತಿಷ್ಠಸ್ವೇತ್ಯೇವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ಪೃಥಗೇವ ಸಂನಿಧತ್ತೇ ॥೪॥*

**ಪಾಯೂಪಸ್ಥೇಽಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ ಸ್ವಯಂ ಪ್ರಾತಿಷ್ಠತೇ ಮಧ್ಯೇ ತು ಸಮಾನಃ । ಏಷ ಹ್ಯೇತದ್ಧು ತಮನ್ನಂ ಸಮಂ ನಯತಿ ತಸ್ಮಾದೇತಾಃ ಸಪ್ತಾರ್ಚಿಷೋ ಭವನ್ತಿ ॥೫॥**

**ಹೃದಿ ಹ್ಯೇಷ ಆತ್ಮಾ । ಅತ್ರೈತದೇಕಶತಂ ನಾಡೀನಾಂ ತಾಸಾಂ ಶತಂ ಶತಮೇಕೈಕಸ್ಯಾ ದ್ವಾಸಪ್ತತಿರ್ದ್ವಾಸಪ್ತತಿಃ ಪ್ರತಿಶಾಖಾನಾಡೀಸಹಸ್ರಾಣಿ ಭವನ್ತ್ಯಾಸು ವ್ಯಾನಶ್ಚರತಿ ॥೬॥**

**ಅಥೈತಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್ ॥೭॥**

೪-೭. ಹೇಗೆ ಸಮ್ರಾಟನೇ ಅಧಿಕಾರಿಗಳನ್ನು..'ಈ ಹಳ್ಳಿಗಳನ್ನು ನೋಡಿಕೊಂಡಿರು, ಈ ಹಳ್ಳಿಗಳನ್ನು ನೋಡಿಕೊಂಡಿರು.' ಎಂದು ವಿನಿಯೋಗಿಸುತ್ತಾನೋ, ಇದರಂತೆಯೇ ಈ ಪ್ರಾಣನು ಉಳಿದ ಪ್ರಾಣಗಳನ್ನೂ ಬೇರೆಬೇರೆಯಾಗಿ ಇಟ್ಟಿರುತ್ತಾನೆ. ಪಾಯೂಪಸ್ಥದಲ್ಲಿ ಅಪಾನ, ಚಕ್ಷುಃಶ್ರೋತ್ರದಲ್ಲಿಯೂ ಮುಖನಾಸಿಕದಲ್ಲಿಯೂ ಪ್ರಾಣನು ತಾನೇ ಇದ್ದುಕೊಂಡಿರುವನು. ಮಧ್ಯದಲ್ಲಿಯಾದರೆ ಸಮಾನನು; ಇವನೇ ಅಲ್ಲವೆ, ಹೋಮಮಾಡಿದ ಈ ಅನ್ನವನ್ನು ಸಮನಾಗಿ ನಯನಮಾಡುತ್ತಾನೆ? ಅದರಿಂದ ಈ ಏಳು ಉರಿಗಳು ಆಗುತ್ತಿರುವವು. ಹೃದಯದಲ್ಲಿಯೇ ಅಲ್ಲವೆ, ಈ ಆತ್ಮನು? ಇಲ್ಲಿ ನೂರೊಂದು ನಾಡಿಗಳು, ಅವುಗಳಲ್ಲಿ ಒಂದೊಂದಕ್ಕೆ ನೂರುನೂರು, ಒಂದೊಂದು ಶಾಖೆಗೆ ಎಪ್ಪತ್ತೆರಡು ಸಾವಿರ ಪ್ರತಿಶಾಖಾನಾಡಿಗಳು ಇರುವವು. ಇವುಗಳಲ್ಲಿ ವ್ಯಾನವು ಸಂಚರಿಸುತ್ತಿರುವದು. ಇನ್ನು ಒಂದು ನಾಡಿಯಿಂದ ಮೇಲಕ್ಕೆ ಉದಾನವು ಪುಣ್ಯದಿಂದ ಪುಣ್ಯಲೋಕಕ್ಕೂ ಪಾಪದಿಂದ ಪಾಪಲೋಕಕ್ಕೂ ಎರಡೂ ಸೇರಿದ್ದರಿಂದ ಮನುಷ್ಯಲೋಕಕ್ಕೂ ಒಯ್ಯುತ್ತಿರುವದು.

ಈಗ ಕೌಸಲ್ಯನ ಮೂರನೆಯ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ಪ್ರಾರಂಭಿಸಿರುತ್ತದೆ. ಪ್ರಾಣವು ತನ್ನನ್ನು ವಿಂಗಡಿಸಿಕೊಂಡು ಹೇಗೆ ಇರುತ್ತದೆ- ಎಂದು ಅವನು ಕೇಳಿರುತ್ತಾನೆ. ಇಲ್ಲಿ ಪ್ರಾಣವು ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ- ಎಂದು ಐದು ವೃತ್ತಿಗಳುಳ್ಳದ್ದಾಗಿರುತ್ತದೆ. ಮುಖ್ಯವಾಗಿರುವ ಪ್ರಾಣವು ರಾಜನಿದ್ದಂತೆ, ಉಳಿದವುಗಳು ಅಧಿಕಾರಿಗಳಿದ್ದಂತೆ. ಒಬ್ಬ ರಾಜನು ತನ್ನ ಕೈಕೆಳಗಿನ ಅಧಿಕಾರಿಗಳಿಗೆ ನಿನಗೆ ಈ ಗ್ರಾಮದಮೇಲೆ ಅಧಿಕಾರವನ್ನು ಕೊಟ್ಟಿರುತ್ತೇನೆ; ಇದನ್ನು ನೋಡಿಕೊಂಡಿರು- ಎಂದು ಗೊತ್ತುಮಾಡಿಕೊಂಡಿರುವಂತೆ, ಪ್ರಾಣನು ಮಿಕ್ಕ

ವೃತ್ತಿಗಳಿಗೆಲ್ಲ ಒಂದೊಂದು ಕೆಲಸವನ್ನು ಹಂಚಿಕೊಟ್ಟಿರುತ್ತಾನೆ. ಅದರಂತೆ ಅವು ತಪ್ಪದೆ ತಮ್ಮ ತಮ್ಮ ಕೆಲಸವನ್ನು ಮಾಡುತ್ತಿರುತ್ತವೆ. ಹೇಗೆಂದರೆ ಪಾಯೂಪಸ್ಥಗಳೆಂಬ ಸ್ಥಳಗಳಲ್ಲಿದ್ದುಕೊಂಡು ಅಲ್ಲಿ ಮಲಮೂತ್ರ ವಿಸರ್ಜನವನ್ನು ಮಾಡುವ ಕೆಲಸವು ಅಪಾನಕ್ಕೆ ಸೇರಿದ್ದು ; ಚಕ್ಷುರಿಂದ್ರಿಯ,ಶ್ರೋತ್ರೇಂದ್ರಿಯ ಮತ್ತು ಮುಖಮೂಗು- ಇವುಗಳಲ್ಲಾಗುವ ಕೆಲಸವನ್ನು ರಾಜನು ತನ್ನ ರಾಜಧಾನಿಯಲ್ಲಿದ್ದುಕೊಂಡು ನೋಡುತ್ತಿರುವಂತೆ- ಪ್ರಾಣನು ತಾನೇ ನೋಡಿಕೊಳ್ಳುತ್ತಾನೆ. ಈ ಪ್ರಾಣ, ಅಪಾನ- ಇವುಗಳ ಸ್ಥಾನಗಳ ನಡುವೆ ಸಮಾನವು ಇದ್ದುಕೊಂಡು ಉಂಡದ್ದನ್ನೂ ತಿಂದದ್ದನ್ನೂ ಎಲ್ಲಾ ಕಡೆಗೂ ಸಮವಾಗಿ ಹಂಚುತ್ತದೆಯಾದ್ದರಿಂದ ಅದಕ್ಕೆ 'ಸಮಾನ' ವೆಂಬ ಹೆಸರು ಬಂದಿದೆ. ಈ ಸಮಾನವು ಹೀಗೆ ಅನ್ನಪಾನಗಳನ್ನು ಹಂಚುತ್ತಿರುವದರಿಂದ ಜಾಠರಾಗ್ನಿಯು ಆಹಾರಪಾನವನ್ನು ಉರಿಯಿಸುತ್ತಾ ಏಳು ಉರಿಗಳು ಏಳುತ್ತಿವೆ. ಮುಂಡಕದಲ್ಲಿ (ಮುಂ.-೨-೧-೮) ಹೇಳಿರುವಂತೆ ಕಿವಿಗಳು, ಕಣ್ಣುಗಳು, ಮೂಗಿನ ಹೊಳ್ಳೆಗಳು, ನಾಲಗೆ -ಇವುಗಳ ಮೂಲಕವಾಗಿ ಕೇಳುವದು, ನೋಡುವದು, ಮೂಸುವದು, ಸವಿಯುವದು- ಎಂಬ ರೂಪದ ವಿಷಯಪ್ರಕಾಶರೂಪವಾದ ಅರಿವುಗಳು ಆಗುತ್ತಿರುವವು.

ಇನ್ನು ವ್ಯಾನದ ವ್ಯಾಪಾರವನ್ನು ಹೇಳಬೇಕಷ್ಟೆ? ಅದನ್ನು ತಿಳಿಯುವದಕ್ಕೆ ಸ್ವಲ್ಪ ವಿವರವನ್ನು ತಿಳಿದುಕೊಳ್ಳಬೇಕಾಗಿರುತ್ತದೆ. ಈ ಹೃದಯದಲ್ಲಿ ಆತ್ಮನೊಡನೆ ಸೇರಿಕೊಂಡಿರುವ ಲಿಂಗಾತ್ಮನು ಕೆಲಸಮಾಡುತ್ತಿರುತ್ತಾನೆ. ಈ ಹೃದಯದಿಂದ ನೂರೊಂದು ಪ್ರಧಾನನಾಡಿಗಳು ಹೊರಟುಕೊಂಡಿರುತ್ತವೆ. ಅವುಗಳಲ್ಲಿ ಒಂದೊಂದು ಪ್ರಧಾನನಾಡಿಗೂ ನೂರುನೂರು ಶಾಖಾನಾಡಿಗಳು ಇರುತ್ತವೆ. ಆ ಪ್ರತಿಯೊಂದು ನೂರಕ್ಕೂ ಎಪ್ಪತ್ತೆರಡುಸಾವಿರ ಉಪನಾಡಿಗಳು ಇರುತ್ತವೆ. ಇಲ್ಲಿ ಹೇಳಿರುವ ನಾಡಿಗಳ ಸಂಖ್ಯೆಯನ್ನು ಇಷ್ಟೇ ಎಂದು ನಿರ್ಣಯಿಸಿಕೊಳ್ಳಬೇಕಾದದ್ದೇನೂ ಇಲ್ಲ. ಹೃದಯದಿಂದ ಹೊರಟಿರುವ ಮುಖ್ಯನಾಡಿಗಳು ಶಾಖಾ ನಾಡಿಗಳಾಗಿಯೂ ಆ ಶಾಖಾನಾಡಿಗಳು ಲೆಕ್ಕವಿಲ್ಲದಷ್ಟು ಉಪನಾಡಿಗಳಾಗಿಯೂ ಒಡೆದುಕೊಂಡಿರುವವೆಂದು ತಿಳಿದಕೊಂಡರೆ ಸಾಕಾಗಿದೆ. ಆ ನಾಡಿಗಳಲ್ಲೆಲ್ಲ ವ್ಯಾನವು ಕೆಲಸಮಾಡುತ್ತಿರುತ್ತದೆ. ಸಂದುಗಳು, ಹೆಗಲುಗಳು, ಮರ್ಮಸ್ಥಳಗಳು- ಇವುಗಳಲ್ಲಿ ವಿಶೇಷವಾಗಿಯೂ ಮಿಕ್ಕ ಕಡೆಗಳಲ್ಲಿ ಸಾಮಾನ್ಯವಾಗಿಯೂ ಅದು ಕೆಲಸ ಮಾಡುತ್ತದೆ. ಹೀಗೆ ಪ್ರಾಣಾಪಾನವ್ಯಾನಗಳ ನಡುವೆ ಕೆಲಸಮಾಡುವ ವ್ಯಾನದ ಸಹಾಯದಿಂದ ವೀರ್ಯವನ್ನು ಅಪೇಕ್ಷಿಸುವ ಕೆಲಸಗಳು- ಉದಾಹರಣೆಗೆ ಓಡುವದು, ಭಾರವಾದ ವಸ್ತುವನ್ನು ಎತ್ತುವದು ಮುಂತಾದವುಗಳು - ಆಗುತ್ತಿರುತ್ತವೆ.

ಈಗ ಉದಾನದ ವಿಚಾರ. ಮೇಲೆ ಹೇಳಿದ ನೂರೊಂದು ನಾಡಿಗಳೊಳಗೆ ಒಂದು ಮೇಲಕ್ಕೆ ಹೊರಟಿರುತ್ತದೆ. ಅದನ್ನು ಸುಷುಮ್ನಾ ನಾಡಿಯೆಂದು ಯೋಗಶಾಸ್ತ್ರದಲ್ಲಿ ಕರೆದಿರುತ್ತಾರೆ. ಅಂಗಾಲಿನಿಂದ ನಡುನೆತ್ತಿಯವರೆಗೂ ಅದರಲ್ಲಿರುವ ಉದಾನದ ಕೆಲಸವು ಸಾಗುತ್ತಿರುತ್ತದೆ. ಮನುಷ್ಯನು ಪುಣ್ಯಕರ್ಮವನ್ನು ಮಾಡಿದ್ದರೆ ದೇವತೆಗಳ ಜನ್ಮವೇ ಮುಂತಾದದ್ದನ್ನು ಪಡೆಯುವಂತೆ ಈ ವಾಯುವೇ ಸಹಾಯಮಾಡಿ ಕರೆದುಕೊಂಡುಹೋಗುವದು. ಪಾಪದಿಂದ ನರಕ, ತಿರ್ಯಗ್ಜಂತುಗಳು- ಮುಂತಾದ ಕೀಳುಜನ್ಮಕ್ಕೆ ಒಯ್ಯುತ್ತದೆ. ಪಾಪ ಪುಣ್ಯಗಳು ಸಮನಾಗಿರುವವರನ್ನು ಮನುಷ್ಯಲೋಕಕ್ಕೆ ಒಯ್ಯುತ್ತದೆ.

ಹೀಗೆ ಪ್ರಾಣವು ಐದು ವೃತ್ತಿಗಳಾಗಿ ಹಂಚಿಕೊಂಡು ಶರೀರದಲ್ಲಿ ಆಗ ಬೇಕಾಗಿರುವ ಕೆಲಸಗಳನ್ನು ಸಾಗಿಸುತ್ತಿರುತ್ತದೆ. ಪ್ರಾಣದ ಸಹಾಯವಿಲ್ಲದೆ ಜೀವನು ಯಾವ ಕಾರ್ಯವನ್ನೂ ಮಾಡಲಾರನು. ಆದ್ದರಿಂದಲೇ ಅವನಿಗೆ 'ಜೀವನು', 'ಪ್ರಾಣಿ' ಹೆಸರುಗಳು ಬಂದಿವೆ.

## ಪ್ರಾಣವು ಅಧ್ಯಾತ್ಮಾಧಿದೈವಗಳನ್ನು ಧರಿಸಿರುವ ಬಗೆ

***ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ । ಪೃಥಿವ್ಯಾಂ ಯಾ ದೇವತಾ ಸೈಷಾ ಪುರುಷಸ್ಯಾಪಾನಮವಷ್ಟಭ್ಯಾನ್ತರಾ ಯದಾಕಾಶಃ ಸ ಸಮಾನೋ ವಾಯುರ್ವ್ಯಾನಃ ॥೮॥***

***ತೇಜೋ ಹ ವಾ ಉದಾನಸ್ತಸ್ಮಾದುಪಶಾನ್ತತೇಜಾಃ। ಪುನರ್ಭವಮಿನ್ದ್ರಿಯೈರ್ಮನಸಿ ಸಂಪದ್ಯಮಾನೈಃ ॥೯॥***

೮- ೯. ಆದಿತ್ಯನೇ ಹೊರಗಿನ ಪ್ರಾಣವು. ಇವನೇ ಅಲ್ಲವೆ, ಈ ಚಾಕ್ಷುಷಪ್ರಾಣನಿಗೆ ಅನುಗ್ರಹವನ್ನು ಮಾಡುತ್ತಾ ಉದಯಿಸುವನು ? ಪೃಥಿವಿಯಲ್ಲಿರುವ ದೇವತೆಯಿದೆಯಲ್ಲ, ಆ ಇದು ಪುರುಷನ ಅಪಾನವನ್ನು ಆಶ್ರಯಿಸಿ (ಕೆಲಸಮಾಡುತ್ತಿದೆ). ನಡುವೆಯಿಂದ ಆಕಾಶವಿದೆಯಷ್ಟೇ? ಅದು ಸಮಾನವು, ವಾಯುವೇ ವ್ಯಾನವು, ತೇಜಸ್ಸೇ ಉದಾನವು, ಆದ್ದರಿಂದ ತೇಜಸ್ಸು ಉಪಶಾಂತನಾದವನು ಮನಸ್ಸಿನಲ್ಲಿ ಸೇರಿಕೊಂಡ ಇಂದ್ರಿಯಗಳೊಡನೆ ಮರುಹುಟ್ಟನ್ನು (ಹೊಂದುತ್ತಾನೆ).

ಕೌಸಲ್ಯನು ಕೇಳಿದ ಪ್ರಶ್ನೆಗಳೊಳಗೆ ಮೂರಕ್ಕೆ ಈವರೆಗೆ ಉತ್ತರವನ್ನು ಕೊಟ್ಟಂತೆ ಆಗಿರುತ್ತದೆ. 'ಕಥಂ ಬಾಹ್ಯಮಭಿಧತ್ತೇ ಕಥಮಧ್ಯಾತ್ಮಮಿತಿ' ಅಧಿದೈವವನ್ನೂ ಅಧ್ಯಾತ್ಮವನ್ನೂ ಹೇಗೆ ಧರಿಸಿಕೊಂಡಿರುತ್ತಾನೆ? - ಎಂಬ ಪ್ರಶ್ನೆಗೆ ಈಗ ಪಿಪ್ಪಲಾದನು ಉತ್ತರವನ್ನು ಕೊಡುತ್ತಿದಾನೆ. ಹೊರಗೆ ಎಲ್ಲರಿಗೂ ಕಾಣುತ್ತಿರುವ ಆದಿತ್ಯನೇ ಅಧಿದೈವತ ಪ್ರಾಣನು. ಪ್ರಾಣನು ಅಧಿದೈವತರೂಪದಿಂದ ಆದಿತ್ಯನಲ್ಲಿದ್ದುಕೊಂಡು ಸೂರ್ಯಮಂಡಲದ ಕಾರ್ಯವನ್ನೆಲ್ಲ ನೆರವೇರಿಸುತ್ತಿರುವನು ಎಂದರ್ಥ. ಆ ಅಧಿದೈವತಪ್ರಾಣನು ಸೂರ್ಯನ ರೂಪದಿಂದ ಉದಯಿಸುವಾಗ ಚಾಕ್ಷುಷಪ್ರಾಣನಿಗೆ ಅನುಗ್ರಹವನ್ನುಂಟುಮಾಡುತ್ತಾ ಉದಯಿಸುತ್ತಿರುತ್ತಾನೆ. ಅಧ್ಯಾತ್ಮವಾಗಿ ಪುರುಷನಲ್ಲಿರುವ ಇಂದ್ರಿಯಗಳಿಗೆ ಈ ಅಧಿದೈವ ಪ್ರಾಣನ ಅನುಗ್ರಹದಿಂದಲೇ ತಮ್ಮತಮ್ಮ ಕಾರ್ಯವನ್ನು ಮಾಡುವ ಶಕ್ತಿಯುಂಟಾಗುವದು. ಸೂರ್ಯನ ರಶ್ಮಿಗಳ ಮೂಲಕ ಪ್ರಾಣಗಳಿಗೆ ಅನುಗ್ರಹವಾಗದೆ ಇದ್ದರೆ ಅವುಗಳ ಇಂದ್ರಿಯಗಳು ಕೆಲಸಮಾಡುವದು ಎಂದಿಗೂ ಆಗುತ್ತಿರಲಿಲ್ಲ. ಕಣ್ಣಿಗೆ ಸೂರ್ಯನ ಬೆಳಕಿನ ಸಹಾಯವಿಲ್ಲದೆ ರೂಪವನ್ನು ನೋಡುವದು ಎಂದಿಗಾದರೂ ಆದೀತೆ ?

*ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।*
*ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಞ್ಚಮಮ್ ॥*
*ಶರೀರವಾಙ್ಮನೋಭಿರ್ಯತ್ ಕರ್ಮ ಪ್ರಾರಭತೇ ನರಃ ।*
*ನ್ಯಾಯ್ಯಂ ವಾ ವಿಪರೀತಂ ವಾ ಪಞ್ಚೈತೇ ತಸ್ಯ ಹೇತವಃ ॥*

ಗೀ. ೧೮-೧೪,೧೫

ಶರೀರ, ಕರ್ತೃಭೋಕ್ತೃವಾಗಿರುವ ಜೀವ, ವಿಧವಿಧವಾದ ಕರಣಗಳು, ಪ್ರಾಣಾಪಾನರೂಪದ ಬಗೆಬಗೆಯ ವ್ಯಾಪಾರಗಳು, ಆದಿತ್ಯಾದಿದೇವತೆ - ಇವು ಐದು ಮನುಷ್ಯನು ಮಾಡುವ ಸಕಲಕರ್ಮಗಳಿಗೂ ಕಾರಣ - ಎಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಆ ಶ್ಲೋಕಗಳ ದೃಷ್ಟಿಯಿಂದ ನೋಡಿದಾಗ ಶರೀರವೇ ಮುಂತಾದ ಐದೂ ಕಾರಣವೆಂದಾದರೂ ಪ್ರಾಣನು ಅಧಿದೈವರೂಪದಿಂದ ಅಧ್ಯಾತ್ಮವಾಗಿರುವ ಪ್ರಾಣಗಳಿಗೆ ಅನುಗ್ರಹವನ್ನು ಮಾಡಿದಹೊರತು ಯಾವ ಕಾರ್ಯವೂ ಆಗುವಂತಿಲ್ಲವಾದ್ದರಿಂದ ಇಲ್ಲಿ ಪ್ರಾಣವನ್ನೇ ಮುಖ್ಯವಾಗಿಟ್ಟುಕೊಂಡು ಹೇಳಿದೆ. ಅಂತೂ, ಅಧಿದೈವವಾದ ಪ್ರಾಣವಾಯುವು ಅಧ್ಯಾತ್ಮವಾದ ಪ್ರಾಣಕ್ಕೆ ಅನುಗ್ರಹ ಮಾಡುತ್ತಿರುವದರಿಂದ ಆ ಪ್ರಾಣದ ವ್ಯಾಪಾರವು ಸಾಗುತ್ತಿರುತ್ತದೆ ಹೇಳಿದಂತೆ ಆಗಿದೆ.

ಹೀಗೆಯೇ ಪೃಥಿವಿಯಲ್ಲಿರುವ ಅಭಿಮಾನಿದೇವತೆಯಾಗಿರುವ ದೇವತೆಯೇ ಅಧಿದೈವವಾದ ಅಪಾನವು. ಅದು ಮನುಷ್ಯನ ಅಪಾನವಾಯುವನ್ನು ಹಿಡಿದೆಳೆದುಕೊಂಡು, ಕೆಳಕ್ಕೇ ಎಳೆಯುತ್ತಾ ಅನುಗ್ರಹ ಮಾಡುತ್ತಿರುತ್ತದೆ. ಶರೀರವು ಕೆಳಕ್ಕೆ ಬೀಳದೆ, ಅಥವಾ ಆಕಾಶಬುಟ್ಟಿಯಂತೆ ಮೇಲಕ್ಕೆ ಹಾರಿಹೋಗದೆ, ನಿಂತಿರುವದಕ್ಕೆ ಈ ಅಪಾನವಾಯುವಿಗೆ ಅನುಗ್ರಹವನ್ನು ಮಾಡುತ್ತಿರುವ ದೇವತೆಯ ಅನುಗ್ರಹವೇ ಕಾರಣವು. ಭೌತಿಕವಿಜ್ಞಾನಶಾಸ್ತ್ರದ ದೃಷ್ಟಿಯಿಂದ ಮನುಷ್ಯನು ಬೀಳದೆ ಏಳದೆ ನಿಲ್ಲುವುದಕ್ಕೆ ಶಕ್ತನಾಗಿರುವದಕ್ಕೆ ಹೇಳುವ ಕಾರಣಗಳು ಈ ಅಪಾನ ವಾಯುವಿನ ಅವಾಂತರಭೇದಗಳ ಕಾರ್ಯಗಳೇ ಆಗಿರುತ್ತವೆ ಎಂದು ತಿಳಿಯಬೇಕು.

ಇನ್ನು ಮೇಲಿರುವ ದ್ಯುಲೋಕ, ಕೆಳಗಿರುವ ಪೃಥಿವಿ- ಇವುಗಳ ನಡುವೆ ಇರುವ ಅಂತರಿಕ್ಷವಿದೆಯಲ್ಲ. ಅಲ್ಲಿರುವದು ಅಧಿದೈವತವಾದ ಸಮಾನವಾಯುವು; ಅವರ ಅನುಗ್ರಹದಿಂದ ಪ್ರಾಣಿಯ ಒಳಗಡೆ ಶರೀರದ ನಡುವೆಯಿರುವ ಸಮಾನವೃತ್ತಿಯನ್ನು ಅನುಗ್ರಹಿಸುತ್ತಿರುತ್ತದೆ. ಇನ್ನು ಹೊರಗಿರುವ ಸಾಮಾನ್ಯವಾದ ವಾಯುವೇ ಅಧಿದೈವತವ್ಯಾನವು. ಅದರ ಅನುಗ್ರಹದಿಂದ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುವ ವ್ಯಾನವು ಅನುಗೃಹೀತವಾಗಿರುತ್ತದೆ. ಹೀಗೆ ಶರೀರದೊಳಗಡೆಯಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ- ಎಂದು ಐದು ಬಗೆಯಾಗಿ ವಿಂಗಡಿಸಿಕೊಂಡಿರುವ ಅಧ್ಯಾತ್ಮಪ್ರಾಣವು ಅದಕ್ಕೆ ಅನುಗುಣವಾಗಿ ಅಧಿಧೈವಪ್ರಾಣಭೇದದಿಂದ ಅನುಗೃಹೀತವಾಗಿರುತ್ತದೆ. ಪ್ರಾಣನು ಬಾಹ್ಯವಾಗಿರುವ ಪ್ರಾಣಭೇದಗಳಲ್ಲಿದ್ದುಕೊಂಡೇ, ಪ್ರಾಣಿಗಳ ಶರೀರದೊಳಗಿರುವ ಪ್ರಾಣಭೇದಗಳನ್ನು ಅನುಗ್ರಹಿಸುತ್ತಿರುವದರಿಂದಲೇ ಅವುಗಳಲ್ಲಿ ಆಗುವ ವ್ಯಾಪಾರಗಳೆಲ್ಲ ನಡೆಯುತ್ತಿರುತ್ತವೆ ಎಂದು ತಿಳಿಯಬೇಕು.

ಈವರೆಗೆ ನಾಲ್ಕು ವಾಯುಗಳನ್ನು ಮಾತ್ರ ಹೇಳಿತ್ತು. ಉದಾನವೆಂಬ ಉಳಿದ ಪ್ರಾಣವು ತನ್ನ ವ್ಯಾಪಾರವನ್ನು ಮಾಡುವದಕ್ಕೆ ಹೊರಗಿನ ತೇಜಸ್ಸಿನ ಸಹಾಯವುಬೇಕು. ಆದ್ದರಿಂದಲೇ ತೇಜಸ್ಸಿನ ಅನುಗ್ರಹವು ತಪ್ಪಿದರೆ ಕೂಡಲೆ ಜೀವನ ಉಷ್ಣವು ಕಡಿಮೆಯಾದಾಗ, ಮರಣಕ್ಕೆ ಸಮೀಪವಾಗಿರುವನೆಂದು ತಿಳಿಯುವರು. ಆಗ ಜೀವನು ಈ ಶರೀರದಲ್ಲಿ ಪ್ರಾಣನ ಸಹಾಯವಿಲ್ಲದೆ ನಿಲ್ಲುವನಾದ್ದರಿಂದ ಮತ್ತೊಂದು ಜನ್ಮವನ್ನು ಪಡೆಯಬೇಕಾಗುವದು. ಆಗ ಮರಣ ಕಾಲದಲ್ಲಿ ಎಲ್ಲಾ ಇಂದ್ರಿಯಗಳೂ ಮನಸ್ಸಿನಲ್ಲಿ ಒಂದಾಗಿಬಿಡುವವು; ಆದ್ದರಿಂದಲೇ

ಅವುಗಳ ಹೊರಗಿನ ವ್ಯಾಪಾರವು ವ್ಯಕ್ತವಾಗಿ ಕಾಣುವದಿಲ್ಲ. ಹೀಗೆ ಪ್ರಾಣವೃತ್ತಿಗಳು ವಿಕಸಿತವಾಗಿರುವಾಗ ಜೀವನವನ್ನು ಸಾಗಿಸಿಕೊಂಡಿದ್ದು ಅವುಗಳು ಉಪಸಂಹೃತವಾಗುತ್ತಲೂ ಮತ್ತೊಂದು ಶರೀರವನ್ನು ಜೀವನು ಹೊಂದುತ್ತಾನೆ.

## ಉತ್ಕ್ರಾಂತಿಕ್ರಮ

*ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ ಪ್ರಾಣಸ್ತೇಜಸಾಯುಕ್ತಃ ।*
*ಸಹಾತ್ಮನಾ ಯಥಾಸಂಕಲ್ಪಿತಂ ಲೋಕಂ ನಯತಿ ॥೧೦॥*

೧೦. ಯಾವ ಚಿತ್ತದಿಂದ ಕೂಡಿರುವನೋ ಅದರಿಂದ ಇವನು ಪ್ರಾಣವನ್ನು ಹೊಂದುತ್ತಾನೆ. ಪ್ರಾಣನು ತೇಜಸ್ಸಿನಿಂದಕೂಡಿ ಆತ್ಮನೊಡನೆ ಸಂಕಲ್ಪಕ್ಕೆ ತಕ್ಕಂತೆ ಅವನನ್ನು ಆಯಾ ಲೋಕಕ್ಕೆ ಒಯ್ಯುತ್ತಾನೆ.

ಈಗ ಉದಾನದಿಂದ ಪ್ರಾಣವು ಉತ್ಕ್ರಮಣವಾಗುವ ಕ್ರಮ ಹೇಗೆ? ಎಂಬುದನ್ನು ವಿವರಿಸಲಾಗುತ್ತದೆ. ಜೀವನು ಸಾಯುವಾಗ ಚಿತ್ತದಲ್ಲಿ ಏತರ ನೆನಪು ಬರುವದೋ ಅದಕ್ಕನುಗುಣವಾಗಿ ಸತ್ತಮೇಲೆ ಜನ್ಮವು ಒದಗುತ್ತದೆ. '**ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯನ್ತೇ ಕಲೇವರಮ್ । ತಂ ತಮೇವೈತಿ ಕೌನ್ತೇಯ ಸದಾ ತದ್ಭಾವಭಾವಿತಃ ॥**' (ಗೀ.೮- ೬) ಎಂಬ ಗೀತೋಕ್ತಿಗೆ ಇದೇ ಅಭಿಪ್ರಾಯ. ಸಾಯುವಾಗ ಒಳ್ಳೆಯ ಸ್ಮರಣೆಯು ಬರಬೇಕಾದರೆ ಈಗಿನಿಂದಲೂ ಅದೇ ಸ್ಮರಣೆಯು ಭಾವನೆಯು ಆಗುತ್ತಿರಬೇಕು. ಮನುಷ್ಯನು ಸಾಯುವಾಗ ಇಂದ್ರಿಯವ್ಯಾಪಾರಗಳೆಲ್ಲ ಲಿಂಗಶರೀರದಲ್ಲಿ ಅಡಕವಾಗಿ ನಿಂತುಹೋಗುತ್ತದೆ. ಆದರೆ ಪ್ರಾಣವೃತ್ತಿಯು ಮಾತ್ರ ನಿಂತಿರುವದಿಲ್ಲ. 'ಇನ್ನೂ ಉಸಿರಾಡುತ್ತಿದಾನೆ, ಜೀವವಿದೆ' ಎನ್ನುತ್ತಾರಲ್ಲವೆ? ಆ ಪ್ರಾಣವು ಉದಾನವೃತ್ತಿಯಿಂದೊಡಗೂಡಿಕೊಂಡು ಎಲ್ಲಿಗೆ ಹೋಗುವದೋ ಅಲ್ಲಿಗೇ ಜೀವನೂ ಹೋಗಿ ಕರ್ಮಕ್ಕೆ ತಕ್ಕಂತೆ ಫಲವನ್ನು ಅನುಭವಿಸುತ್ತಾನೆ.

ಇಲ್ಲಿಗೆ ಆಶ್ವಲಾಯನ ಕೌಸಲ್ಯನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳಿದಂತೆ ಆಯಿತು. ಇನ್ನು ಈ ಜ್ಞಾನದ ಫಲವನ್ನು ಹೇಳುವದಕ್ಕೆ ಪಿಪ್ಪಲಾದನು ಆರಂಭಿಸುತ್ತಾನೆ.

## ಪ್ರಾಣವಿಜ್ಞಾನದ ಫಲ

**ಯ ಏವಂ ವಿದ್ವಾನ್ ಪ್ರಾಣಂ ವೇದ । ನ ಹಾಸ್ಯ ಪ್ರಜಾ ಹೀಯತೇಽಮೃತೋ ಭವತಿ ತದೇಷ ಶ್ಲೋಕಃ ॥೧೧॥**

**ಉತ್ಪತ್ತಿಮಾಯತಿಂ ಸ್ಥಾನಂ ವಿಭುತ್ವಂ ಚೈವ ಪಞ್ಚಧಾ । ಅಧ್ಯಾತ್ಮಂ ಚೈವ ಪ್ರಾಣಸ್ಯ ವಿಜ್ಞಾಯಾಮೃತಮಶ್ನುತೇ ॥ ವಿಜ್ಞಾಯಾಮೃತಮಶ್ನುತ ಇತಿ ॥೧೨॥**

೧೧-೧೨. ಯಾವನು ಹೀಗೆಂದು ತಿಳಿದುಕೊಂಡು ಪ್ರಾಣವನ್ನು ಅರಿಯುವನೋ ಅವನ ಪ್ರಜೆ ನಾಶವಾಗುವದಿಲ್ಲ. ಅವನು ಅಮೃತನಾಗುವನು. ಅಲ್ಲಿ ಈ ಶ್ಲೋಕವಿದೆ :

"ಪ್ರಾಣನ ಹುಟ್ಟು, ಬರುವಿಕೆ, ಸ್ಥಾನವು, ವಿಭುತ್ವ, ಐದು ಬಗೆಯ ಅಧ್ಯಾತ್ಮ- ಇವುಗಳನ್ನು ಅರಿತುಕೊಂಡರೆ ಅಮೃತವನ್ನು ಪಡೆದುಕೊಳ್ಳುತ್ತಾನೆ, ಅರಿತುಕೊಂಡು ಅಮೃತವನ್ನು ಪಡೆದುಕೊಳ್ಳುತ್ತಾನೆ."

ಈವರೆಗೆ ವಿವರಿಸಿರುವಂತೆ ಪ್ರಾಣನ ಸ್ವರೂಪವನ್ನು ಯಾವನು ಅರಿತುಕೊಳ್ಳುತ್ತಾನೋ ಅವನ ಮಕ್ಕಳು ಮೊಮ್ಮಕ್ಕಳು- ಮುಂತಾದವರ ಸಂತತಿಯು ಕಡಿದುಹೋಗುವದಿಲ್ಲ, ಅವನ ವಂಶವು ಬೆಳೆದುಕೊಂಡೇ ಹೋಗುತ್ತಿರುವದು. ಇದು ಪ್ರಾಣೋಪಾಸನೆಯ ಐಹಿಕಫಲವು. ಪ್ರಾಣನನ್ನೇ ನಾನೆಂಬ ಭಾವನೆಯಿಂದ ಯಾವನು ಸಂತತವಾಗಿ ಸಾಯುವವರೆಗೂ ಉಪಾಸನೆಮಾಡುತ್ತಿದ್ದು ಕೊನೆಯಲ್ಲಿ ಪ್ರಾಣನೇ ನಾನು- ಎಂಬ ಭಾವನೆಯು ಗಟ್ಟಿಯಾಗಿ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವನೋ, ಅವನು ಶರೀರವನ್ನು ಬಿಟ್ಟಬಳಿಕ ಪ್ರಾಣಸಾಯುಜ್ಯವನ್ನೇ ಪಡೆಯುತ್ತಾನೆ, ಎಂದರೆ ಹಿರಣ್ಯಗರ್ಭಲೋಕಕ್ಕೆ ಹೋಗಿ ಬ್ರಹ್ಮಲೋಕವು ಇರುವವರೆಗೂ ಆಕಲ್ಪಾಂತವಾಗಿ ಅಲ್ಲಿ ಅಮರಣಸ್ವಭಾವನಾಗಿರುತ್ತಾನೆ. ಇದು ಪ್ರಾಣೋಪಾಸಕನಿಗೆ ಆಗುವ **ಆಪೇಕ್ಷಿಕಮುಕ್ತಿ.**

ಈ ಅಭಿಪ್ರಾಯವನ್ನು ಉಪನಿಷತ್ತಿನಲ್ಲಿ ಒಂದು ಮಂತ್ರದಲ್ಲಿ ಸಂಗ್ರಹಿಸಿ ಹೇಳಿರುತ್ತದೆ. ಪ್ರಾಣನು ಪರಮಾತ್ಮನಿಂದ ಹುಟ್ಟುತ್ತಾನೆಂಬುದು, ಮನಸ್ಸಿನ ಕರ್ಮಕ್ಕೆ ಅನುಗುಣವಾಗಿ ಈ ಶರೀರಕ್ಕೆ ಜೀವನು ಪ್ರಾಣಸಹಿತನಾಗಿ ಬರುವನೆಂಬುದು, ಐದನೆಯ ಮಂತ್ರದಲ್ಲಿ ಹೇಳಿರುವಂತೆ ಪಾಯೂಪಸ್ಥಗಳಲ್ಲಿಯೂ ಚಕ್ಷುಃಶ್ರೋತ್ರಗಳಲ್ಲಿಯೂ ಮುಖನಾಸಿಕಗಳಲ್ಲಿಯೂ ಶರೀರದ ನಡುವೆಯೂ ಇರುವನೆಂಬುದು, ಚಕ್ರವರ್ತಿಯು ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಅವರವರ

ಅಧಿಕಾರವನ್ನು ನಿಯಮಿಸುವಂತೆ ಐದು ಪ್ರಕಾರದಿಂದ ಅಲ್ಲಲ್ಲಿ ಇರಿಸಿರುವದು, ಹೊರಗೆ ಆದಿತ್ಯಾದಿರೂಪಗಳಿಂದಲೂ ಒಳಗೆ ಚಕ್ಷುರಾದಿರೂಪದಿಂದಲೂ ಇದ್ದುಕೊಂಡಿರುವನೆಂಬುದು- ಇವುಗಳನ್ನೆಲ್ಲ ಅರಿತುಕೊಂಡವನು ಅಮೃತವನ್ನು ಹೊಂದುತ್ತಾನೆ, ಮುಕ್ತನಾಗುತ್ತಾನೆ- ಎಂಬುದು ಮಂತ್ರದ ಅಭಿಪ್ರಾಯ.

ವೇದಗಳ ಬ್ರಾಹ್ಮಣಗಳಲ್ಲಿ ಪ್ರಾಣನ ಮಹಿಮೆಯನ್ನು ಬಹಳ ಕೊಂಡಾಡಿರುತ್ತದೆ. 'ಪ್ರಾಣ' ಎಂಬ ಶಬ್ದವು ವ್ಯಾಪಾರವನ್ನು ಮಾಡುವವನು- ಎಂಬ ಕ್ರಿಯಾಪ್ರಧಾನವಾದ ಹೆಸರಾದರೂ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಮುಖ್ಯಪ್ರಾಣ- ಇವೆಲ್ಲವನ್ನೂ ಸೇರಿಸಿಕೊಂಡೇ ಇಲ್ಲಿ ಪ್ರಾಣಶಬ್ದವನ್ನು ಉಪಯೋಗಿಸಿರುತ್ತದೆ. ಆಧಿದೈವಿಕವಾಗಿ ಜ್ಞಾನಾನಂದಗಳ ಉತ್ಕರ್ಷವನ್ನು ಪಡೆದಿರುವ ಹಿರಣ್ಯಗರ್ಭನನ್ನೇ ವಾಯು, ಸೂತ್ರಾತ್ಮ- ಎಂಬ ಹೆಸರಿನಿಂದ ಕರೆಯುತ್ತಾರೆ. ಆ ವಾಯು, ಸೂತ್ರಾತ್ಮ- ಎಂಬ ಹೆಸರಿನ ಹಿರಣ್ಯಗರ್ಭನ ಅನುಗ್ರಹದಿಂದಲೇ ಎಲ್ಲಾ ಪ್ರಾಣಿಗಳ ಆಧ್ಯಾತ್ಮಿಕವ್ಯಾಪಾರಗಳೂ ನಡೆಯುತ್ತಿರುತ್ತವೆ.

ಈ ಪ್ರಕರಣವು ಮುಖ್ಯವಾಗಿ ಪರಬ್ರಹ್ಮತತ್ತ್ವವನ್ನು ತಿಳಿಸುವದಕ್ಕೇ ಬಂದಿದೆಯಾದರೂ ಇಲ್ಲಿಯವರೆಗೂ ಅಪರವಿದ್ಯೆಯ ವಿವರಣೆಯನ್ನು ಅನುವಾದ ಮಾಡಿಕೊಂಡಿರುತ್ತದೆ. ಪರವಿದ್ಯೆಗೆ ಯಾರು ಅಧಿಕಾರಿಗಳಲ್ಲವೋ ಅವರಿಗೆ ಕರ್ಮಸಹಿತವಾದ ಉಪಾಸನೆಯಿಂದ ದೊರಕುವ ಫಲವನ್ನು ಇಲ್ಲಿ ಅವಾಂತರ ತಾತ್ಪರ್ಯದಿಂದ ಉಪಸಂಹಾರಮಾಡಿಕೊಂಡಿದೆಯಾದರೂ ಈ ಅಪರವಿದ್ಯೆಯು ಜ್ಞಾನಕ್ಕೂ ಅಂಗವಾಗುತ್ತದೆ ಎಂದು ತಿಳಿಸಿಕೊಡುವದಕ್ಕಾಗಿ ಮತ್ತೆ ಇಲ್ಲಿ ಅನುವಾದ ಮಾಡಿರುತ್ತದೆ. ಜ್ಞಾನಪ್ರಕರಣದಲ್ಲಿ ಹೇಳಿರುವ ಇಂಥ ಉಪಾಸನೆಗಳಿಗೆಲ್ಲ ಹೀಗೆಯೇ ಅಧಿಕಾರಭೇದದಿಂದ ಬೇರೆಬೇರೆಯ ಫಲಗಳು ಆಗುವವೆಂದು ತಿಳಿಯಬೇಕು. ಇಲ್ಲಿಗೆ ಮೂರನೆಯ ಪ್ರಶ್ನೆ ಮುಗಿಯಿತು.

# ೪. ನಾಲ್ಕನೆಯ ಪ್ರಶ್ನೆ : ಅವಸ್ಥಾತ್ರಯವಿಚಾರ

## ಗಾರ್ಗ್ಯನ ಪ್ರಶ್ನೆಗಳು

*ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ । ಭಗವನ್ನೇತಸ್ಮಿನ್ ಪುರುಷೇ ಕಾನಿ ಸ್ವಪನ್ತಿ ಕಾನ್ಯಸ್ಮಿಞ್ಜಾಗ್ರತಿ ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ ಕಸ್ಯೈತತ್ ಸುಖಂ ಭವತಿ ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವನ್ತಿ ॥೧॥*

೧. ಆಮೇಲೆ ಈತನನ್ನು ಸೌರ್ಯಾಯಣಿಗಾರ್ಗ್ಯನು ಕೇಳಿದನೇನೆಂದರೆ: ಭಗವಂತನೆ, ಈ ಪುರುಷನಲ್ಲಿ ಯಾವವು ನಿದ್ರಿಸುವವು? ಇದರಲ್ಲಿ ಯಾವವು ಎಚ್ಚತ್ತಿರುವವು, ಕನಸುಗಳನ್ನು ನೋಡುವ ಈ ದೇವನು ಯಾವನು? ಈ ಸುಖವು ಯಾರಿಗಾಗುವದು? ಯಾರಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗುತ್ತಾರೆ?

## ಪ್ರಶ್ನೆಗಳ ಅಭಿಪ್ರಾಯ

ಈವರೆಗೆ ಶರೀರ, ಇಂದ್ರಿಯಗಳು ಮತ್ತು ಮುಖ್ಯಪ್ರಾಣ- ಇವುಗಳ ವಿಷಯದ ಪ್ರಶ್ನೆಗಳನ್ನು ಕೇಳಿದ್ದಾಯಿತು. ಈಗ ಈ ಕಾರ್ಯಕರಣಸಂಘಾತಕ್ಕಿಂತ ವ್ಯತಿರಿಕ್ತನಾದ ಆತ್ಮನ ಸ್ವರೂಪವನ್ನು ತಿಳಿಯಿಸಬೇಕಾಗಿದೆ. ಆದ್ದರಿಂದ ಶ್ರುತಿಯು ಗಾರ್ಗ್ಯನ ಮೂಲಕವಾಗಿ ಈ ಪ್ರಶ್ನೆಗಳನ್ನು ಮುಂದೊಡ್ಡಿರುತ್ತದೆ.

ಇಲ್ಲಿ ಕೇಳಿರುವ ಪ್ರಶ್ನೆಗಳಿವು : ಈ ಶರೀರದಲ್ಲಿ ಯಾವ ಕರಣಗಳು ನಿದ್ರಿಸುವವು? ಯಾವವು ಎಚ್ಚತ್ತುಕೊಂಡೇ ಇರುವವು? ಈ ಎರಡು ಪ್ರಶ್ನೆಗಳೂ ಆತ್ಮನ ಸ್ವರೂಪವನ್ನು ನಿರ್ಧರಿಸುವದಕ್ಕೆ ಸಹಾಯಕವಾಗಿರುತ್ತವೆ; ಹೇಗೆಂದರೆ ಶರೀರದ ಕಾರ್ಯವನ್ನು ನಿರ್ವಹಿಸುವದಕ್ಕೆ ಎಚ್ಚರದಲ್ಲಿ ಸಾಧಕವಾಗಿರುವ ಕರಣಗಳು, ಎಚ್ಚರದವಸ್ಥೆಯನ್ನು ಬಿಟ್ಟಾಗ ತಮ್ಮ ಕಾರ್ಯವನ್ನು ನಿಲ್ಲಿಸಿಬಿಡುವವಾದ್ದರಿಂದ ಅವುಗಳು ಆತ್ಮನಿಗೆ ಸಂಬಂಧಪಟ್ಟಿಲ್ಲವೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಎಚ್ಚರದವಸ್ಥೆಯು ಇಲ್ಲವಾದ ಮಾತ್ರಕ್ಕೆ ನಮ್ಮ ಆತ್ಮನೇ, ಎಂದರೆ ನಮ್ಮ ನಿಜವಾದ ಸ್ವರೂಪವೇ, ಇಲ್ಲವೆಂದೇನೂ ನಾವುಗಳು ಭಾವಿಸುತ್ತಿರುವದಿಲ್ಲ. ಇನ್ನು ಎಚ್ಚರದವಸ್ಥೆಯನ್ನು ಬಿಟ್ಟಮೇಲೂ ಶರೀರವನ್ನು ಬಿಡದೆ ಕಾಪಾಡಿಕೊಂಡಿರುವದಕ್ಕೆ ಸಾಧಕವಾಗಿರುವ ಕರಣಗಳು ಎಷ್ಟರಮಟ್ಟಿಗೆ ಆತ್ಮನಿಗೆ ಸಂಬಂಧಪಟ್ಟಿವೆ ಎಂಬುದನ್ನು ಸ್ವಲ್ಪ ಹೆಚ್ಚು ಸೂಕ್ಷ್ಮವಾದ ದೃಷ್ಟಿಯಿಂದ ನಿರ್ಧರಿಸಬೇಕಾಗುತ್ತದೆ.

ಇನ್ನು ಮೂರನೆಯ ಪ್ರಶ್ನೆ ಏನೆಂದರೆ ಕನಸುಗಳನ್ನು ನೋಡುವ ಈ ದೇವನು ಯಾವನು? ಈ ಪ್ರಶ್ನೆಯಲ್ಲಿ 'ದೇವ' ಎಂಬ ಮಾತಿನಿಂದ ಚೈತನ್ಯವುಳ್ಳಂತೆ ಕಾಣುತ್ತಿರುವ ಶರೀರ ಮತ್ತು ಇಂದ್ರಿಯಗಳು, ಪ್ರಾಣ ಎಲ್ಲವನ್ನೂ ಗ್ರಹಿಸಬೇಕು. ಶರೀರವು ಕಾರ್ಯರೂಪವಾದ ದೇವನು, ಮಿಕ್ಕವುಗಳು ಕರಣರೂಪರಾದ 'ದೇವರು'ಗಳು. ಮನುಷ್ಯರಿಗೆ ಎಚ್ಚರದವಸ್ಥೆಯು ಹೋಗಿ ಕನಸಿನವಸ್ಥೆಯು ಬಂದಾಗ ಅವನಿಗೆ ಎಚ್ಚರದಂತೆಯೇ ಕಾಣುವ ಬೇರೆಯ ಹುಸಿತೋರಿಕೆಗಳು ಆಗಾಗ್ಗೆ ಕಾಣುತ್ತಿರುವವು. ಆಗ ಆ ಕನಸಿನ ದೃಶ್ಯಗಳನ್ನು ಕಾಣುವದಕ್ಕೆ ಅವನಿಗೆ ಸಾಧನವಾಗಿರುವದು ಯಾವದು? ಶರೀರವೊ, ಅಥವಾ ಬೇರೆ ಯಾವದಾದರೊಂದು ಕರಣವೊ? -ಎಂಬುದು ಈ ಪ್ರಶ್ನೆಯಲ್ಲಿ ಅಡಗಿರುವ ಅಭಿಪ್ರಾಯ.

ನಾಲ್ಕನೆಯ ಪ್ರಶ್ನೆಯು ಗಾಢನಿದ್ರೆಯನ್ನು ಕುರಿತದ್ದು. ನಿದ್ರೆಯನ್ನು ಅನುಭವಿಸುವಾಗ ಆಗುವ ಸುಖವು ಎಚ್ಚರಕನಸುಗಳಲ್ಲಿ ವಿಷಯಾನುಭವದಿಂದ ಆಗುತ್ತಿರುವ ಸುಖಕ್ಕಿಂತ ವಿಲಕ್ಷಣವಾಗಿರುವದೆಂಬುದು ಎಲ್ಲರಿಗೂ ಅನುಭವದಲ್ಲಿದೆ; ಈ ಸುಖವು ಯಾರಿಗೆ ಆಗುತ್ತದೆ? ಅದು ಶರೀರಕ್ಕೊ, ಇಂದ್ರಿಯಗಳಿಗೊ, ಪ್ರಾಣಕ್ಕೊ ಅಥವಾ ಇವೆಲ್ಲಕ್ಕಿಂತ ವ್ಯತಿರಿಕ್ತನಾಗಿರುವ ಆತ್ಮನಿಗೊ? ನಿದ್ರೆಯಿಂದ ಎಚ್ಚೆತ್ತಮೇಲೂ ಶರೀರವು ಲಘುವಾಗಿರುತ್ತದೆ, ಇಂದ್ರಿಯಗಳು ಪ್ರಸನ್ನವಾಗಿರುತ್ತವೆಯಲ್ಲವೆ? ಆ ಸುಖವು ಶರೀರೇಂದ್ರಿಯಾದಿಗಳಿಗೇ ಯಾವದೋ ಒಂದು ರೀತಿಯಿಂದ ಆಗುತ್ತಿರಬಹುದೆ? ಅಥವಾ ಮತ್ತೊಬ್ಬರಿಗೇ ಆಗುತ್ತಿದ್ದು ಕಾರಣಾಂತರದಿಂದ ಈ ಶರೀರಾದಿಗಳಿಗೂ ಆಗುತ್ತಿರುವದೊ? - ಎಂಬುದು ಪ್ರಶ್ನೆಯನ್ನು ಮಾಡಿದವನ ಮನಸ್ಸಿನಲ್ಲಿ ಹುದುಗಿರುವ ಆಶಯ.

ಐದನೆಯ ಪ್ರಶ್ನೆಯೂ ತನಿನಿದ್ರೆಯನ್ನು ಕುರಿತದ್ದೇ. ಆಗ್ಗೆ ನಮಗೆ ಶರೀರ ಇಂದ್ರಿಯ, ಪ್ರಾಣ, ಮನಸ್ಸು- ಇವುಗಳು ಇರುವವೆಂಬ ಅರಿವೇ ಆಗುವದಿಲ್ಲವಲ್ಲ! ಇದೇಕೆ? ಇವುಗಳು ಅನೇಕ ಹೂಗಳ ರಸಗಳು ಸೇರಿ ಜೇನುತುಪ್ಪವೆಂಬ ಒಂದೇ ಒಂದು ವಿಲಕ್ಷಣವಾದ ರುಚಿಯ ಪದಾರ್ಥವಾಗುವಂತೆ, ಅಥವಾ ಅನೇಕ ನದಿಗಳು ಹರಿಯುತ್ತಾ ಹೋಗಿ ಸಮುದ್ರದಲ್ಲಿ ಸೇರಿದಬಳಿಕ ಎಲ್ಲರೂ 'ಸಮುದ್ರ'ವೇ ಆಗಿಬಿಡುವಂತೆ ತಮ್ಮ ವ್ಯಕ್ತಿತ್ವವನ್ನೆಲ್ಲ ಕಳೆದುಕೊಂಡುಬಿಟ್ಟಿರುವವಲ್ಲ! ಆಗ ಇವೆಲ್ಲ ಏತರಲ್ಲಿ ಒಂದಾಗಿಬಿಟ್ಟಿರುವವು? -ಎಂಬುದು ಪ್ರಶ್ನೆಯನ್ನು ಕೇಳಿರುವ ಗಾರ್ಗ್ಯನ ಮನಸ್ಸಿನಲ್ಲಿರುವ ಭಾವ.

ಈ ಐದು ಪ್ರಶ್ನೆಗಳ ಗುಂಪಿಗೂ ಹಿಂದಿನ ಮೂರು ಪ್ರಶ್ನೆಗಳಿಗೂ ಇರುವ ಒಂದು ಮುಖ್ಯವೈಲಕ್ಷಣವನ್ನು ಇಲ್ಲಿ ಮನದಂದುಕೊಳ್ಳಬೇಕು. ಮೊದಲನೆಯ ಪ್ರಶ್ನೆಯಲ್ಲಿ ಶರೀರಾದಿಗಳುಳ್ಳ ಜೀವರು ಹೇಗೆ ಹುಟ್ಟುತ್ತಾರೆ? - ಎಂದು ಕೇಳಿದೆ; ಎರಡನೆಯ ಪ್ರಶ್ನೆಯಲ್ಲಿ ಶರೀರವನ್ನು ಧರಿಸಿರುವ ಕರಣಗಳು ಯಾವವು? ಅವುಗಳಲ್ಲಿ ಶ್ರೇಷ್ಠನು ಯಾರು? -ಎಂದು ಕೇಳಿದೆ. ಮೊದಲನೆಯದು ಸ್ಥೂಲ ಶರೀರದ ಪ್ರಶ್ನೆ, ಎರಡನೆಯದು ಸೂಕ್ಷ್ಮಶರೀರದ ವಿಷಯವಾದದ್ದು, ಮೂರನೆಯ ಪ್ರಶ್ನೆಯು ಸೂಕ್ಷ್ಮಶರೀರದ ಸಾರವಾದ ಪ್ರಾಣನ ಉತ್ಪತ್ತ್ಯಾದಿಗಳನ್ನು ಕುರಿತದ್ದಾಗಿರುತ್ತದೆ. ಇದಿಷ್ಟೂ ಅಪರವಿದ್ಯೆಯ ವಿಷಯ. ಸಮಷ್ಟಿಯಾಗಿರುವ ಪ್ರಾಣನೇ ಹಿರಣ್ಯಗರ್ಭನು; ಅವನ ಉಪಾಸನೆಯಿಂದ ಬ್ರಹ್ಮಲೋಕಪ್ರಾಪ್ತಿಯಾಗುತ್ತದೆ. ವ್ಯಾಕೃತಪ್ರಪಂಚದಲ್ಲಿ ಕರ್ಮೋಪಾಸನೆಗಳ ಸಮುಚ್ಚಯದಿಂದ ಸಿಕ್ಕುವ ಪರಮಫಲವೆಂದರೆ ಬ್ರಹ್ಮಲೋಕಪ್ರಾಪ್ತಿ. ಇದನ್ನೇ ಸಾಧ್ಯಸಾಧನ ಲಕ್ಷಣವೆಂದೂ ಕ್ರಿಯಾಕಾರಕಫಲಾತ್ಮಕವೆಂದೂ ಸಂಸಾರವೆಂದೂ ಆಚಾರ್ಯರು ಸಂಗ್ರಹಿಸಿ ಹೇಳಿರುತ್ತಾರೆ.

ಈಗ ಕೇಳಿರುವ ಪ್ರಶ್ನೆಯು ಸಾಧ್ಯಸಾಧನರೂಪವಾದ ವ್ಯಾಕೃತಪ್ರಪಂಚಕ್ಕೆ ಸೇರಿದ್ದಲ್ಲ. ಇಲ್ಲಿ ಈ ಕಾರ್ಯಕರಣಸಂಘಾತಕ್ಕೆ ಒಡೆಯನಾಗಿರುವ ಜೀವನ ವ್ಯಾವಹಾರಿಕಸ್ವರೂಪವೇನು? ಇವನ ನಿಜವಾದ ಸ್ವರೂಪ ಯಾವದು? ಇವನಿಗೆ ಎಚ್ಚರ, ಕನಸು, ಗಾಢನಿದ್ರೆ- ಎಂಬ ಮೂರು ಅವಸ್ಥೆಗಳು ಆಗುತ್ತಿರುವವಲ್ಲ, ಇವೇನು ಇವನಿಗೆ ಸ್ವಾಭಾವಿಕವಾಗಿ ಸೇರಿಕೊಂಡಿವೆಯೊ, ಅಥವಾ ಆಗಂತುಕವಾಗಿರುವವೊ? ಇವು ಆಗಂತುಕವಾಗಿರುವ ಅನಾತ್ಮವಸ್ತುಗಳೆಂದರೆ ಇವುಗಳ ಸಂಪರ್ಕವಿಲ್ಲದ ಶುದ್ಧವಾದ ಆತ್ಮಸ್ವರೂಪವು ಹೇಗಿರುವದು? ಅದನ್ನು ಗೊತ್ತುಪಡಿಸಿಕೊಳ್ಳುವದಕ್ಕೆ ನಮಗೆ ಯಾವ ಸಾಧನವಿದೆ? ಆತ್ಮನಿಗೆ ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು- ಎಂಬಿವೇನು ಯಾವಾಗಲೂ ಅಂಟಿಕೊಂಡೇ ಇರುವವೊ, ಅಥವಾ ಅಪ್ರಾಣವಾದ, ಅಮನಸ್ಕವಾದ, ಶುದ್ಧವಾದ ಬೇರೊಂದು ಸ್ವರೂಪವೂ ಇದೆಯೊ? -ಎಂಬುದನ್ನು ತಿಳಿಯುವದಕ್ಕೆ ಈ ಪ್ರಶ್ನೆಯು ಬಂದಿರುತ್ತದೆ. ಶ್ರುತಿಯು ಮೊದಲನೆಯ ಮೂವರು ಶಿಷ್ಯರ ಪ್ರಶ್ನೆಗಳ ರೂಪದಿಂದ ಅಪರವಿದ್ಯೆಯ ಕ್ಷೇತ್ರವನ್ನು ತಿಳಿಸಿಕೊಟ್ಟು, ಈಗ ಪರವಿದ್ಯೆಯ ವಿಷಯವಾದ 'ಸತ್ಯ', 'ಪುರುಷ', 'ಅಕ್ಷರ'- ಎಂಬ ಹೆಸರುಗಳಿಂದ ಮುಂಡಕದಲ್ಲಿ ವರ್ಣಿಸಿರುವ ಪರಮಾರ್ಥತತ್ತ್ವವನ್ನು ತಿಳಿಸುವದಕ್ಕೆಂದು ಈ ಅವಸ್ಥಾತ್ರಯಪರೀಕ್ಷೆಯ ಪ್ರಶ್ನೆಯನ್ನು ಎತ್ತಿಕೊಂಡಿರುತ್ತದೆ.

## ಕರಣಗಳ ನಿದ್ರೆ

*ತಸ್ಮೈ ಸ ಹೋವಾಚ । ಯಥಾ ಗಾರ್ಗ್ಯ ಮರೀಚಯೋಽರ್ಕಸ್ಯಾಸ್ತಂ ಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಣ್ಡಲೇ ಏಕೀಭವನ್ತಿ । ತಾಃ ಪುನಃ ಪುನರುದಯತಃ ಪ್ರಚರನ್ತ್ಯೇವಂ ಹ ವೈ ತತ್ಸರ್ವಂ ಪರೇ ದೇವೇ ಮನಸ್ಯೇಕೀ ಭವತಿ । ತೇನ ತರ್ಹ್ಯೇಷ ಪುರುಷೋ ನ ಶೃಣೋತಿ ನ ಪಶ್ಯತಿ ನ ಜಿಘ್ರತಿ ನ ರಸಯತೇ ನ ಸ್ಪೃಶತೇ ನಾಭಿವದತೇ ನಾದತ್ತೇ ನಾನನ್ದಯತೇ ನ ವಿಸೃಜತೇ ನೇಯಾಯತೇ ಸ್ವಪಿತೀತ್ಯಾಚಕ್ಷತೇ ॥೨॥*

೨. ಅವನಿಗೆ ಆತನು ಹೇಳಿದನೇನೆಂದರೆ, "ಎಲೈ ಗಾರ್ಗ್ಯನೇ, ಹೇಗೆ ಸೂರ್ಯನು ಅಸ್ತವಾಗುತ್ತಿರಲು ಕಿರಣಗಳೆಲ್ಲವೂ ಈ ತೇಜೋಮಂಡಲದಲ್ಲಿ ಒಂದಾಗಿಬಿಡುವವೋ, ಅವನು ಉದಯಿಸಲಾಗಿ ಹೇಗೆ ಅವು ಮತ್ತೆ ಹೊರಟುಬರುವವೋ, ಹೀಗೆಯೇ ಅದೆಲ್ಲವೂ ಪರದೇವನಾದ ಮನಸ್ಸಿನಲ್ಲಿ ಒಂದಾಗಿಬಿಡುತ್ತದೆ. ಆದ್ದರಿಂದ ಆಗ ಈ ಪುರುಷನು (ಏನನ್ನೂ) ಕೇಳುವದಿಲ್ಲ, ಕಾಣುವದಿಲ್ಲ, ಮೂಸುವದಿಲ್ಲ, ಸವಿಯುವದಿಲ್ಲ, ಸೋಕುವದಿಲ್ಲ, ನುಡಿಯುವದಿಲ್ಲ, ತೆಗೆದುಕೊಳ್ಳುವದಿಲ್ಲ, ಸುಖಪಡುವದಿಲ್ಲ, ಬಿಡುವದಿಲ್ಲ, ಹೋಗುವದಿಲ್ಲ. (ಸ್ವಪಿತಿ) ನಿದ್ರಿಸುತ್ತಿರುತ್ತಾನೆ ಎಂದು ಹೇಳುತ್ತಾರೆ.

ಯಾವವು ನಿದ್ರಿಸುತ್ತವೆ? -ಎಂದು ಕೇಳಿದ ಪ್ರಶ್ನೆಗೆ ಉತ್ತರವಿದು. ಸೂರ್ಯನು ಹುಟ್ಟಿ ಆಕಾಶದಲ್ಲಿ ಸಂಚರಿಸುತ್ತಿರುವಾಗ ಅವನಿಂದ ಕಿರಣಗಳು ಹೊರಟು ಸುತ್ತಮುತ್ತಲೂ ಹರಡಿಕೊಂಡಿರುತ್ತವೆ; ಅವನು ಮುಳುಗುತ್ತಲೂ ಅವನಲ್ಲಿ ಸೇರಿಬಿಡುತ್ತವೆ. ಅಲ್ಲವೆ? ಸೂರ್ಯನು ಮುಳುಗಿದಾಗ ಕಿರಣಗಳೆಲ್ಲ ಎಲ್ಲಿರುತ್ತವೆ? ಸೂರ್ಯನಲ್ಲಿಯೇ ಸೇರಿಹೋಗಿರುತ್ತವೆ. ಅವನು ಹುಟ್ಟುತ್ತಲೂ ಹೊರಹೊರಟು ವಸ್ತುಗಳನ್ನು ಬೆಳಗುತ್ತಿರುತ್ತವೆ. ಅದರಂತೆಯೇ ಎಚ್ಚರವು ಮುಗಿದಮೇಲೆ ಅಡಗಿಹೋಗುವ ಭಾಗಗಳೆಲ್ಲವೂ ಮನಸ್ಸೆಂಬ ಪರದೇವನಲ್ಲಿ ಒಂದಾಗಿರುತ್ತವೆ, ಅವನಿಂದಲೇ ಹೊರಕ್ಕೆ ಬರುತ್ತವೆ.

ಎಚ್ಚರದಲ್ಲಿ, ಶರೀರ, ಮನಸ್ಸು, ಇಂದ್ರಿಯಗಳು, ವಿಷಯಗಳು- ಎಂದು ವಿಂಗಡವಾಗಿ ಕಾಣಿಸುತ್ತಿರುವದೆಲ್ಲವೂ ನಿಜವಾಗಿ ಮನಸ್ಸೊಂದೇ, ಶರೀರವು ಚೇತನವಾಗಿರುವಂತೆ ಕಾಣುವದು, ಇಂದ್ರಿಯಗಳು, ತಮ್ಮ ತಮ್ಮ ವಿಷಯವನ್ನು ಬೆಳಗಿತೋರಿಸುತ್ತಿರುವಂತೆ ಕಾಣುವದು, ವಿಷಯಗಳು ಇಂದ್ರಿಯಗಳ ಚೈತನ್ಯದ ಬೆಳಕಿನಿಂದ ತಿಳಿಯುಬರುವಂತೆ ಕಾಣಿಸಿಕೊಳ್ಳುವದು-ಇವೆಲ್ಲವೂ ಮನಸ್ಸಿನ

ಮಹಿಮೆಯೇ. ಆದ್ದರಿಂದ ಮನಸ್ಸು ಪರದೇವನು. ಮಹಾಪ್ರಕಾಶವಂತ ತತ್ತ್ವವು. ಎಚ್ಚರವಾಗಿರುವಾಗ ಮನಸ್ಸು. ಇಂದ್ರಿಯಗಳು, ವಿಷಯಗಳು- ಎಂದು ಬಿಡಿಬಿಡಿಯಾಗಿ ತೋರುತ್ತಿದ್ದರೂ ಇದೆಲ್ಲವೂ ಮನಸ್ಸೇ ಎಂಬುದನ್ನು ನಾವು ಸ್ವಲ್ಪ ವಿಚಾರ ಮಾಡಿದರೂ ಗೊತ್ತುಮಾಡಿಕೊಳ್ಳಬಹುದು. ಹೇಗೆಂದರೆ ಇಂದ್ರಿಯಗಳಿಲ್ಲದೆ ಅವುಗಳ ಬೆಳಕಿನ ಸಹಾಯವಿಲ್ಲದೆ ವಿಷಯಗಳು ತಾವುತಾವೇ ತೋರಿಕೊಳ್ಳಲಾರವು. ವಸ್ತುಗಳು ಬೇರೆಯಾಗಿರುವವೆಂದೂ ಅವುಗಳನ್ನು ಇಂದ್ರಿಯಗಳು ಬೆಳಗುವವೆಂದೂ ಎಚ್ಚರದಲ್ಲಿ ನಮಗೆ ತೋರುವದು ನಿಜ; ಆದರೆ ಇಂದ್ರಿಯಗಳ ಹಂಗಿಲ್ಲದೆ ಸ್ವತಂತ್ರವಾಗಿರುವ ವಿಷಯಗಳನ್ನು ನಾವು ಕಲ್ಪಿಸಿಕೊಳ್ಳುವದಕ್ಕೂ ಆಗುವಂತಿಲ್ಲ. ಮನಸ್ಸು ಸ್ವಲ್ಪ ಅತ್ತಿತ್ತ ಚಲಿಸಿದರೂ ಇಂದ್ರಿಯಗಳು ಏನನ್ನು ನೋಡಿದವು, ಕೇಳಿದವು- ಎಂದು ಮುಂತಾಗಿ ನಿರ್ಧರಿಸುವದು ಆಗಲಾರದು.

ಎಚ್ಚರದಲ್ಲಿ ವಿವಿಕ್ತವಾಗಿ ಇದನ್ನು ತಿಳಿದುಕೊಳ್ಳುವದು ಸ್ಥೂಲಬುದ್ಧಿಯುಳ್ಳವರಿಗೆ ಕಷ್ಟವೆಂದು ತೋರಿದರೂ ಕನಸಿನಲ್ಲಿ ಇದು ಸ್ಪಷ್ಟವಾಗಿಬಿಡುತ್ತದೆ. ಹೇಗೆಂದರೆ, ಕನಸಿನಲ್ಲಿ ನಾವು ವಿಷಯಗಳನ್ನು ನೋಡುವಂತೆ ಅನುಭವವಾದರೂ ಎಚ್ಚರದಲ್ಲಿ ಕಾಣುವ ವಿಷಯಗಳನ್ನು ಕಾಣುತ್ತಿರುವದಿಲ್ಲ; ಹೀಗೆ ಅಲ್ಲಿ ಕೇಳುವದು, ಮೂಸುವದು, ಮುಟ್ಟುವದು- ಮುಂತಾದ ತೋರಿಕೆಗಳಿದ್ದರೂ ಎಚ್ಚರದ ಶಬ್ದವನ್ನೇನೂ ನಾವು ಕೇಳುತ್ತಿರುವದಿಲ್ಲ, ಅಲ್ಲಿಯ ವಸ್ತುವಿನ ವಾಸನೆಯನ್ನೇನೂ ಮೂಸುತ್ತಿರುವದಿಲ್ಲ. ಆ ವಸ್ತುವನ್ನೇನೂ ಮುಟ್ಟುತ್ತಿರುವದಿಲ್ಲ. ಎಚ್ಚತ್ತಿರುವಾಗಿನ ಇಂದ್ರಿಯಗಳು ನೋಡುವದಾಗಿದ್ದರೆ ಎಚ್ಚರದ ವಿಷಯಗಳು ಕಾಣಬೇಕಾಗಿತ್ತು: ಆದರೆ ಕನಸಿನಲ್ಲಿ ನಮಗೆ ಎಚ್ಚರದ ವಿಷಯಗಳೇನೂ ಒಂದಿಷ್ಟೂ ಕಾಣಿಸುವದಿಲ್ಲ. ಆದ್ದರಿಂದ ಮನಸ್ಸು ಎಚ್ಚರದಿಂದ ಕನಸಿಗೆ ಬಂದಾಗ ಎಚ್ಚರದ ಇಂದ್ರಿಯಗಳಿಗೂ ವಿಷಯಗಳಿಗೂ ಇರವೇ ಇಲ್ಲವೆಂದಾಯಿತು. ಆದ್ದರಿಂದ ಜನರು ಇವನು 'ನಿದ್ರಿಸುತ್ತಿರುತ್ತಾನೆ' ಎನ್ನುತ್ತಾರೆ.

ಇಲ್ಲಿ ವಿಚಾರಮಾಡಬೇಕಾದ ಒಂದು ತತ್ತ್ವವಿದೆ : ನಾವು ಕನಸುಗಳನ್ನು ಕಾಣುತ್ತಿರುವಾಗ ಎಚ್ಚರದ ಪ್ರಪಂಚವೂ ಅಲ್ಲಿರುವ ಜೀವರೂ ವಸ್ತುಗಳೂ ಹಾಗೆಯೇ ಇರುವವೆ, ಅಥವಾ ಅಷ್ಟು ಮಾತ್ರದಿಂದ ಮರೆಯಾಗಿಬಿಡುವವೆ? ಮನಸ್ಸೇ ಇಂದ್ರಿಯಾದಿಗಳ ರೂಪವಾಗಿದ್ದರೆ, ಮನಸ್ಸು ಕನಸನ್ನು ಕಾಣುತ್ತಿರುವಾಗ ಎಚ್ಚರದ ಇಂದ್ರಿಯಾದಿಗಳು ಇಲ್ಲವೆಂದೇ ಆಗುತ್ತದೆ. ಆದರೆ ಒಬ್ಬನು ನಿದ್ರಿಸುತ್ತಾ ಕನಸನ್ನು ಕಾಣುತ್ತಿರುವಾಗ ಮತ್ತೊಬ್ಬನು ಎಚ್ಚರವಾಗಿರುವದಿಲ್ಲವೆ? ಎಲ್ಲರ ಅನುಭವದಲ್ಲಿಯೂ

ಇರುವ ಈ ವಿಷಯವನ್ನು ಅಲ್ಲಗಳೆಯುವದು ಹೇಗೆ ಸರಿಯಾದೀತು? ಈ ಆಕ್ಷೇಪಕ್ಕೆ ಪರಿಹಾರವನ್ನು ಮುಂದೆ ವಿಸ್ತಾರವಾಗಿ ಈ ವಿಚಾರವನ್ನು ಮಾಡುವಾಗ ಹೇಳುವೆವು. ಈಗ ಇಷ್ಟನ್ನು ಮನದಂದುಕೊಂಡರೆ ಸಾಕಾಗಿದೆ : ಎಚ್ಚರದ ಇಂದ್ರಿಯಗಳು ಕನಸಿನಲ್ಲಿ ಕೆಲಸಮಾಡುತ್ತಿರುವದಿಲ್ಲ. ಏಕೆಂದರೆ ಮನುಷ್ಯನು ಆಗ ನಿದ್ರಾದೋಷದಿಂದ ಕನಸನ್ನು ಕಾಣುತ್ತಿರುತ್ತಾನೆ ; ನಿದ್ರಿಸುತ್ತಿರುವಾಗ ಮನಸ್ಸಿನಲ್ಲಿ ಇಂದ್ರಿಯಗಳೆಲ್ಲವೂ ಒಂದಾಗಿಬಿಟ್ಟಿರುತ್ತವೆ.

## ಪ್ರಾಣಗಳ ಎಚ್ಚರ - ಪ್ರಾಣಾಗ್ನಿಹೋತ್ರ

*ಪ್ರಾಣಾಗ್ನಯ ಏವೈತಸ್ಮಿನ್ ಪುರೇ ಜಾಗ್ರತಿ । ಗಾರ್ಹಪತ್ಯೋ ಹ ವಾ ಏಷೋಽಪಾನೋ ವ್ಯಾನೋಽನ್ವಾಹಾರ್ಯಪಚನೋ ಯದ್ಗಾರ್ಹಪತ್ಯಾತ್ ಪ್ರಣೀಯತೇ ಪ್ರಣಯನಾದಾಹವನೀಯಃ ಪ್ರಾಣಃ ॥೩॥*

*ಯದುಚ್ಛ್ವಾಸನಿಃಶ್ವಾಸಾವವೇತಾವಾಹುತೀ ಸಮಂ ನಯತೀತಿ ಸ ಸಮಾನಃ । ಮನೋ ಹ ವಾವ ಯಜಮಾನಃ ಇಷ್ಟಫಲಮೇವೋದಾನಃ ಸ ಏನಂ ಯಜಮಾನಮಹರಹರ್ಬ್ರಹ್ಮ ಗಮಯತಿ ॥೪॥*

೩-೪. ಈ ಪುರದಲ್ಲಿ ಪ್ರಾಣಾಗ್ನಿಗಳೇ ಎಚ್ಚತ್ತಿರುತ್ತವೆ. ಈ ಅಪಾನವೇ ಗಾರ್ಹ್ಯಪತ್ಯವು, ವ್ಯಾನವು ಅನ್ವಾಹಾರ್ಯಪಚನವು. ಪ್ರಣಯನವಾದ ಗಾರ್ಹಪತ್ಯದಿಂದ ತೆಗೆದುಕೊಂಡದ್ದಾದ್ದರಿಂದ ಪ್ರಾಣವು ಆಹವನೀಯವು. ಉಚ್ಛ್ವಾಸನಿಃಶ್ವಾಸಗಳು ಎಂಬೀ ಆಹುತಿಗಳನ್ನು ಸಮವಾಗಿ ಒಯ್ಯುತ್ತಿರುವದರಿಂದ ಅದು ಸಮಾನವು. ಮನಸ್ಸೇ ಯಜಮಾನನು, ಇಷ್ಟಫಲವೇ ಉದಾನವು ; ಅದು ಯಜಮಾನನನ್ನು ದಿನದಿನವೂ ಬ್ರಹ್ಮವನ್ನು ಹೊಂದಿಸುತ್ತದೆ.

ಈಗ ನಿಜವಾದ ನಿದ್ರೆಯನ್ನು - ಕನಸಿಲ್ಲದ ನಿದ್ರೆಯನ್ನು - ವಿಚಾರಕ್ಕೆ ತೆಗೆದುಕೊಳ್ಳೋಣ ಕನಸಿನಲ್ಲಿ ಹೊರಗೆ ಒಂದು ಹುಸಿಪಂಚವು ತೋರುತ್ತಿರುತ್ತದೆ; ನಿದ್ರೆಯಲ್ಲಿ ತೋರುವದಿಲ್ಲ, ಅಷ್ಟೆ. ಆದರೂ ನಿಜವಾಗಿ ನಿದ್ರಿಸುತ್ತಿರುವಾಗ - ಎರಡನೆಯದನ್ನೇನೂ ಇಂದ್ರಿಯಗಳಿಂದ ಕಾಣದೆ ಇರುವಾಗ, ಯಾವದೊಂದರ ಇಚ್ಛೆಯೂ ಇಲ್ಲದೆ ಇರುವಾಗ, ಯಾವ ಕರ್ಮವನ್ನೂ ಮಾಡದೆ ಇರುವಾಗ -ಆ ಬರಿನಿದ್ರೆಯಲ್ಲಿ, ಜೀವನು ಎಲ್ಲಿರುತ್ತಾನೆ? ಅವನನ್ನು ಸಂಸ್ಕೃತದಲ್ಲಿ ಸ್ವಪಿತಿ

(ನಿದ್ರಿಸುತ್ತಿರುತ್ತಾನೆ) ಎನ್ನುತ್ತಾರಷ್ಟೆ? 'ಸ್ವಪಿತಿ' ಎಂಬ ಮಾತಿಗೆ ಬೇರೊಂದು ಶ್ರುತಿಯಲ್ಲಿ ಹೀಗೆ ವ್ಯುತ್ಪತ್ತಿಯನ್ನು ಹೇಳಿರುತ್ತದೆ : 'ಸ್ವಮ್ ಅಪಿತಿ'- ತನ್ನಲ್ಲಿ ತಾನು ಲಯವಾಗಿರುತ್ತಾನೆ, ತನ್ನನ್ನೇ ಸೇರಿಕೊಂಡಿರುತ್ತಾನೆ, ತಾನುತಾನೇ ಆಗಿರುತ್ತಾನೆ ಎಂದರ್ಥ.

ಹೀಗೆ ಜೀವನು ನಿದ್ರೆಯಲ್ಲಿದ್ದು ತನ್ನಲ್ಲಿ ತಾನು ಲಯವಾಗಿರುವಾಗ ಎಲ್ಲವೂ ನಿದ್ರಿಸಿಬಿಟ್ಟಿರುತ್ತದೆಯೇ? ಅಥವಾ ಯಾವದಾದರೂ ಭಾಗವು ಇನ್ನೂ ಎಚ್ಚರವಾಗಿರುತ್ತದೆಯೇ? -ಎಂಬುದು ಗಾರ್ಗ್ಯನ ಎರಡನೆಯ ಪ್ರಶ್ನೆ, ಇದಕ್ಕೆ ಪಿಪ್ಪಲಾದನು ಕೊಟ್ಟಿರುವ ಉತ್ತರವನ್ನು ಈಗ ಬಿಡಿಸಿ ನೋಡೋಣ.

ಶ್ರೋತ್ರಾದಿಕರಣಗಳು ತಮ್ಮ ವ್ಯಾಪಾರವನ್ನು ಮಾಡದೆ ನಿದ್ರಿಸುತ್ತಿರುವ ಆ ಅವಸ್ಥೆಯಲ್ಲಿ - ಈ ಶರೀರವೆಂಬ ಒಂಬತ್ತು ಬಾಗಿಲಿನ ಪುರದಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ- ಎಂಬ ಐದು ಪ್ರಾಣಾಗ್ನಿಗಳು ಎಚ್ಚರವಾಗಿರುತ್ತವೆ. ಇಲ್ಲಿ ಪ್ರಾಣಗಳನ್ನು ಅಗ್ನಿಗಳೆಂದು ಕರೆದಿರುವದರ ಪ್ರಯೋಜನವೇನೆಂದರೆ ಮನುಷ್ಯನು ನಿದ್ರಿಸುತ್ತಿರುವಾಗಲೂ ಅವನ ಶರೀರವು ಬಿಸಿಯಾಗಿಯೇ ಇರುವದಕ್ಕೆ ಅವನ ಶರೀರದಲ್ಲಿ ಪ್ರಾಣವೃತ್ತಿಗಳು ಕೆಲಸವನ್ನು ಮಾಡುತ್ತಿರುವದೇ ಕಾರಣವಾಗಿದೆ- ಎಂದು ತಿಳಿಸುವದು ಒಂದು. ಈ ಐದನ್ನು ಅಗ್ನಿಗಳೆಂದು ಭಾವಿಸುವ ಉಪಾಸಕನಿಗೆ ಒಂದಾನೊಂದು ಅಗ್ನಿಹೋತ್ರವನ್ನು ಮಾಡಿದ ಫಲವು ಬರುತ್ತದೆ - ಎಂದು ಅವಾಂತರತಾತ್ಪರ್ಯದಿಂದ ಆ ಉಪಾಸನೆಯನ್ನು ಹೊಗಳುವದು ಮತ್ತೊಂದು ಪ್ರಯೋಜನ. ಜ್ಞಾನಪ್ರಕರಣಗಳಲ್ಲಿಯೂ ಉಪಾಸನೆಗಳನ್ನು ಅವಾಂತರ ತಾತ್ಪರ್ಯದಿಂದ ಶ್ರುತಿಗಳಲ್ಲಿ ತಿಳಿಸುವ ಒಂದು ಪದ್ಧತಿಯಿದೆ. ಜ್ಞಾನಕ್ಕೆ ತಕ್ಕ ಅಧಿಕಾರವಿಲ್ಲದವರು ಶಾಸ್ತ್ರದಲ್ಲಿ ಹೇಳಿರುವಂತೆ ಆಯಾ ಉಪಾಸನೆಗಳನ್ನು ಮಾಡಿದರೆ ಅವರಿಗೆ ಕ್ರಮಮುಕ್ತಿಯಾಗುತ್ತದೆ- ಎಂದು ವೇದಾಂತಿಗಳು ಹೇಳುತ್ತಾರೆ. ಪ್ರಕರಣವು ಜ್ಞಾನದ್ದೇ ಆಗಿರುವದರಿಂದ ಇಂಥ ವಾಕ್ಯಗಳ ಅರ್ಥವನ್ನು ಪರಿಶೀಲಿಸುವದು ಆತ್ಮಜ್ಞಾನಕ್ಕೂ ಸಾಧನವಾಗುತ್ತದೆ.

ಪುರವೆಂದರೆ ಕೋಟೆ. ಕೋಟೆಯೊಳಗಿರುವ ಊರಿನವರೆಲ್ಲರೂ ನಿದ್ರಿಸುತ್ತಿರುವಲ್ಲಿ ನಗರರಕ್ಷಕರು ಮಾತ್ರ ಎಚ್ಚರದಿಂದ ಇದ್ದುಕೊಂಡು ಹೇಗೆ ಕೋಟೆಯನ್ನು ರಕ್ಷಿಸುತ್ತಿರುವರೋ ಹಾಗೆ ಈ ಐದೂ ಪ್ರಾಣಗಳು ಶರೀರವೆಂಬ ಪುರವನ್ನು ಕಾಪಾಡುತ್ತಿರುತ್ತವೆ. ಈಗ ಅವಾಂತರತಾತ್ಪರ್ಯದಿಂದ ಪ್ರಾಣಗಳನ್ನು ಅಗ್ನಿಗಳೆಂದು ವರ್ಣಿಸಿರುವದರ ಔಚಿತ್ಯವನ್ನು ಸ್ವಲ್ಪ ವಿಚಾರಮಾಡೋಣ. **ಅಪಾನವೃತ್ತಿಯೇ** ಇಲ್ಲಿ **ಗಾರ್ಹಪತ್ಯ**ವೆಂಬ ಅಗ್ನಿ. ನಿದ್ರಿಸುತ್ತಿರುವವನ ಅಪಾನವೃತ್ತಿಯಿಂದ - ಗಾರ್ಹಪತ್ಯವೆಂಬ

ಅಗ್ನಿಯಿಂದ ಆಹವನೀಯವನ್ನು ತೆಗೆದುಕೊಂಡು ಒಯ್ಯುವಂತೆ- ಒಯ್ಯಲ್ಪಟ್ಟ ಪ್ರಾಣವು ಬಾಯಿ, ಮೂಗು- ಇವುಗಳ ದ್ವಾರದಿಂದ ಸಂಚರಿಸುತ್ತಿರುವದರಿಂದ ಅದು ಆಹವನೀಯವು. ಇನ್ನು ವ್ಯಾನವು. ಹೃದಯದಿಂದ ದಕ್ಷಿಣದ, ಬಲಗಡೆಯ, ಛಿದ್ರದಿಂದ ಹೊರಕ್ಕೆ ಬರುತ್ತಿರುವದರಿಂದ 'ದಕ್ಷಿಣಾಗ್ನಿ' ಎನ್ನಿಸಿಕೊಳ್ಳುವ ಅನ್ವಾಹಾರ್ಯಪಚನವೆನಿಸುತ್ತದೆ. ಇಲ್ಲಿ ಸಮಾನವೆಂಬುದು ಉಚ್ಛ್ವಾಸ, ನಿಃಶ್ವಾಸ- ಮೇಲುಸಿರು, ಕೆಳಉಸಿರು. ಎಂಬ ಎರಡನ್ನೂ- ಹೋತೃವಾದವನು ಸಾಯಂಪ್ರಾತಃ ಕಾಲಗಳ ಆಹುತಿಗಳು ಹೇಗೋ ಹಾಗೆ- ಸಮವಾಗಿ ಯಾವಾಗಲೂ ಒಯ್ದು ಶರೀರವನ್ನು ಸಮತೆಯಲ್ಲಿಟ್ಟಿರುತ್ತದೆಯಾದ್ದರಿಂದ ಅದೇ **ಹೋತೃ** (ಹೋಮವನ್ನು ಮಾಡುವಾತನು). ಹೀಗೆಂದು ಭಾವಿಸುವ ಉಪಾಸಕನು ಸುಷುಪ್ತಿಯಲ್ಲಿಯೂ ಅಗ್ನಿ ಹೋತ್ರವನ್ನೇ ಮಾಡಿದವನಾಗುತ್ತಾನೆ; ಆದ್ದರಿಂದ ಅವನು ಅಕರ್ಮಿಯೆಂದು ತಿಳಿಯಬಾರದು- ಎಂದು ಉಪಾಸನೆಯನ್ನು ಇಲ್ಲಿ ಹೊಗಳಿರುತ್ತದೆ. ಇಂಥ ಉಪಾಸಕನಿಗೆ ಕ್ರಮಮುಕ್ತಿಯೇ ಫಲವಾದ್ದರಿಂದ ಇಲ್ಲಿ ಜ್ಞಾನವನ್ನೂ ಹೊಗಳಿದಂತೆಯೇ ಆಗಿರುತ್ತದೆ. ಈ ಸಂದರ್ಭದಲ್ಲಿ ಹೀಗೆ ಪ್ರಾಣಾಗ್ನಿಗಳು ಹೊರಗಿನ ಶ್ರೋತ್ರಾದಿಕರಣಗಳನ್ನೆಲ್ಲವನ್ನೂ ವಿಷಯಗಳನ್ನೂ ತಮ್ಮೊಳಗೇ ಉಪಸಂಹಾರಮಾಡಿಕೊಂಡು -ಅಗ್ನಿಹೋತ್ರದ ಫಲವನ್ನು ಹೊಂದಲಿರುವ ಯಜಮಾನನಂತೆ- ಮನಸ್ಸು ಮುಂದೆ ಹೇಳಲಿರುವ ಸ್ವರ್ಗವನ್ನು ಹೊಂದಲಿರುವದರಿಂದ ಮನಸ್ಸೇ ಇಲ್ಲಿ ಯಜಮಾನನು. ಕಾರ್ಯಕರಣಗಳಲ್ಲೆಲ್ಲ- ಯಜ್ಞದಲ್ಲಿ ಎಲ್ಲಾ ಋತ್ವಿಜರುಗಳಿಗಿಂತಲೂ ಯಜಮಾನನಿಗೇ ಪ್ರಾಧ್ಯಾನ್ಯವಿರುವಂತೆ- ಮನಸ್ಸಿಗೇ ಪ್ರಾಧಾನ್ಯವಿರುವದರಿಂದ ಮನಸ್ಸನ್ನು ಈ ಉಪಾಸನಾರೂಪವಾದ ಅಗ್ನಿಹೋತ್ರಕ್ಕೆ ಯಜಮಾನನು ಎಂದು ಕಲ್ಪಿಸಿರುವದು ಯೋಗ್ಯವಾಗಿರುತ್ತದೆ. ಈವರೆಗೆ ನಾಲ್ಕು ಪ್ರಾಣಗಳನ್ನು ಹೇಳಿದಂತೆ ಆಯಿತು. ಇನ್ನು ಉಳಿದಿರುವ ಉದಾನವಾಯುವು ಯಾಗಫಲವು, ಎಂದರೆ ಇಷ್ಟ ಫಲಪ್ರಾಪ್ತಿಯು ಉದಾನ ವಾಯುವಿನಿಂದಲೇ ಆಗುತ್ತದೆ. ಹೇಗೆಂದರೆ ಈ ಮನಸ್ಸೆಂಬ ಯಜಮಾನನನ್ನು ಉದಾನವು ಸ್ವಪ್ನಾವಸ್ಥೆಯಿಂದಲೂ ತಪ್ಪಿಸಿ ಸುಷುಪ್ತಿಯನ್ನು ಸೇರಿಸಿ ಪ್ರತಿದಿನವೂ ಅದನ್ನು ಅಕ್ಷರವೆಂಬ ಬ್ರಹ್ಮವನ್ನು ಸೇರಿಸುತ್ತಿರುವದು. ಆದ್ದರಿಂದ ಈ ಅಕ್ಷರವೆಂಬ ಬ್ರಹ್ಮವೇ ಜೀವನ ನಿಜವಾದ ಆತ್ಮನಾಗಿರುವದರಿಂದ ಸುಷುಪ್ತಜೀವನನ್ನು 'ಸ್ವಪಿತಿ'- ತನ್ನಲ್ಲಿ ಲಯವಾಗುತ್ತಾನೆ ಎಂದಿರುವದು ಸರಿಯಾಗಿರುತ್ತದೆ.

ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು- ಇವುಗಳಿಗಿಂತ ವ್ಯತಿರಿಕ್ತ ವಾಗಿರುವ ಶುದ್ಧಾತ್ಮಸ್ವರೂಪವು ನಿಜವಾಗಿ ಅದ್ವಿತೀಯವಾಗಿ ಪರಬ್ರಹ್ಮವೇ ಆಗಿರುವ ದೆಂದು ತಿಳಿಸುವದೇ ಉಪನಿಷತ್ತಿನ ಮುಖ್ಯೋದ್ದೇಶವಾದರೂ ಸ್ಥೂಲಶರೀರಕ್ಕಿಂತಲೂ

ಅದರಲ್ಲಿ ವ್ಯಾಪಿಸಿಕೊಂಡಿರುವ ಸೂಕ್ಷ್ಮಶರೀರದ ಕಡೆಗೆ ಲಕ್ಷ್ಯವಿಡಬೇಕೆಂದು ಪ್ರಾಣನ ಮಹಿಮೆಯನ್ನು ಈವರೆಗೆ ವಿಸ್ತರಿಸಲಾಗಿದೆ. ಇಷ್ಟರಲ್ಲಿಯೇ, ಪ್ರಾಣಕ್ಕಿಂತಲೂ ವ್ಯತಿರಿಕ್ತವಾಗಿರುವ ಅಸಂಗಾತ್ಮಸ್ವರೂಪವನ್ನು ತಿಳಿಯಿಸಿಕೊಡಲಾಗುವದು. ಆದರೆ ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳು ನಮಗೆ ಆಗುತ್ತಿರುವವೆಂಬುದು ಜಾಗ್ರದ್ದೃಷ್ಟಿಯಿಂದಲೇ ಆಗಿರುತ್ತದೆಯಾದ್ದರಿಂದ ಶರೀರದ ವ್ಯಾಪಾರವೆಲ್ಲವೂ, ಇಂದ್ರಿಯಗಳ ವ್ಯಾಪಾರವೆಲ್ಲವೂ, ಮುಖ್ಯಪ್ರಾಣದ ಆಸರೆಯಲ್ಲಿಯೇ ನಡೆಯುತ್ತಿದೆ ಎಂದು ಜಾಗ್ರದ್ದೃಷ್ಟಿಯಿಂದ ಈವರೆಗೆ ತಿಳಿಸಿದೆ. ಈ ದೃಷ್ಟಿಯಿಂದ ನೋಡಿದಾಗ ಉದಾನವಾಯುವೇ ಪ್ರತಿದಿನವೂ ಜೀವನನ್ನು ಸುಷುಪ್ತಿಗೆ ಕರೆದೊಯ್ದು ಅಲ್ಲಿ ಅವನ ಸ್ವರೂಪವಾದ ಬ್ರಹ್ಮವನ್ನುಸೇರಿಸುತ್ತದೆಯೆಂದೂ ಉಪಾಸಕನಿಗೆ ಅದೇ ಯಾಗಫಲವೆಂದೂ ಇಲ್ಲಿ ವರ್ಣಿಸಿದೆ.

# ನಾಲ್ಕನೆಯ ಪ್ರಶ್ನೆ : ಅವಸ್ಥಾತ್ರಯವಿಚಾರ

(ಮುಂದುವರಿದದ್ದು)

## ಕನಸುಗಳು ಯಾರಿಗೆ ?

ಸೌರ್ಯಾಯಣಿಯ ಪ್ರಶ್ನೆಗಳಲ್ಲಿ (೧) ಈ ಶರೀರದ ಯಾವ ಕರಣಗಳು ನಿದ್ರಿಸುವವು? (೨) ಯಾವವು ಎಚ್ಚತ್ತಿರುವವು?- ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಂತೆ ಆಯಿತು. ಶ್ರೋತ್ರ, ಚಕ್ಷುಸ್ಸು, ಘ್ರಾಣ, ರಸನೆ, ತ್ವಕ್ಕು, ವಾಕ್ಕು, ಪಾಣಿ, ಉಪಸ್ಥ, ಪಾಯು- ಇವೆಲ್ಲವೂ ಸುಪ್ತವಾಗಿಬಿಡುತ್ತವೆ, ಎಂದರೆ ಇವೆಲ್ಲವೂ ಮನಸ್ಸಿನಲ್ಲಿ ಒಂದಾಗಿಬಿಡುತ್ತವೆ. ಪ್ರಾಣಾದಿವೃತ್ತಿಗಳು ಮಾತ್ರ ಎಚ್ಚರವಾಗಿರುತ್ತವೆ ಎಂದು ಹೇಳಿದ್ದಾಯಿತು. ಆಗ ಜನರು 'ಇವನು ನಿದ್ರಿಸುತ್ತಿದಾನೆ'- ಎನ್ನುವರು- ಎಂದು ತಿಳಿಸಿದ್ದಾಯಿತು. ಪ್ರಾಣಾದಿವೃತ್ತಿಗಳನ್ನು ಅಗ್ನಿಗಳೆಂತ ಭಾವಿಸಿ ಅವುಗಳನ್ನು ಉಪಾಸನೆ ಮಾಡುವಾತನಿಗೆ ಒಂದು ಫಲವಾಗುತ್ತದೆ; ಉದಾನವೃತ್ತಿಯು ಆ ಫಲವನ್ನು ಕೊಡುತ್ತದೆ ಎಂದೂ ಹೇಳಿದ್ದಾಯಿತು.

ನಿದ್ರಿಸುವದೆಂದರೆ ಎರಡು ಬಗೆ. ಕನಸನ್ನು ಕಾಣುವ 'ಸ್ವಪ್ನನಿದ್ರೆ'ಯೊಂದು; ಯಾವ ಕನಸನ್ನೂ ಕಾಣದ 'ಅಸ್ವಪ್ನನಿದ್ರೆ' ಅಥವಾ ಸುಷುಪ್ತಿ- ಎಂಬುದು ಇನ್ನೊಂದು. ಈ ಎರಡರೊಳಗೆ ಸ್ವಪ್ನನಿದ್ರೆಯನ್ನು ಕುರಿತು 'ಸ್ವಪ್ನಗಳನ್ನು ಕಾಣುತ್ತಾನಲ್ಲ, ಈ ದೇವನು ಯಾರು?' ಎಂಬ ಪ್ರಶ್ನೆಯು ಬಂದಿತ್ತು. ಈಗ ಅದನ್ನು ಕುರಿತು ಪಿಪ್ಪಲಾದನು ಹೇಳುತ್ತಿದಾನೆ :

***ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ । ಯದ್ ದೃಷ್ಟಂ ದೃಷ್ಟಮನುಪಶ್ಯತಿ ಶ್ರುತಂ ಶ್ರುತಮೇವ ಅರ್ಥಮನುಶೃಣೋತಿ ದೇಶದಿಗನ್ತರೈಶ್ಚ ಪ್ರತ್ಯನುಭೂತಂ ಪುನಃ ಪುನಃ ಪ್ರತ್ಯನುಭವತಿ ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾಶ್ರುತಂ ಚಾನುಭೂತಂ ಚಾನನುಭೂತಂ ಚ ಸಚ್ಚಾಸಚ್ಚ ಸರ್ವಂ ಪಶ್ಯತಿ ಸರ್ವಃ ಪಶ್ಯತಿ ॥೫॥***

೫. ಇಲ್ಲಿ ಈ ದೇವನು ಮಹಿಮೆಯನ್ನು ಅನುಭವಿಸುತ್ತಿರುತ್ತಾನೆ; ನೋಡಿ ನೋಡಿದ್ದನ್ನೇ ಮತ್ತೆ ಕಾಣುತ್ತಿರುತ್ತಾನೆ. ಕೇಳಿ ಕೇಳಿದ ವಸ್ತುವನ್ನೇ ಮತ್ತೂ ಕೇಳುತ್ತಿರುತ್ತಾನೆ. ದೇಶದಿಗಂತರಗಳಲ್ಲಿ ಅನುಭವಿಸಿದ್ದನ್ನೇ ಮತ್ತೆ ಮತ್ತೆ ಅನುಭವಿಸುತ್ತಿರುತ್ತಾನೆ. ಕಂಡದ್ದು, ಕಾಣದೆ ಇರುವದು; ಕೇಳಿದ್ದು ಕೇಳದೆ ಇರುವುದು; ಅನುಭವಿಸಿದ್ದು ಅನುಭವಿಸದೇ ಇರುವದು; ಇರುವದು, ಇಲ್ಲದಿರುವದು- - ಎಲ್ಲವನ್ನೂ ಕಾಣುತ್ತಾನೆ. ಎಲ್ಲವೂ ಆಗಿ ಕಾಣುತ್ತಿರುತ್ತಾನೆ.

ಮೇಲೆ ವಿವರಿಸಿರುವಂತೆ ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ತಮ್ಮತಮ್ಮವ್ಯಾಪಾರವನ್ನು ಬಿಟ್ಟು ಸುಮ್ಮನಾಗಿರುವಲ್ಲಿ, ದೇಹವನ್ನು ಕಾಪಾಡುವದಕ್ಕೆಂದು ಪ್ರಾಣವಾಯುಗಳು ಎಚ್ಚರವಾಗಿರುವಲ್ಲಿ, ಉದಾನವಾಯುವು ಸುಷುಪ್ತಿ ಎಂಬ ಗಾಢನಿದ್ರೆಗೆ ಜೀವನನ್ನು ಒಯ್ದು ಬ್ರಹ್ಮವನ್ನೇ ಸೇರಿಸುವದರೊಳಗೆ ನಡುವಿನ ಸ್ಥಿತಿಯಲ್ಲಿ ಸ್ವಪ್ನವಾಗುವದು. ಅಲ್ಲಿ ಈ ಮನಸ್ಸೆಂಬ ದೇವನು- ತನ್ನೊಳಗೆ ಎಲ್ಲಾ ಕರಣಗಳನ್ನೂ ಉಪಸಂಹಾರಮಾಡಿಕೊಂಡಿರುವ ಈ ಮನಸ್ಸು- ಮಹಿಮೆಯನ್ನು ಅನುಭವಿಸುತ್ತಿರುತ್ತದೆ. ತಾನೇ ವಿಷಯಗಳಾಗಿಯೂ ತಾನೇ ವಿಷಯಿಗಳಾಗಿಯೂ ಅನೇಕರೂಪವನ್ನು ತಳೆದಿರುತ್ತದೆ. ಇದೇ ಸ್ವಪ್ನಾವಸ್ಥೆ.

ಹೇಗೆಂದರೆ, ಮೊದಲು ಯಾವ ಪುತ್ರಮಿತ್ರಾದಿಗಳನ್ನು ಕಂಡಿದ್ದನೋ ಆ ಪುತ್ರಮಿತ್ರಾದಿಗಳನ್ನು ನೋಡಿದ್ದರ ಅನುಭವದ ವಾಸನೆಯಿಂದ ವಾಸಿತನಾಗಿರುವದರಿಂದ ಈ ಕನಸಿನ ಅವಸ್ಥೆಯಲ್ಲಿಯೂ ಅದೇ ಮಗನನ್ನೂ ಅದೇ ಗೆಳೆಯನೇ ಮೊದಲಾದವರನ್ನೂ ಕಾಣುವಂತೆ ತಪ್ಪುಭಾವನೆಯುಂಟಾಗುತ್ತಿರುತ್ತದೆ. ಹೀಗೆಯೇ ಹಿಂದೆ ಕೇಳಿದ್ದದ್ದನ್ನೇ ಕೇಳುವಂತೆ ಬಗೆಯುತ್ತಾನೆ. ಬೇರೆಬೇರೆ ಸ್ಥಳಗಳಲ್ಲಿಯೂ ಬೇರೆಬೇರೆಯ ಕಡೆಗಳಲ್ಲಿಯೂ ಏನೇನನ್ನು ಅನುಭವಿಸಿದ್ದನೋ ಅದನ್ನೇ ಇಲ್ಲಿಯೂ ಅನುಭವಿಸುವಂತೆ ಭಾವಿಸಿಕೊಳ್ಳುತ್ತಿರುತ್ತಾನೆ. ಈ ಜನ್ಮದಲ್ಲಿ ಕಂಡದ್ದು, ಇಲ್ಲಿ ಕಾಣದೆ ಇದ್ದು ಜನ್ಮಾಂತರದಲ್ಲಿ ಕಂಡದ್ದು, ಹೀಗೆಯೇ ಇಲ್ಲಿಕೇಳಿದ್ದದ್ದು, ಇಲ್ಲಿಕೇಳದೆ ಜನ್ಮಾಂತರದಲ್ಲಿ ಕೇಳಿದ್ದದ್ದು, ಇಲ್ಲಿ ಅನುಭವಿಸಿದ್ದದ್ದು, ಇಲ್ಲಿ ಅನುಭವಿಸದೆ

ಜನ್ಮಾಂತರದಲ್ಲಿ ಅನುಭವಿಸಿದ್ದು, ನಿಜವಾಗಿರುವ ನೀರು ಮುಂತಾದದ್ದು ಇಲ್ಲದಿದ್ದರೂ ತೋರುವ ಬಿಸಿಲುಕುದುರೆಯ ನೀರೇ ಮುಂತಾದದ್ದು- ಈ ಎಲ್ಲವನ್ನು ಕಾಣುತ್ತಾನೆ, ತಾನೇ ಎಲ್ಲವೂ ಆಗಿರುತ್ತಾನೆ.

ಇಲ್ಲಿ ವಿಚಾರಮಾಡತಕ್ಕದ್ದೇನೆಂದರೆ : ಕನಸಿನಲ್ಲಿ ಕಾಣುವ ವಿಷಯಗಳು ಅವುಗಳನ್ನು ಕಾಣುವಾತನು, ಕಾಣುವದಕ್ಕೆ ಬೇಕಾದ ಕರಣಗಳು- ಇವೆಲ್ಲ ಯಾವವು? ಅವು ಕನಸಿನ ಅವಸ್ಥೆಯಲ್ಲಿ ನಿಜವಾಗಿ ಇರುವಂತೆ ತೋರಿದರೂ ಎಚ್ಚರವಾದ ಕೂಡಲೆ 'ಅಲ್ಲಿ ಏನೂ ಇರಲಿಲ್ಲ, ಬರಿಯ ಹುಸಿತೋರಿಕೆಯದು,- ಎಂದುಕೊಂಡು ಬಿಡುವೆವಲ್ಲ ! ಇದರ ತತ್ತ್ವವೇನು?

ಮನುಷ್ಯನಿಗೆ ಸ್ವಪ್ನಗಳು ಪ್ರತಿದಿನವೂ ಆಗುತ್ತಲೇ ಇರುತ್ತವೆ ; ಸ್ವಪ್ನಗಳನ್ನು ಕಾಣದಿರುವ ಮನುಷ್ಯನೇ ಇಲ್ಲ. ಹೀಗಿದ್ದರೂ ಸ್ವಪ್ನವೆಂದರೆ ಏನು? ಅಲ್ಲಿ ನಮಗೆ ಕಾಣುವ ದೃಷ್ಯಗಳ ತತ್ತ್ವವೇನು?- ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರವು ದೊರಕದೆ 'ಅದೆಲ್ಲ ಕನಸುತಾನೆ?' ಎಂದುಕೊಂಡು ಸುಮ್ಮನಾಗುವವರೇ ಬಲುಮಂದಿ. ಕೆಲವರು ಮಾತ್ರ ಕುತೂಹಲದಿಂದ ಈ ಪ್ರಶ್ನೆಗಳನ್ನು ಬಿಡಿಸಿ ಇವಕ್ಕೆ ಸರಿಯಾದ ಉತ್ತರವನ್ನು ಕಂಡುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಆದರೆ ಈ ಪ್ರಶ್ನೆಯನ್ನು ಕೇಳುವವರು ಎಚ್ಚರದಲ್ಲಿ ತಾವು ಕಾಣುವ ದೃಶ್ಯಗಳೆಲ್ಲವೂ ಸತ್ಯವಾಗಿರುವವೆಂದೂ ಕನಸಿನಲ್ಲಿರುವ ದೃಶ್ಯಗಳು ಮಾತ್ರ ಹುಸಿಯೆಂದೂ ಸ್ವಾಭಾವಿಕವಾಗಿಯೇ ಭಾವಿಸುತ್ತಿರುತ್ತಾರೆ. ಎಚ್ಚರದವಸ್ಥೆಯಲ್ಲಿರುವ ವಸ್ತುಗಳ ವ್ಯವಹಾರದಲ್ಲಿ ಎಡೆಬಿಡದೆ ವ್ಯಾಪೃತರಾಗಿರುವವರೇ ಹೆಚ್ಚಾಗಿರುವದರಿಂದಲೂ ದೃಶ್ಯಗಳ ತತ್ತ್ವವನ್ನು ವಿಚಾರಮಾಡುತ್ತಿರುವಾಗ ಎಚ್ಚರದಲ್ಲಿರುವ ಶರೀರ, ಇಂದ್ರಿಯಗಳು, ಮನಸ್ಸು - ಇವುಗಳ ಸಂಬಂಧವು ತಮಗೆ ನಿಜವಾಗಿಯೂ ಇರುವದೆಂದುಕೊಂಡು ಈ ಶರೀರಕ್ಕೂ ಇಂದ್ರಿಯಗಳಿಗೂ ಮನಸ್ಸಿಗೂ ಆಗುತ್ತಿರುವ ದುಃಖಗಳನ್ನು ಪರಿಹರಿಸಿಕೊಂಡು ಅವಕ್ಕೆ ಪ್ರಿಯವಾದ ವಸ್ತುಗಳ ಸಂಪರ್ಕವನ್ನೇ ತಂದುಕೊಂಡು ಆ ವಿಷಯಗಳ ಭೋಗದಿಂದ ಹೃಷ್ಟರಾಗಿರಬೇಕೆಂಬ ಗುರಿಯುಳ್ಳವರೇ ಬಹಳಜನರಾಗಿರುವದರಿಂದ ಈ ಶರೀರೇಂದ್ರಿಯಮನಸ್ಸುಗಳನ್ನುಳ್ಳವರು ತಾವೆಂಬ ದೃಷ್ಟಿಯಿಂದಲೇ ಎಚ್ಚರವೇ ಮುಂತಾದ ಅವಸ್ಥೆಗಳ ತತ್ತ್ವವನ್ನು ನಿರ್ಣಯಿಸುವದಕ್ಕೆ ಹೊರಡುವವರೇ ಬಹಳ. ಶಾಸ್ತ್ರಜ್ಞರು ಕೂಡ ಈ ದೃಷ್ಟಿಯಿಂದಲೇ ಅವಸ್ಥೆಗಳನ್ನು ಪರೀಕ್ಷೆಮಾಡಿ ಕನಸುಗಳು ಏತಕ್ಕೆ ಆಗುತ್ತವೆ? ಆ ಕನಸುಗಳ ದರ್ಶನದಿಂದ ನಾವು ಈ ಜಾಗ್ರದವಸ್ಥೆಯ ಶರೀರಾದಿಗಳ ಬಗ್ಗೆ ಏನನ್ನು ಕಲ್ಪಿಸಿಕೊಳ್ಳಬೇಕು?- ಎಂಬುದನ್ನೇ

ಹೇಳುತ್ತಿರುವರು. ವೈದ್ಯರು, ತಾರ್ಕಿಕರು, ಯೋಗಿಗಳು- ಮುಂತಾದವರೆಲ್ಲರೂ ಕನಸನ್ನು ಎಚ್ಚರದ ದೃಷ್ಟಿಯಿಂದಲೇ ನೋಡಿ ಕನಸಿನಲ್ಲಿ ಎಚ್ಚರದ ಅನುಭವದ ವಾಸನೆಗಳಿಂದಲೇ ದೃಶ್ಯಗಳು ಕಾಣಿಸುತ್ತಿವೆ ; ಎಚ್ಚರದಲ್ಲಿ ಪರಿಪೂರ್ಣವಾಗದ ಕಾಮಗಳ ವಾಸನೆಯಿಂದಲೇ, ಅಥವಾ ಎಚ್ಚರದಲ್ಲಿ ನಮಗೆ ಆಗುವ ಹರ್ಷಶೋಕಭಯಗಳಿಗೆ ನಿಮಿತ್ತವಾಗಿರುವ ಅನುಭವಗಳ ವಾಸನೆಯಿಂದಲೇ ಕನಸಿನಲ್ಲಿ ನಮಗೆ ಚಿತ್ರವಿಚಿತ್ರವಾದ ದೃಶ್ಯಗಳು ಕಾಣಿಸುತ್ತಿವೆ- ಎನ್ನುತ್ತಿರುತ್ತಾರೆ. ಲೋಕದ ಜನರಿಗೆ ಈ ವಿವರವು ಯುಕ್ತಿಯುಕ್ತವಾಗಿಯೂ ಕಾಣಿಸುತ್ತಿರುತ್ತದೆ. ಇದೇ ದೃಷ್ಟಿಯಿಂದ ಶ್ರುತಿಯೂ ಇಲ್ಲಿ ಕನಸಿನ ವಿವರಣೆಯನ್ನು ಕೊಟ್ಟಿರುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಕನಸಿನಲ್ಲಿ ನಾವು ಎಚ್ಚರದ ಶರೀರವನ್ನೇನೂ ಉಪಯೋಗಿಸುತ್ತಿರುವದಿಲ್ಲ; ಏಕೆಂದರೆ ಎಚ್ಚರದ ಶರೀರವು ಸೋತು ಮಲಗಿಕೊಂಡಿರುವಾಗಲೇ ಮತ್ತೊಂದು ಶರೀರವನ್ನು ಉಪಯೋಗಿಸಿಕೊಂಡು ನಾವು ಕನಸಿನಲ್ಲಿ ಸಂಚರಿಸುತ್ತಲೂ ಕೆಲಸಗಳನ್ನು ಮಾಡುತ್ತಲೂ ಇರುವಂತೆ ಭಾಸವಾಗುತ್ತದೆ. ಇದರಂತೆ ಅಲ್ಲಿ ಈ ಇಂದ್ರಿಯಗಳು ಯಾವವೂ ಕೆಲಸಮಾಡುತ್ತಿರುವದಿಲ್ಲ; ಕಣ್ಣು, ಕಿವಿ- ಮುಂತಾದ ಇಂದ್ರಿಯಸ್ಥಾನಗಳು ಯಾವ ಕೆಲಸವನ್ನೂ ಮಾಡದೆ ಇದ್ದರೂ ನಾವು ಬೇರೆಯ ಕರಣಗಳನ್ನು ಉಪಯೋಗಿಸಿಕೊಂಡು ನೋಡುವದು, ಕೇಳುವದು- ಮುಂತಾದ ಕಾರ್ಯಗಳನ್ನು ಮಾಡುತ್ತಿರುತ್ತೇವೆ. ಆದ್ದರಿಂದ ಸ್ವಪ್ನದಲ್ಲಿರುವ ಕರಣಗಳೂ ವಾಸನಾಮಯವೇ, ನಿಜವಾಗಿ ಕರಣಗಳೂ ಅಲ್ಲಿಲ್ಲ- ಎಂದಾಯಿತು. ಇನ್ನು ಅಲ್ಲಿ ಕಾಣುವ ಹೊರಗಿನ ವಿಷಯಗಳಾದರೂ ಯಾವವು ? -ಎಂದು ವಿಚಾರಮಾಡಿದರೆ ಇಲ್ಲಿ ನಾವು ಕಂಡು ಕೇಳಿದ ವಿಷಯಗಳನ್ನೇ ಕಾಣುವಂತೆಯೂ ಕೇಳುವಂತೆಯೂ ಅಲ್ಲಿ ತೋರಿದರೂ ನಿಜವಾಗಿ ಈ ವಿಷಯಗಳೇನೂ ಅಲ್ಲಿ ಬಂದಿರುವದಿಲ್ಲ. ಎಚ್ಚರದಲ್ಲಿ ಮಾಡಿದ್ದ ಕಡುಬನ್ನು ಕನಸಿನಲ್ಲಿ ತಿಂದಂತೆ ಕಂಡರೂ ಎಚ್ಚತ್ತಮೇಲೆ ಆ ಕಡುಬು ಹಾಗೆಯೇ ಅಲ್ಲಿಯೇ ಇರುವದು ಕಂಡುಬರುತ್ತದೆ. ಎಚ್ಚರದಲ್ಲಿ ನಾವು ಮಾತನಾಡಿಸಿದ್ದ ಸ್ನೇಹಿತರೇ ಮೊದಲಾದವರನ್ನೇ ಕನಸಿನಲ್ಲಿ ಕಂಡಂತೆ ನಮಗೆ ಆ ಕಾಲಕ್ಕೆ ತೋರಿದರೂ ಎಚ್ಚತ್ತ ಬಳಿಕ ಆ ಸ್ನೇಹಿತರೇ ಮೊದಲಾದವರು ಯಾರೂ 'ನಿನ್ನ ಕನಸಿಗೆ ನಾವು ಬಂದಿದ್ದೆವು ಎಂದು ಒಪ್ಪಿಕೊಳ್ಳುವದಿಲ್ಲ; ನಾವೂ ಅವರನ್ನೇ ನಿಜವಾಗಿ ಕನಸಿನಲ್ಲಿ ಕಂಡೆವು' ಎಂದೂ ಹೇಳುವದಿಲ್ಲ. ಆದ್ದರಿಂದ ಕನಸಿನಲ್ಲಿ ನಾವು ಏನನ್ನೂ ಕಾಣಲಿಲ್ಲ. ಅಲ್ಲಿರುವ ಶರೀರ, ಇಂದ್ರಿಯಗಳು, ವಿಷಯಗಳು ಎಲ್ಲವೂ ಮನಸ್ಸಿನ,ವಾಸನೆಯಿಂದಲೇ

ಹಾಗೆ ತೋರಿಕೊಂಡವು - ಎಂದು ಹೇಳಬೇಕಾಗುತ್ತದೆ. ಎಚ್ಚರದಲ್ಲಿ ಯಾರನ್ನಾದರೂ ಕಂಡು 'ನಿಮ್ಮನ್ನು ನನ್ನ ತಮ್ಮನೆಂದು ಭಾವಿಸಿಕೊಂಡೆನು' ಎನ್ನುವದಿಲ್ಲವೆ ?. ಹಾಗೆಯೇ ಇದೊಂದು ಬಗೆಯ ಭ್ರಾಂತಿಮಾತ್ರವಾಗಿರುತ್ತದೆ ಎಂದಾಯಿತು. ಎಚ್ಚರಕ್ಕೂ ಕನಸಿಗೂ ಸಮಾನವಾಗಿರುವದು ಮನಸ್ಸೊಂದು ಮಾತ್ರವೇ: ಏಕೆಂದರೆ ಈಗ ಎಚ್ಚತ್ತಮೇಲೆ 'ನಾನು ಕನಸನ್ನು ಕಂಡೆನು' ಎಂದು ಆ ಮನಸ್ಸಿನ ಬಲದಿಂದಲೇ ನಾವು ನಿಶ್ಚಯಿಸುತ್ತೇವೆ.

ಇದೊಂದು ದೃಷ್ಟಿ. ಈ ದೃಷ್ಟಿಯನ್ನು ಅನುಸರಿಸಿಯೇ ಶ್ರುತಿಯು 'ಸ್ವಪ್ನದಲ್ಲಿ ಮನಸ್ಸೆಂಬ ಈ ದೇವನು ಬಗೆಬಗೆಯ ಮಹಿಮೆಯನ್ನು ಪಡೆಯುವನು' ಎಂದು ಹೇಳುತ್ತಿದೆ. ಈ ದೃಷ್ಟಿಯಿಂದ ನೋಡಿದರೆ ಕನಸಿನಲ್ಲಿ ನಾವು ಕಂಡ ವಾಸನಾಮಯವಾದ ಶರೀರ, ಇಂದ್ರಿಯಗಳು, ವಿಷಯಗಳು- ಎಂಬ ವಾಸನಾ ಪ್ರಪಂಚವೆಲ್ಲವೂ ಮನಸ್ಸಿನ ವಿಜೃಂಭಣೆಯೇ. ನಾವು ಆ ಮನಸ್ಸಿನ ವಿಜೃಂಭಣೆಯನ್ನು ನೇರವಾಗಿ ಅನುಭವಿಸುವ ಸಾಕ್ಷಿಯಾಗಿರುತ್ತೇವೆ. ಎಚ್ಚತ್ತ ಮೇಲೂ ಈಗ ನಮಗೆ ಕಾಣಿಸುತ್ತಿರುವ ಈ ಶರೀರ, ಇಂದ್ರಿಯಗಳು, ಮನಸ್ಸು- ಎಲ್ಲವೂ ನಮಗಿಂತ ಬಾಹ್ಯವಾಗಿ ವಿಷಯವಾಗಿ ತೋರುತ್ತಿರುವದರಿಂದ ನಾವು ಶರೀರ, ಇಂದ್ರಿಯಗಳ, ಮನಸ್ಸು- ಎಲ್ಲಕ್ಕಿಂತಲೂ ಬೇರೆಯಾಗಿರುವವರು; ಇವೆಲ್ಲವನ್ನೂ ನಮಲ್ಲಿ ಸ್ವಭಾವವಾಗಿರುವ ಚೈತನ್ಯವೆಂಬ ಅರಿವಿನ ಬೆಳಕಿನಿಂದಲೇ ಅನುಭವಿಸುತ್ತಿದೇವೆ- ಎಂದಾಗುತ್ತದೆ. ಇದನ್ನು ತಿಳಿಸುವದಕ್ಕೆಂದೇ ಮತ್ತೊಂದು ಶ್ರುತಿಯಲ್ಲಿ 'ಸ್ವಪ್ನದಲ್ಲಿ ಈ ಆತ್ಮನು ಸ್ವಯಂಜ್ಯೋತಿಯಾಗಿರುತ್ತಾನೆ, ಏಕೆಂದರೆ ಇವನಿಗೆ ಆಗ ಸೂರ್ಯಾದಿಗಳ ಬೆಳಕಿನಿಂದ ಅನುಗೃಹೀತವಾಗಿರುವ ಚಕ್ಷುರಾದೀಂದ್ರಿಯಗಳ ಸಹಾಯವೇನೂ ಇಲ್ಲದೆಯೇ ತಾನೇ ಎಲ್ಲವನ್ನೂ ನೇರಾಗಿ ಅರಿಯುವ ಶಕ್ತಿಯಿರುತ್ತದೆ' ಎಂದು ಹೇಳಿರುತ್ತದೆ.

ಆದರೆ ಇನ್ನಷ್ಟು ಒಳಹೊಕ್ಕು ವಿಚಾರಮಾಡಿದರೆ ಈ ಲೌಕಿಕದೃಷ್ಟಿಯಲ್ಲಿಯೂ ದೋಷಗಳು ಕಾಣಿಸುತ್ತವೆ. ಏಕೆಂದರೆ ಮನಸ್ಸಿನ ವಾಸನೆಯಿಂದ ಹೊರಗೆ ವಿಷಯಗಳು ತೋರುವವೆಂಬುದು ನಮಗೆ ಅನುಭವದಲ್ಲಿ ಕಂಡುಬಂದಿಲ್ಲ. ಕಾಮಕ್ರೋಧಾದಿಗಳನ್ನು ಒತ್ತಿಟ್ಟುಕೊಂಡಮಾತ್ರದಿಂದ ಹೊರಗೆ ವಿಷಯಗಳು ಕಾಣಿಸುವವೆಂಬುದೂ ನಮ್ಮ ಅನುಭವದಲ್ಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ನಮಗೆ ಊನವಾಗಿರುವ ಕೈ ಕಾಲುಗಳನ್ನಾಗಲಿ, ನಮ್ಮೆದುರಿಗೆ ಇಲ್ಲದ ವಸ್ತುಗಳನ್ನಾಗಲಿ ನಮ್ಮ ಮನೋವಾಸನೆಯ ಬಲದಿಂದ ನಾವುಗಳು ಯಾರೂ ಸೃಷ್ಟಿಸಿಕೊಳ್ಳಲಾರೆವು. ಹೀಗಿರುವಲ್ಲಿ ನಾವು ಮಲಗಿದ ಕ್ಷಣಮಾತ್ರದಲ್ಲಿ ನಮಗೆ ಸ್ವಪ್ನದಲ್ಲಿ ಎಚ್ಚರದ

ಪ್ರತಿಕೃತಿಯಂತಿರುವ ಒಂದು ಪ್ರಪಂಚವು ಸೃಷ್ಟಿಯಾಗಿಬಿಡುವದಲ್ಲ! ಇದೆಲ್ಲವೂ 'ವಾಸನಾಮಯ'ವೆಂದು ಹೇಗೆ ತೀರ್ಮಾನಿಸುವದು? ಇನ್ನೊಂದು ವಿಚಾರ. ನಮಗೆ ಒಬ್ಬೊಬ್ಬರಿಗೂ ಈವರೆಗೆ ಲೆಕ್ಕವಿಲ್ಲದಷ್ಟು ಕನಸುಗಳಾಗಿರುವವು. ಅದರಲ್ಲಿ ಪ್ರತಿಯೊಂದರಲ್ಲಿಯೂ ಎಚ್ಚರದ ಪ್ರಪಂಚದಂತೆಯೇ ಅಸಾಧರಣವಾದ ದೇಶ ಕಾಲನಿಮಿತ್ತಗಳ ಸಂಬಂಧವುಳ್ಳ ಬಾಹ್ಯಾಧ್ಯಾತ್ಮಿಕವಿಭಾಗದ ಪ್ರಪಂಚವೊಂದು ಕಾಣಿಸಿಕೊಂಡಿರುತ್ತದೆ. ಆಗ 'ನಾನು ಎಂದಿಗೂ ಈ ಪ್ರಪಂಚದಲ್ಲಿಯೇ ಇದ್ದುಕೊಂಡಿರುತ್ತೇನೆ; ಈಗ ನಾನು ಎಚ್ಚರವಾಗಿಯೇ ಇರುತ್ತೇನೆ' ಎಂದು ನಾವು ಒಬ್ಬೊಬ್ಬರೂ ಭಾವಿಸಿಕೊಂಡಿರುತ್ತೇವಲ್ಲ ! ಇದಕ್ಕೇನು ಕಾರಣ?

ಈ ದೃಷ್ಟಿಯಿಂದ ನೋಡಿದಾಗ ಎಚ್ಚರವೆಂದೂ ಕನಸೆಂದೂ ಈಗ ನಾವು ಕರೆಯುತ್ತಿರುವ ಎರಡು ಅವಸ್ಥೆಗಳೂ ಒಂದಕ್ಕೊಂದು ಯಾವ ಬಗೆಯಿಂದಲೂ ಸಂಬಂಧಿಸಿಲ್ಲವೆಂದೂ ಈ ಅವಸ್ಥೆಗಳು ಒಂದಕ್ಕೊಂದು ಕಾರ್ಯಕಾರಣಭಾವದಿಂದ ಸೇರಿಕೊಂಡಿವೆ ಎಂದು ಭಾವಿಸುವದೂ ತಪ್ಪೇ ಎಂದೂ ಹೇಳಬೇಕಾಗುತ್ತದೆ. ಇದೂ ಅಲ್ಲದೆ ಅವಸ್ಥೆಗಳನ್ನು ಒಂದರ ದೃಷ್ಟಿಯಿಂದ ಒಂದನ್ನು ನೋಡುವ ಬದಲು ಆಯಾ ಅವಸ್ಥೆಯ ಅನುಭವದ ದೃಷ್ಟಿಯಿಂದ ಅದರದರ ವಿಷಯಕ್ಕೆ ಮಾಡುವ ತೀರ್ಮಾನವು ಹೆಚ್ಚಿನದೆಂದು ಯಾರಾದರೂ ಒಪ್ಪಬೇಕು. ಆದ್ದರಿಂದ ಕನಸಾಗಲಿ ಎಚ್ಚರವಾಗಲಿ, ಆಯಾ ದೃಶ್ಯರಾಶಿವಿಶೇಷವೇ, ಅದನ್ನು ನಾವು ಕಾಣುತ್ತಿರುವಾಗ ಮತ್ತೊಂದು ದೃಶ್ಯರಾಶಿಯು ಎಲ್ಲಿಯೂ ಇರುವದಿಲ್ಲ; ಈ ಕಾರಣದಿಂದ ನಾವು ನಿತ್ಯ ನಿಷ್ಪ್ರಪಂಚರಾಗಿರುತ್ತೇವೆ- ಎಂದು ತೀರ್ಮಾನಿಸುವದೇ ಉತ್ತಮವಾಗಿರುತ್ತದೆ. ಈ ದೃಷ್ಟಿಯನ್ನು ಮಾಂಡೂಕ್ಯದಲ್ಲಿ ಉಪಯೋಗಿಸಿರುತ್ತದೆ.

ಪ್ರಸಂಗಾಗತವಾದ ಈ ವಿಚಾರವು ಒತ್ತಟ್ಟಿಗಿರಲಿ. ಲೌಕಿಕದೃಷ್ಟಿಯನ್ನೇ ಆಧಾರವಾಗಿಟ್ಟುಕೊಂಡು ನಾವು ನೋಡಿದರೂ ಕನಸಿನಲ್ಲಿ ಮನಸ್ಸೊಂದೇ ಶರೀರ, ಇಂದ್ರಿಯಗಳು, ವಿಷಯಗಳು- ಎಂಬ ಹೊಸದೊಂದು ಪ್ರಪಂಚವಾಗಿ ತೋರಿಕೊಳ್ಳುತ್ತಿರುವದೆಂದೂ ಅದನ್ನೆಲ್ಲ ಕಾಣುತ್ತಿರುವ ನಮ್ಮ ಆತ್ಮನು ಅಲ್ಲಿ ಸ್ವಯಂ ಪ್ರಕಾಶನಾಗಿರುತ್ತಾನೆಂದೂ ಸಿದ್ಧವಾಗುತ್ತದೆ- ಎಂಬ ಮಾತಿಗೆ ಎರಡಿಲ್ಲ.

## ಸುಷುಪ್ತಿಯಲ್ಲಾಗುವ ನಿರುಪಾಧಿಕಸುಖ

*ಸ ಯದಾ ತೇಜಸಾಽಭಿಭೂತೋ ಭವತಿ , ಅತ್ರೈಷ ದೇವಃ ಸ್ವಪ್ನಾನ್ ನ ಪಶ್ಯತ್ಯಥೈತಸ್ಮಿಞ್ಶರೀರ ಏತತ್ಸುಖಂ ಭವತಿ ॥೬॥*

೬. ಅವನು ಯಾವಾಗ ತೇಜಸ್ಸಿನಿಂದ ಅಭಿಭೂತನಾಗುತ್ತಾನೋ ಆಗ ಇಲ್ಲಿ ಈ ದೇವನು ಕನಸುಗಳನ್ನು ಕಾಣುವದಿಲ್ಲ. ಆಗ ಈ ಶರೀರದಲ್ಲಿ ಈ ಸುಖವುಂಟಾಗುತ್ತದೆ.

ಕನಸಿನಲ್ಲಿ ಮನಸ್ಸೇ ಪ್ರಧಾನ; ಅದೇ ಎಚ್ಚರದಂತೆ ಪ್ರಮಾತೃ, ಪ್ರಮಾಣ, ಪ್ರಮೇಯ- ಈ ಮೂರು ರೂಪಗಳನ್ನೂ ಧರಿಸಿರುತ್ತದೆ. ಈ ಮೂರನ್ನೂ ಆತ್ಮನು ತನ್ನ ಚೈತನ್ಯದ ಬೆಳಕಿನಿಂದ ಬೆಳಗುತ್ತಾ ಇರುವದರಿಂದ ಸ್ವಯಂ ಜ್ಯೋತಿಯಾಗಿರುತ್ತಾನೆಂದು ಬೇರೊಂದು ಶ್ರುತಿಯಲ್ಲಿ ಹೇಳಿರುತ್ತದೆ.

ಕನಸಿನಲ್ಲಿ ಸ್ವತಂತ್ರವಾಗಿ ಹರಿದಾಡುತ್ತಿದ್ದ ಮನಸ್ಸು ಪ್ರತಿದಿನವೂ ಸುಷುಪ್ತಿಯಲ್ಲಿ ಉದಾನವಾಯುವಿನಿಂದ ಬ್ರಹ್ಮವನ್ನು ಸೇರುತ್ತದೆ ಎಂದು ಹಿಂದೆ ಹೇಳಿತ್ತಷ್ಟೆ? ಇಲ್ಲಿ ಮನದಂದುಕೊಳ್ಳಬೇಕಾಗಿರುವ ವಿಷಯವೊಂದಿದೆ. ಮನಸ್ಸು ತಾನೇ ಯಾವದನ್ನೂ ತಿಳಿಯಲೂ ಆರದು, ಏನನ್ನೂ ಮಾಡಲೂ ಆರದು. ಆತ್ಮನ ಸಂನಿಧಿಯಿಂದಲೇ ಅದಕ್ಕೆ ವಿಷಯಗಳ ಅರಿವೂ ಬಗೆಬಗೆಯ ವೃತ್ತಿರೂಪಪ್ರಚಾರಗಳೂ ಆಗುತ್ತಿರುವವು. ಕೇವಲ ಆತ್ಮನಲ್ಲಿ ಯಾವ ವಿಕಾರವೂ ಇಲ್ಲ; ಅಚೇತನವಾದ ಕೇವಲ ಮನಸ್ಸಿನಲ್ಲಿಯೂ ಯಾವ ವಿಕಾರವೂ ಆಗುವಂತಿಲ್ಲ. ಇನ್ನೂ ಸರಿಯಾಗಿ ನೋಡಿದರೆ ಮನಸ್ಸೆಂಬುದು ಸ್ವತಂತ್ರವಾದ ಒಂದು ತತ್ತ್ವವೇ ಅಲ್ಲ; ಮಂಜುಗಡ್ಡೆಯಲ್ಲಿ ನೀರು ಎಲ್ಲೆಲ್ಲಿಯೂ ವ್ಯಾಪಿಸಿರುವಂತೆ ಮನಸ್ಸಿನಲ್ಲಿ ಎಲ್ಲೆಲ್ಲಿಯೂ ಚಿತ್ತೇ ವ್ಯಾಪಿಸಿಕೊಂಡಿರುತ್ತದೆ. ಹಗ್ಗದಲ್ಲಿ ಕಲ್ಪಿತವಾಗಿರುವ ಹಾವೆಲ್ಲವೂ ಹಗ್ಗವೇ ಆಗಿರುವಂತೆ ಆತ್ಮನಲ್ಲಿ ಮನಸ್ಸೆಂಬುದು ಕಲ್ಪಿತವಾಗಿರುವದರಿಂದ ಅದರ ತತ್ತ್ವವು ಆತ್ಮನೇ. ಹೀಗಿದ್ದರೂ ಈ ಆತ್ಮಮನಸ್ಸುಗಳು ಬೇರೆಬೇರೆಯಾಗಿದ್ದು ಆತ್ಮನಿಗೆ ಮನಸ್ಸು ಸೇರಿಕೊಂಡಿರುವದೆಂದೂ ಮನಸ್ಸಿನ ಸಂಬಂಧದಿಂದ ಆತ್ಮನಿಗೆ ಜಾಗ್ರತ್ಸ್ವಪ್ನಸುಷುಪ್ತಿಗಳು ಆಗುತ್ತಿರುವವೆಂದೂ ಸಾಮಾನ್ಯವಾಗಿ ಜನರಿಗೆ ನಂಬಿಕೆಯಾಗಿಬಿಟ್ಟಿರುತ್ತದೆ. ಈ ದೃಷ್ಟಿಯಿಂದ ಆತ್ಮನು ಮನಸ್ಸಿನ ವಿವಿಧ ಪ್ರಚಾರಗಳಿಂದ ತತ್ಕಾಲದಲ್ಲಿ ತೋರಿಕೆಯ ಕರ್ತೃತ್ವಭೋಕ್ತೃತ್ವಗಳನ್ನು ಅನುಭವಿಸುವನೆಂತಲೂ ತನಿನಿದ್ರೆಯಲ್ಲಿ ಮನಸ್ಸು ವಿಶ್ರಾಂತವಾಗಲು ತಾನು ಪ್ರತಿದಿನವೂ ತನ್ನ ಸ್ವರೂಪವಾದ ಬ್ರಹ್ಮದಲ್ಲಿ ಸೇರಿಹೋಗುವನೆಂತಲೂ ಶ್ರುತಿಯು ಬೋಧಿಸುತ್ತದೆ.

ಹೀಗೆ ಜೀವನು ಜಾಗ್ರತ್ತಿನಲ್ಲಿ ದೇಹೇಂದ್ರಿಯ ಸಂಘಾತದಲ್ಲಿದ್ದುಕೊಂಡು ವ್ಯವಹಾರವನ್ನು ಮಾಡಿ ಸ್ವಪ್ನದಲ್ಲಿ ಆ ಮನಸ್ಸಿನ ವಾಸನಾನಿರ್ಮಿತವಾದ ದೃಶ್ಯಗಳನ್ನು ಕಂಡು ಅಲ್ಲಿ ಮಿಥ್ಯಾಕರ್ತೃತ್ವಭೋಕ್ತೃತ್ವವನ್ನು ಅನುಭವಿಸಿ ಈ ಎರಡು ಬಗೆಯ ವ್ಯವಹಾರದಿಂದ ಬಳಲಿ ಉದಾನವಾಯುವಿನ ವಶನಾಗಿ ತನ್ನ ಸ್ವರೂಪವಾಗಿರುವ

ಬ್ರಹ್ಮವನ್ನು ಸೇರಿರುತ್ತಾನಷ್ಟೆ? ಕನಸಿನಿಂದ ತನಿನಿದ್ರೆಯನ್ನು ಪಡೆಯುವದಕ್ಕೆ ಕಾರಣವನ್ನು ಮಂತ್ರದಲ್ಲಿ ಹೀಗೆ ಕೊಟ್ಟಿರುತ್ತದೆ: ನಾಡಿಗಳಲ್ಲಿ ಪಿತ್ತವೆಂಬ ತೇಜಸ್ಸು ಇರುತ್ತದೆ; ಅದು ಅವುಗಳ ದ್ವಾರವನ್ನು ಮುಚ್ಚಲಾಗಿ ಮನಸ್ಸಿಗೆ ಕನಸಿನ ದೃಶ್ಯಗಳನ್ನು ಕಾಣುವ ಶಕ್ತಿಯು ಇಲ್ಲವಾಗಿಬಿಡುತ್ತದೆ; ಆಗ ಮನಸ್ಸಿನಲ್ಲಿದ್ದ ಜ್ಞಾನವು ವಿಶೇಷರೂಪದಿಂದ ದೃಶ್ಯಗಳನ್ನು ತೋರಿಸದೆ ಸಾಮಾನ್ಯರೂಪವನ್ನು ತಾಳುತ್ತದೆ. ಹೇಗೆ ಬೆಂಕಿಗೆ ಸಾಮಾನ್ಯವಾಗಿ ವ್ಯಾಪಕವಾಗಿರುವ ರೂಪವೊಂದು, ವಿಶೇಷವಾಗಿ ಯಾವದಾದರೊಂದು ಸ್ಥಾನದಲ್ಲಿ ತೋರಿಕೊಳ್ಳುವ ರೂಪವೊಂದು- ಹೀಗೆ ಎರಡು ರೂಪಗಳಿರುವವೋ ಹಾಗೆಯೇ ಮನಸ್ಸಿನ ಜ್ಞಾನಕ್ಕೂ ಸಾಮಾನ್ಯರೂಪವೊಂದು, ವಿಶೇಷರೂಪವೊಂದು- ಹೀಗೆ ಎರಡು ರೂಪಗಳಿರುತ್ತವೆ. ಸುಷುಪ್ತಿಯಲ್ಲಿ ಮನಸ್ಸಿನ ಜ್ಞಾನದ ಅನುಭವ, ಸ್ಮೃತಿ- ಎಂಬ ವಿಶೇಷರೂಪಗಳು ಉಡುಗಿಹೋಗಿ ಅದರ ಸಾಮಾನ್ಯರೂಪವು ಮಾತ್ರವೇ ಶರೀರವನ್ನೆಲ್ಲ ವ್ಯಾಪಿಸಿಕೊಂಡು ಇದ್ದುಕೊಂಡಿರುತ್ತದೆ. ಆದ್ದರಿಂದಲೇ ಆಗ ನೋಡುವದು, ಕೇಳುವದು- ಮುಂತಾದ ಅನುಭವಗಳಾಗಲಿ, ಅವುಗಳ ನೆನಪಾಗಲಿ ಇಲ್ಲದೆ ಇದ್ದರೂ ಶರೀರವನ್ನು ಮುಟ್ಟಿದರೆ ಸಾಮಾನ್ಯವಾಗಿ ಅರಿತುಕೊಳ್ಳುವ ಶಕ್ತಿಯು ಮಾತ್ರ ಅದಕ್ಕೆ ಉಳಿದುಕೊಂಡಿರುತ್ತದೆ.

ಈವರೆಗೆ ವರ್ಣಿಸಿರುವ ಪ್ರಕಾರವು ಎಚ್ಚರದ ದೃಷ್ಟಿಯಿಂದ ನೋಡಿದರೆ ಆಗುವ ನಿಶ್ಚಯದಿಂದ ಹೇಳಿದ್ದು. ಆದರೆ ನಿಜವಾಗಿ **ಸುಷುಪ್ತಿಯನ್ನು ಸುಷುಪ್ತಿಯ ಕಣ್ಣಿನಿಂದಲೇ ನೋಡಿದರೆ ಯಾವ ನಿಶ್ಚಯವಾಗುತ್ತದೆ?** -ಎಂಬುದನ್ನಿಷ್ಟು ಆಲೋಚನೆ ಮಾಡೋಣ. ಎಚ್ಚರದಲ್ಲಿ ಕಾಣುವ ಶರೀರವೂ ಕರಣಗಳೂ ಮನಸ್ಸೂ ಸೇರಿ 'ನಾನು' ಎಂಬ ಅಭಿಮಾನವು ಜೀವನಿಗೆ ಆಗಿರುತ್ತದೆ. ಅವನ ಮುಂದೆ ಆಗ ಒಂದು ಪ್ರಪಂಚವು ಕಾಣಿಸಿಕೊಳ್ಳುತ್ತಿರುತ್ತದೆ. ಅದರಲ್ಲಿ ದೇಶಕಾಲನಿಮಿತ್ತಗಳನ್ನನುಸರಿಸಿ ಆಗುವ ಕ್ರಿಯೆಗಳಿಗೆ ಫಲವು ದೊರೆಯುತ್ತಿರುತ್ತದೆ. ತನ್ನಂತೆಯೇ ಇರುವ ಅನೇಕ ಚೇತನರಾದ ಜೀವರು ಆ ಪ್ರಪಂಚದಲ್ಲಿ ಕಾಣಿಸುತ್ತಿರುತ್ತಾರೆ; ಅಚೇತನವಸ್ತುಗಳೂ ಅಲ್ಲಲ್ಲಿ ಕಾಣಿಸುತ್ತಿರುತ್ತವೆ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂದು ವಿಂಗಡಿಸಿಕೊಂಡು ತೋರುತ್ತಿರುವ ಆ ಪ್ರಪಂಚವೆಲ್ಲವೂ ಜಾಗ್ರತ್ತಿನ ಅನುಭವಕ್ಕೆ ಗಂಟುಬಿದ್ದಿದ್ದು, ಸ್ವಪ್ನವು ಬಂದ ಕೂಡಲೆ ಅದೆಲ್ಲವೂ ಎಲ್ಲಿಯೋ ಮರೆಯಾಗಿಬಿಟ್ಟಿರುತ್ತದೆ. ಸ್ವಪ್ನದಲ್ಲಿ ಎಚ್ಚರದ ಪ್ರಪಂಚವು ಇರುವದೆಂದು ಕಲ್ಪಿಸುವದಕ್ಕೆ ಆಗುವಂತಿಲ್ಲ ; ಏಕೆಂದರೆ ಆ ಪ್ರಪಂಚವು ಎಚ್ಚರಕ್ಕೆ ಮಾತ್ರವೇ ಕಟ್ಟುಬಿದ್ದದ್ದು ; ಸ್ವಪ್ನದಲ್ಲಿ ಕಾಣುವ ಅದರ ಪ್ರತಿಕೃತಿಯಂತಿರುವ ಮತ್ತೊಂದು ಪ್ರಪಂಚವು ಇರುತ್ತದೆ. ಆ ಪ್ರಪಂಚವು

ಎಚ್ಚರದ ಪ್ರಪಂಚದ ಯಾವದೊಂದಂಶವೂ ಆಗಿರುವದಿಲ್ಲ. ಸ್ವಪ್ನದ ಪ್ರಪಂಚದಿಂದ ಒಂದು ಸಣ್ಣ ಕಡ್ಡಿಯನ್ನು ಕೂಡ ಹೇಗೆ ನಾವು ಜಾಗ್ರದವಸ್ಥೆಗೆ ತರಲಾರೆವೋ ಹಾಗೆಯೇ ಜಾಗ್ರದವಸ್ಥೆಯ ಪ್ರಪಂಚದಿಂದ ಯಾವದೊಂದು ವಸ್ತುವಿನ ಅಂಶವನ್ನೂ ಸ್ವಪ್ನಕ್ಕೆ ಕೊಂಡೊಯ್ಯಲಾರೆವು.

ಇನ್ನು ಸುಷುಪ್ತಿಯ ಅವಸ್ಥೆಗೆ ನಾವು ಬಂದಾಗಲೋ? - ಎಂದರೆ ಅಲ್ಲಿ ಜಾಗ್ರತ್ತಿನ ಪ್ರಪಂಚವೂ ಇರುವದಿಲ್ಲ, ಸ್ವಪ್ನದ ಪ್ರಪಂಚವೂ ಇರುವದಿಲ್ಲ. ಆದ್ದರಿಂದ ಸುಷುಪ್ತಿಯಲ್ಲಾಗುವ ಸುಖವು ಎಚ್ಚರದಲ್ಲಿ ಅಥವಾ ಕನಸಿನಲ್ಲಿ ಆಗುವ ವಿಷಯಭೋಗಗಳಿಂದಾಗುವ ಸುಖವಲ್ಲ. ಏಕೆಂದರೆ ಆಗ ಶರೀರದ, ಇಂದ್ರಿಯಗಳ ಅಥವಾ ಮನಸ್ಸಿನ ಸಂಬಂಧದ ಅರಿವೇ ಇರುವದಿಲ್ಲ.

ಶರೀರವಾಗಲಿ, ಕರಣಗಳಾಗಲಿ- ನಮಗೆ ಇರುವವೆಂಬುದು ಏತರಿಂದಾಗಿದೆ? ಅವು ಇವೆ ಎಂಬುದಕ್ಕೆ ನಮಗೆ ಅವು ಅನುಭವದಲ್ಲಿ ತೋರುತ್ತಿರುವವೆಂಬುದನ್ನು ಬಿಟ್ಟರೆ ಮತ್ತೆ ಯಾವ ಪ್ರಮಾಣವೂ ಇರುವದಿಲ್ಲ. ಪ್ರತ್ಯಕ್ಷಾದಿಗಳಿಂದ ಹೊರಗಿನ ಪ್ರಪಂಚದ ಅರಿವು ಆಗುವಂತೆಯೇ ಶರೀರಾದಿಗಳ ಅರಿವೂ ನಮಗೆ ಪ್ರತ್ಯಕ್ಷಾದಿಗಳಿಂದಲೇ ಆಗುತ್ತಿರುವದಲ್ಲವೆ?- ಎಂದು ಯಾರಾದರೂ ಕೇಳಬಹುದು. ಆದರೆ ಈ ಶಂಕೆಯು ಸರಿಯಲ್ಲ. ಏಕೆಂದರೆ ಪ್ರತ್ಯಕ್ಷವೆಂದರೆ ಏನು? ಇಂದ್ರಿಯಗಳಿಂದ ವಿಷಯಗಳನ್ನು ಅರಿಯುವದೇ ಅಲ್ಲವೆ? ಇಂದ್ರಿಯಗಳು ನಮಗೆ ಇರುವವೆನ್ನುವದಕ್ಕೆ ಇಂದ್ರಿಯಗಳೇ ಪ್ರಮಾಣವೆಂದು ಹೇಳುವದು ಹೇಗೆ ಸರಿಯಾದೀತು? ಚಕ್ಷುಸ್ಸು, ಶ್ರೋತ್ರ- ಮುಂತಾದ ಇಂದ್ರಿಯಗಳನ್ನು ಅರಿಯುವದಕ್ಕೆ ಅವಕ್ಕಿಂತ ಬೇರೆಯಾದ ಚಕ್ಷುರಾದಿಗಳು ನಮಗೆ ಎಲ್ಲಿರುತ್ತವೆ? ಇಲ್ಲ. ಆದ್ದರಿಂದ ಚಕ್ಷುರಾದೀಂದ್ರಿಯಗಳು ನಮಗೆ ಇವೆಯೆಂದೂ ಅವು ಶರೀರವನ್ನು ಆಶ್ರಯಿಸಿಕೊಂಡಿವೆಯೆಂದೂ ಇಟ್ಟುಕೊಂಡ ಮೇಲೆಯೇ ನಮಗೆ ಪ್ರತ್ಯಕ್ಷವೇ ಮುಂತಾದ ವ್ಯವಹಾರವು ಆಗುತ್ತದೆ ಎಂದಾಯಿತು.

ಹೀಗಿರುವದರಿಂದ ಅನಾದಿಯಾದ, ನಮಗೆ ಸ್ವಭಾವದಿಂದಲೇ ಇದ್ದುಕೊಂಡಿರುವ ಒಂದಾನೊಂದು ತಪ್ಪು ತಿಳಿವಳಿಕೆಯಿಂದಲೇ ನಾವು ಶರೀರವಂತರೂ ಇಂದ್ರಿಯಗಳನ್ನುಳ್ಳವರೂ ಮನಸ್ಸುಳ್ಳವರೂ ಆಗಿರುತ್ತೇವೆ. ಈ ಶರೀರಾದಿಗಳಿಂದೊಡಗೂಡಿಯೇ ನಾವು ಹೊರಗಿನ ಪ್ರಪಂಚವನ್ನು ನೋಡುತ್ತಿರುತ್ತೇವೆ. ಆ ವಿಷಯದರ್ಶನದಿಂದಲೇ ನಮಗೆ ವಸ್ತುಗಳಲ್ಲಿ ರಾಗದ್ವೇಷಾದಿಗಳು ಆಗುತ್ತಿರುವವು; ಆದರಿಂದಲೇ ನಮಗೆ ಪ್ರವೃತ್ತಿನಿವೃತ್ತಿರೂಪವಾದ ಕರ್ಮವೂ ಆಗುತ್ತಿರುವದು. ಈ ಅವಿದ್ಯಾಕಾಮಕರ್ಮಗಳೇ ನಮಗೆ ಕಾರ್ಯಕರಣಗಳಿರುವದಕ್ಕೆ ನಿಮಿತ್ತವಾಗಿರುತ್ತವೆ.

ಹೀಗೆ ಅವಿದ್ಯಾಕಾಮಕರ್ಮಗಳೂ ಶರೀರೇಂದ್ರಿಯ ಮನಸ್ಸುಗಳೂ ಒಂದನ್ನೊಂದು ಆಶ್ರಯಿಸಿಕೊಂಡು ಅನಂತವಾದ ಸಂಸಾರಕ್ಕೆ ಕಾರಣವಾಗಿರುತ್ತವೆ. ಇದು ಹೇಗೆಂಬುದನ್ನು ಸುಷುಪ್ತಿಯ ಅನುಭವದ ಪರೀಕ್ಷೆಯಿಂದ ನಿಶ್ಚಯಿಸಿಕೊಳ್ಳಬಹುದಾಗಿದೆ.

ಸುಷುಪ್ತಿಯ ಅನುಭವವು ಹೇಗೆ ಇರುತ್ತದೆ? ಈ ಪ್ರಶ್ನೆಗೆ ನಮ್ಮ ಮುಂದೆ ನಿದ್ರೆಮಾಡುತ್ತಿರುವ ಮತ್ತೊಬ್ಬರನ್ನು ಮನಸ್ಸಿಗೆ ತಂದುಕೊಳ್ಳುವದರಿಂದ ಉತ್ತರವನ್ನು ಹೇಳುವದಕ್ಕೆ ಆಗಲಾರದು. ಮತ್ತೊಬ್ಬರು ನಿದ್ರೆಮಾಡುತ್ತಿರುವರೆಂಬುದು ನಮ್ಮ ಎಚ್ಚರದಲ್ಲಿ ನಮಗೆ ಆಗುವ ಅನುಭವವಾಗಿರುತ್ತದೆ. ಆದರೆ ನಮ್ಮ ಸುಷುಪ್ತಿಯ ವಿಷಯಕ್ಕೆ ನಮಗೆ ಆಗುವ ಅನುಭವವು ಹೇಗೆ ಇರುತ್ತದೆ? ಎಂಬುದೇ ಇಲ್ಲಿ ಪ್ರಶ್ನೆ. ಅಲ್ಲಿ ನಮಗೆ ಶರೀರವಿರುವದೆಂಬ ತಿಳಿವಳಿಕೆಯಿರುವದಿಲ್ಲ. ಮನಸ್ಸಾಗಲಿ, ಇಂದ್ರಿಯಗಳಾಗಲಿ ಇರುವವೆಂಬ ತಿಳಿವಳಿಕೆಯೂ ಇರುವದಿಲ್ಲ. ಇನ್ನು ಆ ಮನಸ್ಸಿನಿಂದ ವಿಚಾರ ಮಾಡುವದರ ಅರಿವಾಗಲಿ, ಇಂದ್ರಿಯಗಳಿಂದ ನೋಡುವದು, ಕೇಳುವದು, ಮೂಸುವದು, ಮುಟ್ಟುವದು- ಮುಂತಾದ ಅರಿವಾಗಲಿ ಆಗುವದಿಲ್ಲ. ಹೆಚ್ಚೇಕೆ? ಆಗ್ಗೆ ನಮಗೆ 'ನಾನು' ಎಂಬ ಅರಿವೇ ಇರುವದಿಲ್ಲ; ಇನ್ನು 'ಇವನು', 'ಮತ್ತೊಬ್ಬರು', 'ಅದು', 'ಇದು' -ಮುಂತಾದದ್ದರ ಅರಿವು ಹೇಗಾಗಬೇಕು? ಆದ್ದರಿಂದ ಸುಷುಪ್ತಿಯ ಅನುಭವವು ಹೇಗಿರುತ್ತದೆ ಎನ್ನಬೇಕಾಯಿತು? ನಾನು ನಿದ್ರಿಸುತ್ತೇನೆ ಎಂದಾಗಲಿ ಇಲ್ಲವೆಂದಾಗಲಿ ಅಲ್ಲಿ ಅರಿವಾಗುವದಿಲ್ಲ. ಅಲ್ಲಿ ಸುಷುಪ್ತಿಯ ಸಾಮಾನ್ಯವಾದ ನಿರ್ವಿಕಲ್ಪವಾದ ಅನುಭವವು ಮಾತ್ರ ಆಗುತ್ತಿರುತ್ತದೆ. ಇದನ್ನೇ ಶ್ರುತಿಯು 'ಅಲ್ಲಿ ಯಾವ ಸ್ವಪ್ನವನ್ನೂ ಕಾಣುವದಿಲ್ಲ' ಎಂಬ ಮಾತಿನಿಂದ ತಿಳಿಸಿರುತ್ತದೆ.

## ಸುಷುಪ್ತಿಯಲ್ಲಿರುವ ಅದ್ವಯಾತ್ಮಸ್ವರೂಪ

*ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠನ್ತೇ। ಏವಂ ಹ ವೈ ತತ್ ಸರ್ವಂ ಪರೇ ಆತ್ಮನಿ ಸಂಪ್ರತಿಷ್ಠತೇ ॥೭॥*

*ಪೃಥಿವೀ ಚ ಪೃಥಿವೀಮಾತ್ರಾ ಚಾಪಶ್ಚಾಪೋಮಾತ್ರಾ ಚ ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾ ಚಾಕಾಶಶ್ಚಾಕಾಶಮಾತ್ರಾ ಚ ಚಕ್ಷುಶ್ಚ ದ್ರಷ್ಟವ್ಯಂ ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ ಚ ರಸಶ್ಚ ರಸಯಿತವ್ಯಂ ಚ ತ್ವಕ್ಚ ಸ್ಪರ್ಶಯಿತವ್ಯಂ ಚ ವಾಕ್ಚವಕ್ತವ್ಯಂ*

*ಚ ಹಸ್ತೌ ಚಾದಾತವ್ಯಂ ಚೋಪಸ್ಥಶ್ಚಾನನ್ದಯಿತವ್ಯಂ ಚ ಪಾಯುಶ್ಚ ವಿಸರ್ಜಯಿತವ್ಯಂ ಚ ಪಾದೌ ಚ ಗನ್ತವ್ಯಂ ಚ ಮನಶ್ಚ ಮನ್ತವ್ಯಂ ಚ ಬುದ್ಧಿಶ್ಚ ಬೋದ್ಧವ್ಯಂ ಚಾಹಂಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ ಚೇತಯಿತವ್ಯಂ ಚ ತೇಜಶ್ಚ ವಿದ್ಯೋತಯಿತವ್ಯಂ ಚ ಪ್ರಾಣಶ್ಚ ವಿಧಾರಯಿತವ್ಯಂ ಚ ॥೮॥*

ಅದು ಹೇಗೆಂದರೆ, ಎಲೈ ಸೋಮ್ಯನೆ, ಹೇಗೆ ಪಕ್ಷಿಗಳು ತಮ್ಮ ವಾಸದ ವೃಕ್ಷವನ್ನು ಹೋಗಿ ಸೇರಿಕೊಳ್ಳುವವೋ ಹಾಗೆಯೇ ಇದೆಲ್ಲವೂ ಪರಮಾತ್ಮನಲ್ಲಿ ಸೇರಿಕೊಳ್ಳುವದು. ಪೃಥ್ವಿ, ಪೃಥ್ವೀಮಾತ್ರೆ; ಅಪ್ಪು, ಅಪೋಮಾತ್ರೆ ; ತೇಜಸ್ಸು ತೇಜೋಮಾತ್ರೆ ; ವಾಯು, ವಾಯುಮಾತ್ರೆ ; ಆಕಾಶ, ಆಕಾಶಮಾತ್ರೆ ; ಕಣ್ಣು, ನೋಡತಕ್ಕದ್ದು ; ಕಿವಿ, ಕೇಳತಕ್ಕದ್ದು ; ಮೂಗು ಮೂಸಲ್ಪಡತಕ್ಕದ್ದು; ನಾಲಗೆ, ಸವಿ ನೋಡಲ್ಪಡತಕ್ಕದ್ದು ; ತ್ವಕ್ಕು, ಸೋಕಲ್ಪಡತಕ್ಕದ್ದು ; ವಾಕ್ಕು, ಹೇಳಲ್ಪಡತಕ್ಕದ್ದು: ಹಸ್ತಗಳು, ತೆಗೆದುಕೊಳ್ಳಲ್ಪಡತಕ್ಕದ್ದು ; ಉಪಸ್ಥ, ಆನಂದಪಡತಕ್ಕದ್ದು ; ಪಾಯು, ಬಿಡತಕ್ಕದ್ದು ; ಪಾದಗಳು, ನಡೆಯತಕ್ಕದ್ದು ; ಮನಸ್ಸು, ಮನನಮಾಡಲ್ಪಡತಕ್ಕದ್ದು ; ಬುದ್ಧಿ, ನಿಶ್ಚಯಿಸಲ್ಪಡತಕ್ಕದ್ದು ; ಅಹಂಕಾರ, ಅಭಿಮಾನಸಲ್ಪಡತಕ್ಕದ್ದು ; ಚಿತ್ತ, ಅರಿಯಲ್ಪಡತಕ್ಕದ್ದು ; ತೇಜಸ್ಸು, ಬೆಳಗಲ್ಪಡತಕ್ಕದ್ದು ; ಪ್ರಾಣ, ತಡೆದಿಟ್ಟುಕೊಳ್ಳಲ್ಪಡತಕ್ಕದ್ದು.

ಸುಷುಪ್ತಿಯನ್ನು ನಮ್ಮನಮ್ಮ ಸುಷುಪ್ತಿಯ ಅನುಭವದ ಕಣ್ಣಿನಿಂದಲೇ ನೋಡಿದರೆ ಅದು ಹೇಗೆ ಕಾಣುತ್ತದೆ ? -ಎಂಬುದನ್ನು ಮನಮುಟ್ಟಿ ವಿಚಾರಿಸಿ ಹೇಳಿದರೆ ಅಲ್ಲಿ ಅವಿದ್ಯೆ, ಕಾಮ, ಕರ್ಮ - ಇವುಗಳಿಗೆ ಕಾರಣವಾಗಿರುವ ಶರೀರವಾಗಲಿ, ಇಂದ್ರಿಯಗಳಾಗಲಿ, ಮನಸ್ಸಾಗಲಿ ಇರುವದೇ ಇಲ್ಲ, ಅಲ್ಲಿ ಎಲ್ಲವೂ ನಮ್ಮ ಪರಮಾತ್ಮ ಸ್ವರೂಪದಲ್ಲಿ ಅಡಗಿಹೋಗಿರುತ್ತದೆ.

'ಎಲ್ಲವೂ' ಎಂದರೆ ಯಾವದು ? ಎಚ್ಚರದಲ್ಲಿಯಾಗಲಿ ಕನಸಿನಲ್ಲಿಯಾಗಲಿ ನಮಗೆ ತೋರುವ ಬಾಹ್ಯಾಧ್ಯಾತ್ಮಿಕ ದೃಶ್ಯಗಳು ಯಾವವೂ ಅಲ್ಲಿರುವದಿಲ್ಲ. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ- ಎಂಬ ಪಂಚಭೂತಗಳಿಂದಾಗಿರುವ ಯಾವ ಕಾರ್ಯಗಳೂ ಅಲ್ಲಿ ಕಾಣಬರುವದಿಲ್ಲ. ಆ ಭೂತಗಳು ಸೂಕ್ಷ್ಮರೂಪದಿಂದ ಕೂಡ ಇರುವದಿಲ್ಲ. ಪೃಥಿವಿ, ಪೃಥಿವೀತನ್ಮಾತ್ರೆ; ಅಪ್ಪು, ಅಪೋತನ್ಮಾತ್ರೆ- ಎಂಬ ಐದು ಭೂತಗಳಾಗಲಿ ಅವುಗಳ ಕಾರಣವಾಗಿರುವ ಸೂಕ್ಷ್ಮವಾದ ತನ್ಮಾತ್ರೆಗಳಾಗಲಿ ಇರುವದಿಲ್ಲ. ಇದರಂತೆ ಚಕ್ಷುಸ್ಸು, ಶ್ರೋತ್ರ, ಘ್ರಾಣ, ಜಿಹ್ವೆ, ತ್ವಕ್ಕು- ಎಂಬ ಪಂಚೇಂದ್ರಿಯಗಳು

ಇರುವದಿಲ್ಲ; ಅವುಗಳ ವಿಷಯವಾದ ರೂಪ, ಶಬ್ದ, ಗಂಧ, ರಸ, ಸ್ಪರ್ಶ- ಎಂಬ ವಿಷಯಗಳೂ ಇರುವದಿಲ್ಲ. ಇದರಂತೆ ವಾಕ್ಪಾಣಿಪಾದಪಾಯೂಪಸ್ಥಗಳೆಂಬ ಐದು ಕರ್ಮೇಂದ್ರಿಯಗಳೂ ಅಲ್ಲಿರುವದಿಲ್ಲ ; ಅವುಗಳ ವಿಷಯವಾದ ವಕ್ತವ್ಯಾದಿಗಳೂ ಅಲ್ಲಿರುವದಿಲ್ಲ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ನಮ್ಮ ಅನುಭವದಲ್ಲಿರುವಂತೆ ಕಣ್ಣಿನಿಂದ ನೋಡುತ್ತೇನೆ, ಕಿವಿಯಿಂದ ಕೇಳುತ್ತೇನೆ, ಮೂಗಿನಿಂದ ಮೂಸುತ್ತೇನೆ- ಎಂದುಮುಂತಾಗಿ ಜ್ಞಾನೇಂದ್ರಿಯಗಳಿಂದ ಆಯಾ ವಿಷಯಗಳನ್ನು ಅರಿಯುವದಾಗಲಿ ಕೈಯಿಂದ ತೆಗೆದುಕೊಳ್ಳುತ್ತೇನೆ, ಕಾಲಿನಿಂದ ಸಂಚರಿಸುತ್ತೇನೆ- ಎಂದು ಮುಂತಾಗಿ ಕರ್ಮೇಂದ್ರಿಯಗಳಿಂದ ಆಯಾ ವಿಷಯಗಳನ್ನು ವ್ಯಾಪಿಸುವದಾಗಲಿ ನಮ್ಮ ಅನುಭವದಲ್ಲಿರುವದಿಲ್ಲ.

ಇಷ್ಟೇ ಅಲ್ಲ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ- ಎಂದು ನಾಲ್ಕು ಬಗೆಯಾಗಿ ವಿಂಗಡಿಸಿಕೊಂಡು ವಿಕಲ್ಪಿಸುವದು, ನಿಶ್ಚಯಿಸುವದು, ಅನುಸಂಧಾನ ಮಾಡುವದು, ಅಭಿಮಾನವನ್ನು ಅನುಭವಿಸುವದು- ಎಂಬ ರೀತಿಯಿಂದ ವ್ಯಾಪಾರ ಮಾಡುತ್ತಿರುವ ಅಂತಃಕರಣದ ವ್ಯಾಪಾರವೂ ಅಲ್ಲಿರುವದಿಲ್ಲ.

ಇನ್ನು ಸಕಲವ್ಯಾಪಾರಕ್ಕೂ ಕಾರಣವಾಗಿರುವ ಪ್ರಾಣದ ಅನುಭವವೂ ಅಲ್ಲಿರುವದಿಲ್ಲ. ಆದಿಲ್ಲದೆ ಜ್ಞಾನೇಂದ್ರಿಯಗಳಾಗಲಿ, ಕರ್ಮೇಂದ್ರಿಯಗಳಾಗಲಿ, ಮನಸ್ಸಾಗಲಿ ವ್ಯಾಪಾರಮಾಡುವದೆಲ್ಲಿ ಬಂತು?

**ಏಷ ಹಿ ದ್ರಷ್ಟಾ ಸ್ಪ್ರಷ್ಟಾ *ಶ್ರೋತಾ ಘ್ರಾತಾ ರಸಯಿತಾ* ಮನ್ತಾ *ಬೋದ್ಧಾ ಕರ್ತಾ* ವಿಜ್ಞಾನಾತ್ಮಾ ಪುರುಷಃ । ಸ ಪರೇಽಕ್ಷರ ಆತ್ಮನಿ *ಸಂಪ್ರತಿಷ್ಠತೇ ॥೯॥***

೯. ಈ ನೋಡುವ, ಮುಟ್ಟುವ, ಕೇಳುವ, ಮೂಸುವ, ಸವಿಯುವ, ಯೋಚಿಸುವ, ಅರಿತುಕೊಳ್ಳುವ, ಕರ್ತೃವಾದ, ವಿಜ್ಞಾನಾತ್ಮನಾದ, ಪುರುಷನಿರುವನಲ್ಲ- ಇವನು ಅಕ್ಷರವೆಂಬ ಪರಮಾತ್ಮನಲ್ಲಿ ಸೇರಿಕೊಳ್ಳುತ್ತಾನೆ.

ಈವರೆಗೆ ವರ್ಣಿಸಿರುವ ಶರೀರ, ಇಂದ್ರಿಯಗಳು, ಮನಸ್ಸು- ಇವುಗಳು ಒಟ್ಟುಗೂಡಿಯಲ್ಲವೆ, ಜೀವನಿಗಾಗಿ ಹೊರಗಿನ ವಿಷಯಭೋಗಗಳನ್ನು ಅರ್ಜಿಸುವ ಕೆಲಸವನ್ನು ಮಾಡುತ್ತಿರುವವು? ಕಣ್ಣಿನ ಇಂದ್ರಿಯವಿಲ್ಲದೆ ನೋಡುವ ಕಾರ್ಯವು ಹೇಗೆ ಯಾರಿಗಾಗಿ ಆಗಬೇಕು? ತ್ವಗಿಂದ್ರಿಯವಿಲ್ಲದಿದ್ದರೆ ಹೊರಗಿನ ವಿಷಯದ ಸ್ಪರ್ಶದ ಫಲವು, ಹೇಗೆ, ಯಾರಿಗೆ ಆದೀತು? ಶ್ರೋತ್ರೇಂದ್ರಿಯವಿಲ್ಲದಿದ್ದರೆ ಶಬ್ದವನ್ನು ಕೇಳುವದೆಂಬ ಕ್ರಿಯೆಯ ಫಲವು ಹೇಗೆ, ಯಾರಿಗೆ ಆಗಬೇಕು?

ಘ್ರಾಣೇಂದ್ರಿಯವಿಲ್ಲದಿದ್ದರೆ ವಾಸನೆಯನ್ನು ಮೂಸುವದೆಂಬ ಕ್ರಿಯೆಯ ಫಲವು ಯಾರಿಗೆ ಹೇಗೆ ಆಗಬೇಕು ? ರಸನೇಂದ್ರಿಯವಿಲ್ಲದಿದ್ದರೆ ರುಚಿಯನ್ನು ಸವಿ ನೋಡುವ ಕ್ರಿಯೆಯ ಫಲವು ಹೇಗೆ ಯಾರಿಗೆ ಆಗಬೇಕು? ಮನಸ್ಸೆಂಬ ಕರಣವಿಲ್ಲದಿದ್ದರೆ ಆಲೋಚಿಸುವದೆಂಬ ಕ್ರಿಯೆಯ ಫಲವು ಹೇಗೆ ಯಾರಿಗೆ ಆಗಬೇಕು ? ಬುದ್ಧಿಯೆಂಬ ಕರಣವಿಲ್ಲದಿದ್ದರೆ ನಿಶ್ಚಯಿಸುವದೆಂಬ ಕ್ರಿಯೆಯ ಫಲವು ಹೇಗೆ ಯಾರಿಗಾಗಿ ಆಗಬೇಕು ? ನಾನು ಕರ್ತೃ, ನಾನು ಜ್ಞಾತೃ, ನಾನು ಭೋಕ್ತೃ- ಎಂಬುದು ಜ್ಞಾನೇಂದ್ರಿಯಗಳೂ ಕರ್ಮೇಂದ್ರಿಯಗಳೂ ಇದ್ದರಲ್ಲವೆ, ಆಗಬೇಕು ? ಮನಸ್ಸಿದ್ದರಲ್ಲವೆ, ಅರಿಯುವವನು, ನಿಶ್ಚಯಿಸುವವನು- ಎಂಬ ತಿಳಿವಳಿಕೆಯಾಗಬೇಕು ?

ಈ ಇಂದ್ರಿಯಗಳೆಲ್ಲವೂ ಶರೀರವನ್ನು ಅವಲಂಬಿಸಿಕೊಂಡೇ ಕೆಲಸಮಾಡುತ್ತಿರುವವಷ್ಟೆ? ಆ ಶರೀರವೇ ಇಲ್ಲದ ಕಡೆಯಲ್ಲಿ ಇಂದ್ರಿಯಗಳಿಂದಾಗುವ ವ್ಯಾಪಾರಗಳಾಗಲಿ, ಅವುಗಳಿಂದಾಗುವ ಫಲವಾಗಲಿ ಯಾರಿಗೆ ಆಗಬೇಕು ?

ಅಂತೂ ಕಾರ್ಯಕರಣಗಳು ಒಟ್ಟುಗೂಡಿ ಯಾರಿಗೆ ಆಗುವವೋ ಆ ಆತ್ಮನೇ ಜೀವನು, ಜ್ಞಾತೃ, ಕರ್ತೃ, ಭೋಕ್ತೃ- ಎನಿಸುತ್ತಾನೆ ; ವಿಷಯೇಂದ್ರಿಯಗಳ ಸಂಬಂಧವಿಲ್ಲದೆ, ಶರೀರವೆಂಬ ಭೋಗಾಧಿಷ್ಠಾನವೂ ಇಲ್ಲದಿದ್ದರೆ ಎಲ್ಲಿಯ ಜೀವ ? ಎಲ್ಲಿಯ ಜ್ಞಾತ? ಎಲ್ಲಿಯ ಕರ್ತ? ಎಲ್ಲಿಯ ಭೋಕ್ತ?

ಹೀಗಿರುವದರಿಂದ ಪೃಥಿವ್ಯಾದಿಭೂತಗಳೂ, ಅವುಗಳಿಂದಾಗಿರುವ ಬಾಹ್ಯ ವಿಷಯಗಳೂ ಅವುಗಳನ್ನು ವಿಷಯೀಕರಿಸುವ ಬಾಹ್ಯಾಂತಃಕರಣಗಳೂ ಯಾವವೂ ಒಂದಿಷ್ಟೂ ಉಳಿಯದೆ ಇರುವ ಸುಷುಪ್ತಿಯಲ್ಲಿ , ಇವುಗಳಲ್ಲಿ ಸೇರಿದ್ದುಕೊಂಡು ಕೆಲಸವನ್ನು ಮಾಡುತ್ತಿದ್ದರೇ ಯಾವನಿಗೆ ಅಸ್ತಿತ್ವವಿರುವದೋ ಆ ಜೀವನು ತಾನೆ ಹೇಗೆ ಸ್ವತಂತ್ರನಾಗಿದ್ದಾನು ? ಜೀವ, ಶರೀರ, ಇಂದ್ರಿಯಗಳು, ವಿಷಯಗಳು- ಎಲ್ಲವೂ ಈ ಅವಸ್ಥೆಯಲ್ಲಿ ಪರಮಾತ್ಮನಲ್ಲಿ ಒಂದಾಗಿಬಿಡುತ್ತವೆ.

ಹೀಗೆ ಜೀವನೂ ಅವನ ಉಪಾಧಿಗಳಾದ ಕಾರ್ಯಕರಣಗಳೂ ಎಲ್ಲವೂ ಪರಮಾತ್ಮನಲ್ಲಿ ಸೇರಿಕೊಳ್ಳುವವೆಂಬುದಕ್ಕೆ ಒಂದು ದೃಷ್ಟಾಂತವನ್ನು ಶ್ರುತಿಯಲ್ಲಿಕೊಟ್ಟಿರುತ್ತದೆ. ಒಂದು ಮರದಮೇಲೆ ಗೂಡುಕಟ್ಟಿಕೊಂಡಿರುವ ಪಕ್ಷಿಗಳು ತಮ್ಮ ದೇಹಯಾತ್ರೆಗೆಂದು ಹೊರಕ್ಕೆ ಹೋಗಿ ಅಲ್ಲಲ್ಲಿ ಸಂಚರಿಸುತ್ತಿದ್ದು ಸಾಯಂಕಾಲವಾಗುತ್ತಲೂ ಹೇಗೆ ಆದೇ ಮರದಲ್ಲಿರುವ ತಮ್ಮ ಗೂಡಿಗೆ ಬಂದು ಸೇರಿಕೊಳ್ಳುವವೋ ಹಾಗೆಯೇ ಎಲ್ಲವೂ ಪರಮಾತ್ಮನಲ್ಲಿ ಬಂದು ಸೇರಿಕೊಳ್ಳುತ್ತದೆ. ಜೀವರೆಂಬ ಪಕ್ಷಿಗಳಿಗೆ ಪರಮಾತ್ಮನೇ ನಿತ್ಯವಾಸದ ಗೂಡಿದ್ದಂತೆ ; ಅವರು

ಅವಿದ್ಯಾಕಾಮಕರ್ಮಗಳಿಂದ ಪ್ರೇರಿತರಾಗಿ ಎಚ್ಚರದಲ್ಲಿ ಬಗೆಬಗೆಯ ವ್ಯವಹಾರವನ್ನು ಮಾಡುತ್ತಿರುವರು. ಕನಸಿನಲ್ಲಿ ವಾಸನಾಮಯವಾದ ಭೋಗಗಳನ್ನು ಅನುಭವಿಸಿ ಶಾಂತರಾಗಿ ಕೊನೆಗೆ ತಮ್ಮ ಮೂಲ ಸ್ವರೂಪವಾದ ಪರಮಾತ್ಮನಲ್ಲಿ ಸೇರಿಕೊಳ್ಳುವರು. ಇಷ್ಟು ದೃಷ್ಟಾಂತಕ್ಕೂ ದಾರ್ಷ್ಟಾಂತಿಕಕ್ಕೂ ಇರುವ ಸಾಮ್ಯ. ಆದರೆ ದೃಷ್ಟಾಂತದಲ್ಲಿ ಆಶ್ರಯವಾಗಿರುವ ಮರವಾಗಲಿ ಗೂಡುಗಳಾಗಲಿ ಹಕ್ಕಿಗಳಿಗಿಂತ ಬೇರೆಯಾಗಿರುವಂತೆ, ಪರಮಾತ್ಮನೇನೂ ಜೀವರುಗಳಿಗಿಂತ ಬೇರೆಯಾಗಿರುವದಿಲ್ಲ; ಅವರು ಎಂದೆಂದಿಗೂ ಪರಮಾತ್ಮಸ್ವರೂಪರೇ ಆಗಿದ್ದು ಉಪಾಧಿಗಳ ನಿಮಿತ್ತದಿಂದ ಕನ್ನಡಿಯಲ್ಲಿರುವ ಪ್ರತಿಬಿಂಬವು ಮುಖಕ್ಕಿಂತ ಬೇರೆಯಾಗಿ ಕಾಣುವಂತೆ ಎಚ್ಚರಕನಸುಗಳಲ್ಲಿ ಪರಮಾತ್ಮನಿಗಿಂತ ಬೇರೆಯಾಗಿರುವಂತೆ ಕಾಣಬರುತ್ತಾರೆ ; ಕನ್ನಡಿಯನ್ನು ಆಚೆಗೆ ತೆಗೆದರೆ ಮುಖವೊಂದೇ ಉಳಿದುಕೊಳ್ಳುವಂತೆ, ಉಪಾಧಿಗಳು ಇಲ್ಲವಾಗಲು ಪರಮಾತ್ಮನಲ್ಲಿಯೇ ಒಂದಾಗಿಬಿಡುತ್ತಾರೆ. ದೃಷ್ಟಾಂತದಲ್ಲಿ ಕನ್ನಡಿಯೆಂಬ ಉಪಾಧಿಯು ಬೇರೆಯಾಗಿದೆ ; ಆದರೆ ದಾರ್ಷ್ಟಾಂತಿಕದಲ್ಲಿ ಶರೀರೇಂದ್ರಿಯಮನಸ್ಸುಗಳೆಂಬೀ ಉಪಾಧಿಗಳೂ ಪರಮಾರ್ಥವಾಗಿರುವದಿಲ್ಲ, ಅವಿವೇಕದಿಂದ ಆಗ್ಗೆ ಇರುವಂತೆ ತೋರುತ್ತವೆ ಅಷ್ಟೆ.

ಇರಲಿ ಸುಷುಪ್ತಿಯಲ್ಲಿ ಜೀವರುಗಳು ಉಪಾಧಿಗಳು ಇಲ್ಲವಾಗಲು ಯಾವ ಪರಮಾತ್ಮನಲ್ಲಿ ಸೇರುವರೋ ಆ ಸ್ವರೂಪವನ್ನು ಶ್ರುತಿಯಲ್ಲಿ ಹೇಗೆ ಹೇಳಿದೆ ಎಂಬುದನ್ನು ಕೇಳೋಣ :-

*ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯಮಶರೀರ ಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ। ಸ ಸರ್ವಜ್ಞಃ ಸರ್ವೋ ಭವತಿ ತದೇಷ ಶ್ಲೋಕಃ ॥೧೦॥*

*ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ ಸಂಪ್ರತಿಷ್ಠನ್ತಿ ಯತ್ರ। ತದಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವಮೇವಾವಿವೇಶೇತಿ ॥೧೧॥*

೧೦-೧೧. ಎಲೈ ಸೋಮ್ಯನೆ, ಎಲ್ಲಾ ದೇವತೆಗಳೊಡನೆ ವಿಜ್ಞಾನಾತ್ಮನೂ ಪ್ರಾಣಗಳೂ ಭೂತಗಳೂ ಯಾವದರಲ್ಲಿ ಸೇರಿಕೊಳ್ಳುವವೋ, ಆ ಅಕ್ಷರವನ್ನು ಯಾವಾಗ ಅರಿತುಕೊಳ್ಳುವನೋ ಆ ಸರ್ವಜ್ಞನು ಸರ್ವವನ್ನೂ ಪ್ರವೇಶಿಸಿದವನಾಗುವನು. ಅಕ್ಷರವೆಂಬ ಪರವಸ್ತುವನ್ನೇ ಪಡೆದುಕೊಳ್ಳುತ್ತಾನೆ. ಯಾವನಾದರೆ ನೆರಳಿಲ್ಲದ, ಶರೀರವಿಲ್ಲದ, ಕೆಂಪಲ್ಲದ, ಶುಭ್ರವಾದ, ಅಕ್ಷರವನ್ನು ಅರಿತುಕೊಳ್ಳುತ್ತಾನೋ ಆತನು ಸರ್ವಜ್ಞನೂ ಸರ್ವವೂ ಆಗುತ್ತಾನೆ.

ಜೀವನು ಚಕ್ಷುರಿಂದ್ರಿಯವೇ ಮುಂತಾದ ಉಪಾಧಿಗಳಿಂದ ದ್ರಷ್ಟೃ (ನೋಡುವವನು) ಎಂದು ಮುಂತಾಗಿ ತೋರುವ ರೂಪವುಳ್ಳವನಾದರೂ ತನ್ನ ಕಾರ್ಯಕರಣಗಳು ಇಲ್ಲವಾಗಲು ಪರಮಾತ್ಮನನ್ನೇ ಸೇರಿಕೊಳ್ಳುತ್ತಾನೆ, ಪರಮಾತ್ಮನಲ್ಲಿಯೇ ಒಂದಾಗುತ್ತಾನೆ. ಈ ಪರಮಾತ್ಮನನ್ನೇ ಮುಂಡಕದಲ್ಲಿ 'ಅಕ್ಷರ'ವೆಂಬ ಹೆಸರಿನಿಂದ ಹೇಳಿರುವದು.

ಅಕ್ಷರವೆಂದರೆ ಯಾವ ವಿಶೇಷಧರ್ಮವೂ ಇಲ್ಲದ ಪರಮಾರ್ಥತತ್ತ್ವವು. ವಸ್ತುವಿನಲ್ಲಿ ಧರ್ಮವು ಬಂದು ಸೇರಿಕೊಳ್ಳುವದರಿಂದಲೂ ಆಗಾಗ್ಗೆ ಅದನ್ನು ಬಿಟ್ಟು ಹೋಗುವದರಿಂದಲೂ ಅದರಲ್ಲಿ ವಿಕಾರವುಂಟಾಗುತ್ತಿರುತ್ತದೆ. ಆದರೆ ಈ ಪರಮಾತ್ಮನು ಅಶರೀರನು, ಎಂದರೆ ನಾಮರೂಪಗಳಿಂದಾಗಿರುವ ಯಾವ ಉಪಾಧಿಯೂ ಇಲ್ಲದವನು; ಅಲೋಹಿತನು ಎಂದರೆ ಕೆಂಪು, ಕಪ್ಪು ಮುಂತಾದ ಗುಣಗಳಿಲ್ಲದವನು: ಅಚ್ಛಾಯನು ಎಂದರೆ ಯಾವ ಅಜ್ಞಾನದ ತಮಸ್ಸೂ ಇಲ್ಲದವನು. ಆದ್ದರಿಂದ ಯಾವಾಗಲೂ ಶುದ್ಧವಾಗಿರುವಾತನು, ಅಂತೂ ದ್ರವ್ಯ, ಗುಣ, ಕರ್ಮ, ಸಂಬಂಧ-ಮುಂತಾದ ಯಾವ ವಿಶೇಷವೂ ಇಲ್ಲದವನು- ಎಂಬುದರಲ್ಲಿ ಈ ವರ್ಣನೆಯ ತಾತ್ಪರ್ಯವಿದೆ. ಮುಂಡಕದಲ್ಲಿ ಇದನ್ನು ಇನ್ನಷ್ಟು ಹಿಗ್ಗಿಸಿ ಹೇಳಿದೆ : ಅಕ್ಷರವೆಂಬ ಹೆಸರಿನ ಈ ಪರಮಾತ್ಮತತ್ತ್ವವು ಬುದ್ಧೀಂದ್ರಿಯಗಳಿಗೆ ಗೋಚರವಲ್ಲ, ಕರ್ಮೇಂದ್ರಿಯಗಳಿಗೂ ಗೋಚರವಲ್ಲ; ಇದಕ್ಕೆ ಕಾರಣವು ಯಾವದೂ ಇಲ್ಲ ; ಇದಕ್ಕೆ ದ್ರವ್ಯಧರ್ಮಗಳೂ ಇಲ್ಲ, ಗುಣಗಳೂ ಇಲ್ಲ. ಅದು ಇಂದ್ರಿಯಗಳಿಲ್ಲದ್ದು, ಅದು ನಾಶವಿಲ್ಲದ್ದು, ಬ್ರಹ್ಮಾದಿಸ್ಥಾವರಾಂತವಾದ ಪ್ರಾಣಿಗಳ ರೂಪದಿಂದ ತೋರಿಕೊಳ್ಳುತ್ತಿದೆ. ಆಕಾಶದಂತೆ ಸರ್ವವ್ಯಾಪಿಯಾಗಿದೆ ಶಬ್ದಾದಿಗಳಲ್ಲಿ ಯಾವದೊಂದೂ ಇಲ್ಲದ್ದರಿಂದ ಅತಿಸೂಕ್ಷ್ಮವಾಗಿರುತ್ತದೆ ; ಯಾವ ಧರ್ಮವೂ ಇಲ್ಲದ್ದರಿಂದಲೇ ಅದು ಅವ್ಯಯವು-ಎಂದು ಅಲ್ಲಿ ವಿವರಿಸುತ್ತದೆ.

ಸುಷುಪ್ತಿಯಲ್ಲಿರುವ ಪರಮಾತ್ಮಸ್ವರೂಪವು ಹೀಗೆ ಸರ್ವಧರ್ಮವರ್ಜಿತವಾಗಿರುತ್ತಿದ್ದರೂ ಅದರಲ್ಲಿಯೇ ಎಲ್ಲಾ ಜೀವರುಗಳೂ ಅವರ ಉಪಾಧಿಗಳೂ ಹೊರಗಿನ ಪ್ರಪಂಚವೂ ಪ್ರತಿದಿನವೂ ಅಡಗಿಕೊಳ್ಳುತ್ತಾ ಅದರಲ್ಲಿ ಒಂದಾಗುತ್ತಿರುತ್ತವೆ. ಅದರ ತತ್ತ್ವವನ್ನು ಯಾವನು ಅರಿತುಕೊಳ್ಳುವನೋ, ಅವನು ಸರ್ವಜ್ಞನಾಗುತ್ತಾನೆ, ಸರ್ವವೂ ಆಗುತ್ತಾನೆ -ಎಂದು ಇಲ್ಲಿ ಹೇಳಿರುತ್ತದೆಯಷ್ಟೆ? ಈ ವಾಕ್ಯದ ಅಭಿಪ್ರಾಯವನ್ನು ನಾವು ಮನದಟ್ಟುಮಾಡಿಕೊಳ್ಳುವದು ಹೇಗೆ? ಅಕ್ಷರವನ್ನು ಅರಿಯುವದು ಎಂದರೆ ಹೊರಗಿನ ಪದಾರ್ಥಗಳನ್ನು ಇಂದ್ರಿಯಗಳಿಂದ ಕಂಡುಕೊಳ್ಳುವಂತೆ,

ಅಥವಾ ವಿಚಾರವನ್ನು ಮಾಡಿ ಮನಸ್ಸಿನ ಪ್ರತ್ಯಯಗಳಿಂದ ಅರಿತುಕೊಳ್ಳುವಂತೆ ಅಲ್ಲ; ನಾವು ನಮ್ಮನಮ್ಮ ಸುಷುಪ್ತಿಯಲ್ಲಿ ಯಾವ ಸ್ವರೂಪದಲ್ಲಿರುವೆವೆಂಬುದನ್ನು ಅನುಭವಾನುಸಾರವಾಗಿ ನೋಡಿಕೊಳ್ಳುವದರಿಂದಲೇ ಅದನ್ನು ಅರಿತುಕೊಳ್ಳಬಹುದು.

ಎಚ್ಚರದಲ್ಲಿ ನಮಗೆ ಒಂದು ರೂಪವು ಇರುವದೆಂದೂ ಸುಷುಪ್ತಿಯಲ್ಲಿ ಮತ್ತೊಂದು ರೂಪವು ಇರುವದೆಂದೂ ತಿಳಿಯಬಾರದು ; ಏಕೆಂದರೆ ಸುಷುಪ್ತಿಯಲ್ಲಿ ನಮ್ಮ ಸ್ವರೂಪವೇನೂ ಮುಕ್ಕಾಗುವದಿಲ್ಲ, ಎಚ್ಚರದಲ್ಲಿ ಅದೇನೂ ಉಬ್ಬಿಕೊಳ್ಳುವದಿಲ್ಲ. ನಮಗೆ ಇಂದ್ರಿಯಗಳೂ ಮನಸ್ಸೂ ಶರೀರವೂ ಇರುವವೆಂದೂ ಅವುಗಳಿಂದ ಪರಿಚ್ಛಿನ್ನರಾಗಿ ನಾವು ಒಂದಾನೊಂದು ಜಗತ್ತಿನೊಳಗೆ ಇದ್ದುಕೊಂಡು ಜೀವಿಸುತ್ತಿರುವವೆಂದೂ ಎಚ್ಚರದಲ್ಲಿ ನಮಗೆ ತೋರುವದು ನಿಜ. ಆದರೂ ಆಗಲೂ ನಮ್ಮ ನಿಜವಾದ ಚೈತನ್ಯಸ್ವರೂಪವು ಹಾಗೆಯೇ ಇರುತ್ತದೆ ; ಆ ಚೈತನ್ಯವು ಈ ಶರೀರೇಂದ್ರಿಯಮನಸ್ಸುಗಳನ್ನೂ ಇಡಿಯ ಜಗತ್ತನ್ನೂ ವ್ಯಾಪಿಸಿಕೊಂಡೇ ಇರುತ್ತದೆ. ಆದರೆ ಶರೀರೇಂದ್ರಿಯಗಳ ಗುಂಪಿನ ಅಭಿಮಾನದಿಂದ ನಮಗೆ ನಾವು ಅಳತೆಯ ಸ್ವರೂಪದವರೆಂಬ ಬುದ್ಧಿಯ ವಾಸನೆಯು ಬಲವಾಗಿದ್ದುಕೊಂಡುಬಿಟ್ಟಿರುತ್ತದೆ. ಹೀಗಿದ್ದರೂ ಸುಷುಪ್ತಿಯಲ್ಲಿ ಈ ನಾವೇ ಯಾವ ಶರೀರೇಂದ್ರಿಯಮನಸ್ಸುಗಳ ಹಂಗೂ ಇಲ್ಲದೆ, ಯಾವ ದ್ವೈತಪ್ರಪಂಚದ ಸಂಬಂಧವೂ ಇಲ್ಲದೆ, ನಿಷ್ಪ್ರಪಂಚಚೈತನ್ಯಸ್ವರೂಪರಾಗಿ ಇದ್ದುಕೊಂಡಿರುವೆವೆಂಬುದನ್ನು ಅನುಭವಾನುಸಾರವಾಗಿ ಮನದಂದುಕೊಂಡರೆ ಸಾಕು, ಅಷ್ಟರಿಂದಲೇ ನಾವು ಪರಿಚ್ಛಿನ್ನ ಸ್ವರೂಪರೆಂಬ ತಪ್ಪು ತಿಳಿವಳಿಕೆಯು ಹಾರಿಹೋಗುವದು. ನಾವೇ ಸರ್ವರೂ ಆಗಿರುತ್ತೇವೆ; ಸರ್ವಜ್ಞರೂ ಎಂದರೂ ಎಲ್ಲವನ್ನೂ ಜಾಗ್ರತ್ಸ್ವಪ್ನಗಳಲ್ಲಿ ಬೆಳಗುತ್ತಿರುವ ಚೈತನ್ಯಸ್ವರೂಪರೂ ಆಗಿರುತ್ತೇವೆ- ಎಂಬ ಬುದ್ಧಿಯು ಮನದಲ್ಲಿ ಮಿಂಚುವದು.

ಈ ಅರ್ಥವನ್ನೇ 'ವಿಜ್ಞಾನಾತ್ಮಾ' ಎಂದುಮುಂತಾಗಿರುವ ಮಂತ್ರದಲ್ಲಿ ಸಂಗ್ರಹಿಸಿ ಹೇಳಿರುತ್ತದೆ. ವಿಜ್ಞಾನಾತ್ಮನೂ ಎಂದರೆ ಜೀವನೂ ಎಲ್ಲಾ ದೇವತೆಗಳೊಡಗೂಡಿರುವ, ಎಂದರೆ ಅಗ್ನ್ಯಾದಿದೇವತೆಗಳಿಂದ ಅಧಿಷ್ಠಿತವಾಗಿರುವ, ವಾಗಾದೀಂದ್ರಿಯಗಳೂ ಪೃಥಿವ್ಯಾದಿಭೂತಗಳೂ ಯಾವದರಲ್ಲಿ ಸೇರಿಹೋಗುವವೋ ಅದನ್ನು ತಿಳಿದವನು ಸರ್ವಜ್ಞನು, ಅವನು ಎಲ್ಲರಲ್ಲಿಯೂ ಪ್ರವಿಷ್ಟನಾಗುತ್ತಾನೆ- ಎಂದು ಮಂತ್ರದ ಅಭಿಪ್ರಾಯ.

ಅವಿದ್ಯೆಯಿಂದ ಜೀವನು ಇಂದ್ರಿಯಗಳು, ಅಧಿಷ್ಠಾತೃದೇವತೆಗಳು, ಪೃಥಿವ್ಯಾದಿಭೂತಗಳು- ಮುಂತಾದ ಪ್ರಪಂಚದೊಡನೆ ಇರುವಂತೆ ನಮಗೆ ತೋರುತ್ತಿರುವದು ನಿಜ. ಆದರೆ ಆ ಸ್ವರೂಪವು ನಮ್ಮ ನಿಜವಾದ ಸ್ವರೂಪವಲ್ಲ. ಆದೆಲ್ಲವನ್ನೂ ನೋಡುತ್ತಿರುವ ಸರ್ವಸಾಕ್ಷಿಯಾದ ನಿತ್ಯಚೈತನ್ಯವೇ ನಮ್ಮ ಸ್ವರೂಪವು. ಹೀಗೆಂಬುದು ಕಾರ್ಯಕಾರಣಗಳ ಸಮುದಾಯವು ಕಾಣುತ್ತಿರುವಾಗ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ನಮ್ಮ ಚೈತನ್ಯ ಸ್ವರೂಪವನ್ನು ಮನದಂದುಕೊಂಡರೇ ಕಾಣುವದು. ಅದು ಎಲ್ಲರಿಗೂ ಸಾಧ್ಯವಾಗಧೆ ಇರಬಹುದು. ಯಾವ ಕಾರ್ಯಕರಣಸಂಘಾತದ ಸಂಬಂಧವೂ ಇಲ್ಲದೆ ಸುಷುಪ್ತಿಯಲ್ಲಿ ತಾನೇ ತಾನಾಗಿರುವ ನಮ್ಮ ನಿತ್ಯಚೈತನ್ಯಸ್ವರೂಪವನ್ನು ಮನದಂದುಕೊಂಡರಂತೂ ನಾವು ಸರ್ವಸ್ವರೂಪರು ಎಂಬುದು ಸುಸ್ಫುಟವಾಗುವದು. ನಮಗೆ ಒಂದೊಂದು ಅವಸ್ಥೆಯಲ್ಲಿ ಒಂದೊಂದು ರೂಪವಿರುವದೆಂದು ಎಂದಿಗೂ ತಿಳಿಯಬಾರದು. ಯಾವಾಗ ಏನು ತೋರಿದರೂ ನಮ್ಮ ಸ್ವರೂಪವಾದ ಸಾಕ್ಷಿಚೈತನ್ಯದಿಂದ ವ್ಯಾಪ್ತವಾಗಿಯೇ ಅದು ತೋರಿಕೊಳ್ಳಬೇಕಾಗಿದೆಯಾದ್ದರಿಂದ ನಮಗೆ ಎಚ್ಚರ, ಕನಸು, ತನಿನಿದ್ರೆ- ಎಂಬ ಮೂರು ಅವಸ್ಥೆಗಳು ಇವೆ ಎಂಬುದೂ ಅವಿದ್ಯೆಯೇ ; ಏಕೆಂದರೆ ನಮ್ಮ ಚೈತನ್ಯಸ್ವರೂಪದಿಂದ ವ್ಯಾಪ್ತವಾಗದೆ ಇರುವ ಯಾವ ಅವಸ್ಥೆಯೂ ನಿಜವಾಗಿರುವದೇ ಇಲ್ಲ.

ಇಲ್ಲಿಗೆ ಸೌರ್ಯಾಯಣಿ ಗಾರ್ಗ್ಯನ ಪ್ರಶ್ನೆಯನ್ನು ನಿರ್ಣಯಿಸಿದಂತೆ ಆಯಿತು. ನಮ್ಮಲ್ಲಿರುವ ಶರೀರೇಂದ್ರಿಯಗಳ ವ್ಯಾಪಾರವು ಎಚ್ಚರದಲ್ಲಿರುತ್ತದೆ. ಕನಸಿನಲ್ಲಿ ಇವುಗಳು ತಮ್ಮ ವ್ಯಾಪಾರವನ್ನು ನಿಲ್ಲಿಸಿದಾಗಲೂ ಮನಸ್ಸಿನಿಂದ ಕನಸನ್ನು ಕಾಣುತ್ತಿರುತ್ತೇವೆ, ಪ್ರಾಣವು ವ್ಯಾಪಾರಮಾಡುತ್ತಲೇ ಇರುತ್ತದೆ. ಆದರೆ ಸುಷುಪ್ತಿಯಲ್ಲಿ ಈ ಉಪಾಧಿಗಳೆಲ್ಲವೂ ಅಡಗಿ ಅಕ್ಷರಾತ್ಮಸ್ವರೂಪವೊಂದೇ ಉಳಿದುಕೊಂಡಿರುವದು. ಅದೇ ನಮ್ಮ ನಿಜವಾದ ಪರಮಾರ್ಥಸ್ವರೂಪವು ಎಂದು ನಿರ್ಣಯವಾಯಿತು.

# ೬. ಐದನೆಯ ಪ್ರಶ್ನೆ :

# ಓಂಕಾರೋಪಾಸನೆಯ ಫಲ

## ಸತ್ಯಕಾಮನ ಪ್ರಶ್ನೆ

*ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ । ಸ ಯೋ ಹ ವೈ ತದ್ಭಗವನ್ ಮನುಷ್ಯೇಷು ಪ್ರಾಯಣಾನ್ತಮೋಂಕಾರಮಭಿಧ್ಯಾಯೀತ ಕತಮಂ ವಾವ ಸ ತೇನ ಲೋಕಂ ಜಯತೀತಿ ॥೧॥*

೧. ಆಮೇಲೆ ಈತನನ್ನು ಶೈಬ್ಯಸತ್ಯಕಾಮನು ಕೇಳಿದನೇನೆಂದರೆ: ಭಗವಂತನೆ, ಮನುಷ್ಯರಲ್ಲಿ ಪ್ರಾಯಣದವರೆಗೂ ಓಂಕಾರವನ್ನು ಯಾವನಾದರ ಹಾಗೆ ಅಭಿಧ್ಯಾನಮಾಡುತ್ತಿರುವನೋ ಅವನು ಅದರಿಂದ ಯಾವ ಲೋಕವನ್ನು ಗೆದ್ದುಕೊಳ್ಳುತ್ತಾನೆ ?

ಈವರೆಗೆ ಪರಬ್ರಹ್ಮವನ್ನೂ ಅಪರಬ್ರಹ್ಮವನ್ನೂ ಕುರಿತ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿದ್ದಾಗಿದೆ. ಅಪರಬ್ರಹ್ಮದ ಮಹಿಮೆಯನ್ನು ವಿಸ್ತರಿಸಿ ಪ್ರಾಣಾತ್ಮನ ಉಪಾಸನೆಯಿಂದಾಗುವ ಫಲವನ್ನು ಮೊದಲನೆಯ ಮೂರು ಪ್ರಶ್ನೆಗಳಿಂದ ನಿರ್ಣಯಿಸಿದ್ದಾಯಿತು. ನಾಲ್ಕನೆಯ ಪ್ರಶ್ನೆಯಲ್ಲಿ ಅವಸ್ಥಾತ್ರಯದ ಪರೀಕ್ಷೆಯನ್ನು ಮಾಡಿ ನಿರುಪಾಧಿಕವಾದ ಪರಬ್ರಹ್ಮದ ತತ್ತ್ವವನ್ನು ನಿರ್ಣಯಿಸಿಕೊಂಡದ್ದಾಯಿತು. ಆ ನಿರುಪಾಧಿಕಬ್ರಹ್ಮಕ್ಕೂ ನಮ್ಮಗಳ ಆತ್ಮನಿಗೂ ಯಾವ ಭೇದವೂ ಇಲ್ಲವೆಂಬುದನ್ನು ಅಲ್ಲಿ ಕಂಡುಕೊಂಡದ್ದಾಯಿತು. ಈಗ ಮಧ್ಯಮಾಧಿಕಾರಿಗಳಿಗೆ ಸಾಧನವಾಗಿ ಓಂಕಾರೋಪಾಸನೆಯನ್ನು ವಿಧಿಸುವದಕ್ಕೆಂದು ಈ ಐದನೆಯ ಪ್ರಶ್ನೆಯನ್ನು ತೆಗೆದುಕೊಂಡಿದೆ.

ಸತ್ಯಕಾಮನು ಇಲ್ಲಿ ಪಿಪ್ಪಲಾದರನ್ನು ಕೇಳಿರುವದೇನೆಂದರೆ, ಎಲ್ಲರೂ ತಾವು ಹೇಳಿದ ಪರಬ್ರಹ್ಮವನ್ನಾಗಲಿ ಅಪರಬ್ರಹ್ಮವನ್ನಾಗಲಿ ತಿಳಿಯುವದಕ್ಕೆ ಸಮರ್ಥರಲ್ಲ. ಪರೋಕ್ಷವಾಗಿ ತಿಳಿದುಕೊಂಡರೂ ಉಪಾಸನೆಯನ್ನು ಮಾಡಿದಲ್ಲದೆ ಬ್ರಹ್ಮದ ಸಾಕ್ಷಾತ್ಕಾರವಾಗಲಿ, ಅದರ ಪ್ರಾಪ್ತಿಯಾಗಲಿ- ಆಗಲಾರದು. ಯಾವನಾದರೆ ಕರ್ಮದಿಂದಾಗುವ ಅದೃಷ್ಟಫಲವನ್ನು ಬಯಸದೆ ಉಪಾಸನೆಯಿಂದ ನಿತ್ಯವಾದ ಬ್ರಹ್ಮವನ್ನು ಪಡೆದುಕೊಳ್ಳಲಿಚ್ಛಿಸುವನೋ, ಅಂಥವನು ಸಾವಿರದಲ್ಲಿ ಒಬ್ಬನಂತೆಕೂಡ ಇರುವದು ಕಷ್ಟ. ಉಪಾಸನೆಯೆಂದರೇನೂ ಕರ್ಮಗಳಂತೆ ನಿಯತಕಾಲದಲ್ಲಿ ಮಾಡಿಬಿಡುವ ಅನುಷ್ಠಾನವಲ್ಲ. ಅಖಂಡವಾಗಿ ಸಾಯುವವರೆಗೆ ಮತ್ತೊಂದು

ಪ್ರತ್ಯಯವು ನಡುವೆ ಬಾರದಂತೆ ಬ್ರಹ್ಮಪ್ರತ್ಯಯವನ್ನೇ ಸಂತತವಾಗಿ ಸಾಗಿಸುತ್ತಾ ಧ್ಯಾನಮಾಡುವ ದುಷ್ಕರವಾದ ಅನುಷ್ಠಾನವದು. ಹೊರಗಿನ ವಿಷಯಗಳ ಚಿಂತನೆಯನ್ನು ಸಂಪೂರ್ಣವಾಗಿ ಬಿಟ್ಟಿರಬೇಕು; ಮನಸ್ಸನ್ನು ಬ್ರಹ್ಮದಲ್ಲಿಯೇ ನೆಲೆನಿಲ್ಲಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಿರಬೇಕು. ಹಾಗೆ ನಿರಂತರವೂ ಭಕ್ತಿಯಿಂದ ಇದೇ ಬ್ರಹ್ಮವೆಂಬ ಭಾವನೆಯಿಂದ ಉಪಾಸನೆಮಾಡಿದರೆ, ಚಿತ್ತವು ಗಾಳಿಯಿಲ್ಲದೆಡೆಯಲ್ಲಿರುವ ದೀಪದ ಕುಡಿಯಂತೆ ಪ್ರತ್ಯಯವು ಅಚಲವಾಗಿದ್ದರೆ, ಅಭಿಧ್ಯಾನವೆನಿಸುವದು. ಇದಕ್ಕೆ ಸತ್ಯವಚನ, ಬ್ರಹ್ಮಚರ್ಯ, ಅಹಿಂಸ, ಅಪರಿಗ್ರಹ, ತ್ಯಾಗ, ಸಂನ್ಯಾಸ, ಶೌಚ, ಸಂತೋಷ, ಅಮಾಯಾವಿತ್ವ - ಮುಂತಾದ ಅನೇಕ **ಯಮನಿಯಮಗಳು ಸಹಾಯಕವಾಗಿರಬೇಕು.** ಹೀಗೆ ಯಾವ ಮಹಾತ್ಮನು ಬದುಕಿರುವವರೆಗೂ ಈ ಉಪಾಸನೆಯನ್ನೇ ವ್ರತವೆಂದು ಹಿಡಿದಿರುವನೋ ಅವನಿಗೆ ಯಾವ ಲೋಕವು ದೊರಕುವದು? ಉಪಾಸನೆಗಳಿಗೂ ಕರ್ಮಗಳಿಗೂ ದೊರಕುವ ಲೋಕಗಳು ಅನೇಕವಾಗಿವೆಯಷ್ಟೆ? ಅವುಗಳೊಳಗೆ ಈ ಓಂಕಾರೋಪಾಸನೆಗೆ ಯಾವ ಫಲವು ದೊರಕುವದು? -ಎಂದು ಶೈಬ್ಯನು ಕೇಳಿರುತ್ತಾನೆ.

ಓಂಕಾರವೆಂಬುದು **ವೇದಗಳ ಪರಮಸಾರವೆಂದು** ವೇದದ ಬ್ರಾಹ್ಮಣಭಾಗದಲ್ಲಿ ಹೊಗಳಿರುತ್ತದೆ. ಗೃಹಸ್ಥರು ಸಾಲಿಗ್ರಾಮ, ಪ್ರತಿಮೆ- ಮುಂತಾದವುಗಳನ್ನು ವಿಷ್ಣುಬುದ್ಧಿಯಿಂದ ಅರ್ಚನೆ ಮಾಡುವದರಿಂದ ಹೇಗೆ ಚಿತ್ತಶುದ್ಧಿಯನ್ನು ಪಡೆದುಕೊಂಡು ತಮ್ಮತಮ್ಮ ಇಷ್ಟಾರ್ಥಗಳನ್ನು ಭಗವಂತನ ಅನುಗ್ರಹದಿಂದ ಪಡೆದುಕೊಳ್ಳುವರೋ, ಅದರಂತೆಯೇ ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ಯಮನಿಯಮಗಳ ಸಮೇತವಾಗಿ ಓಂಕಾರವನ್ನೇ ಬ್ರಹ್ಮಬುದ್ಧಿಯಿಂದ ಸಂತತವೂ ಸಂನ್ಯಾಸಿಗಳು ಉಪಾಸನೆಮಾಡುತ್ತಾರೆ. ಓಂಕಾರದ ತತ್ತ್ವವನ್ನು ಅರಿತುಕೊಂಡರೆ ಉತ್ತಮಾಧಿಕಾರಿಗಳು ಇಲ್ಲಿಯೇ ಬ್ರಹ್ಮಾತ್ಮೈಕತ್ವವನ್ನು ಕಂಡುಕೊಂಡು ಕೃತಕೃತ್ಯರಾಗುವರೆಂದು **ಮಾಂಡೂಕ್ಯೋಪನಿಷತ್ತಿನಲ್ಲಿ** ಹೇಳಿರುತ್ತದೆ. ಆದರೆ ಅದೇ ಓಂಕಾರವನ್ನು ಭಗವಂತನ ನಾಮವೆಂದಾಗಲಿ ಅಥವಾ **ಪ್ರತೀಕವೆಂದಾಗಲಿ** ಉಪಾಸನೆಮಾಡುವ ಮಂದಮಧ್ಯಮಾಧಿಕಾರಿಗಳಿಗೆ ಕಾಲಾಂತರದಲ್ಲಿ ಆಗುವ ಫಲವನ್ನು ಹೇಳಬೇಕೆಂದು ಶ್ರುತಿಯು ಈಗ ಹೊರಟಿದೆ. ಪರಮಾರ್ಥದೃಷ್ಟಿಯಿಂದ ನೋಡಿದರೆ ಓಂಕಾರಕ್ಕೂ ಪರಬ್ರಹ್ಮಕ್ಕೂ ಯಾವ ಭೇದವೂ ಇರುವದೇ ಇಲ್ಲ. ಆದರೆ ವ್ಯವಹಾರದೃಷ್ಟಿಯಿಂದ ಅದೇ ಓಂಕಾರವನ್ನು ಪರಮೇಶ್ವರನ ನಾಮವೆಂದು ಜಪಿಸಿದರೆ ಅದರಿಂದ ಭಗವಂತನು ಸುಪ್ರೀತನಾಗಿ ಅದಕ್ಕೂ ಫಲವನ್ನು ಕೊಡುತ್ತಾನೆ. ಶ್ರದ್ಧಾಭಕ್ತಿಗಳಿಂದ ಕೂಡಿ ಈ ಓಂಕಾರವೇ ಬ್ರಹ್ಮವು ಎಂದು ಆರಾಧನೆಮಾಡುವ ಧ್ಯಾನದಿಂದಲೂ ಅದೇ ಭಗವಂತನೇ ಸಂತುಷ್ಟನಾಗಿ ಉಪಾಸಕನಿಗೆ ಉಪಾಸನೆಗೆ ತಕ್ಕ ಫಲವನ್ನು ಕೊಡುತ್ತಾನೆ. ಈ ಕೊನೆಯ ಧ್ಯಾನವನ್ನು ಕುರಿತೇ ಇಲ್ಲಿ ಪ್ರಶ್ನೆಯನ್ನು ಮಾಡಿರುತ್ತದೆ.

## ಓಂಕಾರವು ಪರಾಪರಬ್ರಹ್ಮಗಳಿಗೆ ಪ್ರತೀಕ

***ತಸ್ಮೈಸ ಹೋವಾಚ। ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಙ್ಕಾರಃ। ತಸ್ಮಾದ್ವಿದ್ವಾನೇತೇನೈವಾಯತನೇನೈಕತರಮನ್ವೇತಿ ॥೨॥***

೨. ಅವನಿಗೆ ಆತನು ಹೇಳಿದನೇನೆಂದರೆ: ಎಲೈ ಸತ್ಯಕಾಮನೆ, ಈ ಪರಬ್ರಹ್ಮವೆಂಬುದೂ ಅಪರಬ್ರಹ್ಮವೆಂಬುದೂ ಇದೇ ಓಂಕಾರವೇ. ಆದ್ದರಿಂದ ತಿಳಿದವನು ಇದೇ ಆಯತನದಿಂದ ಈ ಎರಡರೊಳಗೆ ಒಂದನ್ನು ಹಿಂಬಾಲಿಸುತ್ತಾನೆ.

ಈಗ ಪಿಪ್ಪಲಾದನು ಪ್ರಶ್ನೆಗೆ ಉತ್ತರವನ್ನು ಹೇಳುತ್ತಿದಾನೆ. ಈ ಪ್ರಾಣವೆಂಬ ಅಪರಬ್ರಹ್ಮವೂ ಅಕ್ಷರವೆಂಬ ಪರಬ್ರಹ್ಮವೂ ಓಂಕಾರಾತ್ಮಕವಾಗಿರುತ್ತದೆ. ಏಕೆಂದರೆ ಓಂಕಾರವೇ ಇದಕ್ಕೆ ಪ್ರತೀಕವಾಗಿರುತ್ತದೆ. ಪರಬ್ರಹ್ಮವು ಶಬ್ದಸ್ಪರ್ಶಾದಿಗಳಿಲ್ಲದ್ದರಿಂದ ನಿರ್ವಿಶೇಷವಾಗಿರುತ್ತದೆಯಾಗಿ ಬರಿಯ ಮನಸ್ಸಿನ ಪ್ರತ್ಯಯದಿಂದ ಹೀಗೆಂದು ನಿಶ್ಚಯಿಸಿ ಅರಿತುಕೊಳ್ಳುವದಕ್ಕೆ ಆಗುವಂತಿಲ್ಲ; ಏಕೆಂದರೆ ಅದು ಅತೀಂದ್ರಿಯವಾಗಿರುತ್ತದೆ. ಆದರೆ ವಿಷ್ಣ್ವಾದಿಪ್ರತಿಮೆಯಂತೆ ಬ್ರಹ್ಮದ ಪ್ರತೀಕವಾಗಿದ್ದು ಭಕ್ತಿಯಿಂದ ಇದೇ ಬ್ರಹ್ಮವೆಂದು ಭಾವಿಸುವವರಿಗೆ ಅದು ಪ್ರಸನ್ನವಾಗುತ್ತದೆ. ಇದಕ್ಕೆ ಶಾಸ್ತ್ರವೇ ಪ್ರಮಾಣವು. ಹೀಗೆಯೇ ಅಪರಬ್ರಹ್ಮವು ಓಂಕಾರವೆಂಬ ಪ್ರತೀಕದಲ್ಲಿ ಧ್ಯಾನಮಾಡುವದರಿಂದ ಭಕ್ತರಿಗೆ ಪ್ರಸನ್ನವಾಗುತ್ತದೆ. ಆದ್ದರಿಂದ ತಮ್ಮತಮ್ಮಯೋಗ್ಯತೆಗೆ ತಕ್ಕಂತೆ ಪರಬ್ರಹ್ಮವನ್ನೋ ಅಪರಬ್ರಹ್ಮವನ್ನೋ ಓಂಕಾರದಲ್ಲಿ ಉಪಾಸನೆಮಾಡಬೇಕು. ಇಲ್ಲಿ ಉಪಾಸನೆಗೆ ವಿಷಯವಾಗಿ ಕಾಣುವದು ಓಂಕಾರವೇ; ಆದರೆ ಅದರಲ್ಲಿ ಬ್ರಹ್ಮಬುದ್ಧಿಯನ್ನಿಟ್ಟುಕೊಳ್ಳುವದರಿಂದ ಪರಮಾತ್ಮನು ಭಕ್ತರಿಗೆ ಒಲಿಯುತ್ತಾನೆ. ಅದರ ಉಪಾಸನೆಯಿಂದಲೇ ಅಭೀಷ್ಟವಾದ ಪರಬ್ರಹ್ಮವನ್ನೋ ಅಪರಬ್ರಹ್ಮವನ್ನೋ ಸಾಧಕನು ಪಡೆದುಕೊಳ್ಳುತ್ತಾನೆ. ಹೀಗೆಂದು ಕಠೋಪನಿಷತ್ತಿನಲ್ಲಿಯೂ (೧-೨-೧೬) ಹೇಳಿರುತ್ತದೆ.

## ಓಂಕಾರದ ಏಕದೇಶೋಪಾಸನೆಯ ಫಲ

***ಸ ಯದ್ಯೇಕಮಾತ್ರಮಭಿಧ್ಯಾಯೀತ ಸ ತೇನೈವ ಸಂವೇದಿತ ಸ್ತೂರ್ಣಮೇವ ಜಗತ್ಯಾಮಭಿಸಂಪದ್ಯತೇ। ತಮೃಚೋ ಮನುಷ್ಯ ಲೋಕಮುಪನಯನ್ತೇ ಸ ತತ್ರ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂಪನ್ನೋ ಮಹಿಮಾನಮನುಭವತಿ ॥೩॥***

***ಅಥ ಯದಿ ದ್ವಿಮಾತ್ರೇಣ ಮನಸಿ ಸಂಪದ್ಯತೇ ಸೋಽನ್ತರಿಕ್ಷಂ ಯಜುರ್ಭಿರುನ್ನೀಯತೇ ಸೋಮಲೋಕಮ್। ಸ ಸೋಮಲೋಕೇ ವಿಭೂತಿಮನುಭೂಯ ಪುನರಾವರ್ತತೇ ॥೪॥***

೩-೪. ಅವನು ಒಂದು ಮಾತ್ರೆಯನ್ನು ಅಭಿಧ್ಯಾನಮಾಡಿದರೆ ಅವನು ಅದರಿಂದಲೇ ಅರಿತುಕೊಂಡವನಾಗಿ ಬೇಗನೆ ಜಗತ್ತಿನಲ್ಲಿ ಪಡೆದುಕೊಳ್ಳುತ್ತಾನೆ. ಅವನನ್ನು ಋಕ್ಕುಗಳು ಮನುಷ್ಯಲೋಕವನ್ನು ಸೇರಿಸುತ್ತವೆ. ಅವನು ಅಲ್ಲಿ ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ಕೂಡಿ ಮಹಿಮೆಯನ್ನು ಅನುಭವಿಸುತ್ತಾನೆ. ಹಾಗಲ್ಲದೆ ಎರಡುಮಾತ್ರೆಯಿರುವ ಮನಸ್ಸಿನಲ್ಲಿ ಸೇರಿಕೊಳ್ಳುತ್ತಾನಾದರೆ ಅವನು ಅಂತರಿಕ್ಷಕ್ಕೆ, ಸೋಮಲೋಕಕ್ಕೆ ಯಜುಸ್ಸುಗಳಿಂದ ಒಯ್ಯಲ್ಪಡುತ್ತಾನೆ. ಅವನು ಸೋಮಲೋಕದಲ್ಲಿ ವಿಭೂತಿಯನ್ನನುಭವಿಸಿ ಮತ್ತೆ ಹಿಂತಿರುಗುತ್ತಾನೆ.

ಓಂಕಾರದ ಪೂರ್ಣಮಹಿಮೆಯನ್ನರಿತುಕೊಂಡು ಮಾಡಿದ ಉಪಾಸನೆಯನ್ನು ಹೊಗಳುವದಕ್ಕಾಗಿ ಅದರ ಒಂದಂಶದ ಜ್ಞಾನದಿಂದ ಮಾಡಿದ ಉಪಾಸನೆಗೆ ಆಗುವ ಫಲವನ್ನು ಇಲ್ಲಿ ವರ್ಣಿಸಲಾಗಿದೆ.

ಓಂಕಾರವು ಮೂರು ಮಾತ್ರೆಗಳಿಂದಾಗಿರುತ್ತವೆ. ಅ,ಉ,ಮ್ - ಎಂಬ ಮೂರು ಮಾತ್ರೆಗಳ ಅರ್ಥವನ್ನು ವಿವೇಚಿಸಿ ತಿಳಿದುಕೊಂಡು ಉಪಾಸನೆಯನ್ನು ಮಾಡಿದವನಿಗೆ ಪೂರ್ಣಫಲವು ದೊರಕುವದು. ಆದರೆ ಅದರ ಒಂದು ಮಾತ್ರೆಯ ಅಕಾರದ ಅರ್ಥವನ್ನು ಲಕ್ಷ್ಯದಲ್ಲಿಟ್ಟು ಅದನ್ನೇ ಪೂರ್ಣವಾದ ಓಂಕಾರದ ಸ್ವರೂಪವೆಂದು ಭಾವಿಸಿ ಉಪಾಸನೆಯನ್ನು ಮಾಡಿದವನಿಗೂ ಉಪಾಸನೆಯು ನಿಷ್ಫಲವಾಗುವದಿಲ್ಲ. ಓಂಕಾರದ ಉಪಾಸನೆಯನ್ನೂ ಕೈಕೊಳ್ಳುವ ಮುಂಚೆ ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರಬೇಕೆಂದು ಆಗಲೆ ಹೇಳಿದ್ದಾಗಿದೆಯಷ್ಟೆ? ಕರ್ಮವನ್ನು ಮಾಡಿದ್ದರಿಂದ ಸಿಕ್ಕುವ ಸ್ವರ್ಗಾದಿಗಳನ್ನು ಪಡೆಯದೆ, ಓಂಕಾರದ ಪೂರ್ಣವಿಜ್ಞಾನವಿಲ್ಲದೆ ಉಪಾಸನೆಮಾಡಿದ್ದರಿಂದ ಅದರ ಫಲವೂ ಇಲ್ಲದೆ, ಉಭಯ ಭ್ರಷ್ಟನಾಗುವನೇನೊ!-ಎಂದು ಶಂಕಿಸಬಾರದು. ಅಕಾರಸ್ವರೂಪದ ಮಹಿಮೆಯನ್ನಿಷ್ಟೇ ಓಂಕಾರದ ಮಹಿಮೆ ಎಂದು ತಿಳಿದು ಉಪಾಸನೆಯನ್ನು ಮಾಡಿದವನಿಗೂ ಫಲವಾಗುವದು. ಓಂಕಾರದ ಮೊದಲನೆಯ ಮಾತ್ರೆಯು ಋಗ್ವೇದರೂಪವಾಗಿರುತ್ತದೆ. ಅದನ್ನು ಅಭಿಧ್ಯಾನಮಾಡಿದ್ದರಿಂದ, ಮನುಷ್ಯಲೋಕಪ್ರಾಪ್ತಿಯಾಗುವದು. ಬ್ರಹ್ಮಾದಿಸ್ಥಾವರಾಂತವಾದ ಲೋಕಗಳೊಳಗೆ ಮನುಷ್ಯಲೋಕಪ್ರಾಪ್ತಿಯೇ

ಫಲವಾಗುವದು; ಅದಕ್ಕಿಂತ ಕೀಳಾದ ಜನ್ಮವನ್ನು ಅವನು ಎಂದಿಗೂ ಪಡೆಯುವದಿಲ್ಲ. ಮನುಷ್ಯರೊಳಗೂ ಸಾಮಾನ್ಯಮನುಷ್ಯನಾಗಿ ಅವನು ಜನಿಸಲಾರನು. ಅವನು ಬ್ರಾಹ್ಮಣಶ್ರೇಷ್ಠನಾಗಿಯೇ ಹುಟ್ಟಿ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ - ಇವುಗಳಿಂದೊಡಗೂಡಿದವನಾಗಿ ಮಹಾವಿಭೂತಿಪುರುಷನೆನಿಸುವನು. ಅವನಿಗೆ ಶಾಸ್ತ್ರಗಳಲ್ಲಾಗಲಿ ಶಾಸ್ತ್ರೋಕ್ತಕರ್ಮಾನುಷ್ಠಾನದ ಫಲದಲ್ಲಿಯಾಗಲಿ ಎಂದಿಗೂ ಅಶ್ರದ್ಧೆಯಾಗುವದಿಲ್ಲವಾದ್ದರಿಂದ ಅವನು ಎಂದಿಗೂ ಸ್ವೇಚ್ಛಾಚಾರಿಯಾಗುವ ಸಂಭವವಿಲ್ಲ. ಇನ್ನು ಅವನಿಗೆ ದುರ್ಗತಿಯಾದೀತೆಂಬ ಶಂಕೆ ಎಲ್ಲಿ ಬಂತು? ಇದು ಒಂದು ಮಾತ್ರೆಯ ವಿಜ್ಞಾನದಿಂದೊಡಗೂಡಿ ಓಂಕಾರವನ್ನು ಉಪಾಸನೆಮಾಡಿದ್ದರ ಫಲವು.

ಇನ್ನು ಎರಡು ಮಾತ್ರೆಗಳ ವಿಜ್ಞಾನದಿಂದೊಡಗೂಡಿ ಉಪಾಸನೆಯನ್ನು ಮಾಡಿದವನೊ? ಎಂದರೆ ಅವನು ಯಜುರಾತ್ಮಕವಾದ ಓಂಕಾರದ ದ್ವಿತೀಯಮಾತ್ರೆಯ ಫಲವಾಗಿ ಅಂತರಿಕ್ಷದ ಆಧಾರವುಳ್ಳ ಚಂದ್ರಲೋಕಕ್ಕೆ ಹೋಗುವನು. ಏಕೆಂದರೆ ಯಾವನು ಬ್ರಹ್ಮವನ್ನು ಹೇಗೆಂದು ಉಪಾಸನೆಮಾಡುವನೋ ಹಾಗೆಯೇ ಅದಕ್ಕೆ ಅನುಗುಣವಾದ ಫಲವನ್ನು ಅನುಭವಿಸುತ್ತಾನೆ- ಎಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಎರಡನೆಯ ಮಾತ್ರೆಯಾದ ಉಕಾರದ ವಿಜ್ಞಾನದೊಡನೆ ಮಾಡಿದ ಓಂಕಾರದ ಉಪಾಸನೆಯ ಫಲವಾಗಿ ಮೊದಲನೆಯ ಸಾಧಕನು ಮನುಷ್ಯ ಲೋಕದಲ್ಲಿ ದ್ವಿಜಶ್ರೇಷ್ಠನಾಗಿ ವಿಭೂತಿಯನ್ನು ಅನುಭವಿಸುವಂತೆ ಈ ಸಾಧಕನೂ ಎರಡು ಮಾತ್ರೆಗಳ ಜ್ಞಾನದಿಂದೊಡಗೂಡಿ ಉಪಾಸನೆಮಾಡಿದ್ದರಿಂದ ಸೋಮಲೋಕದಲ್ಲಿ ಬಗೆಬಗೆಯ ವಿಭೂತಿಗಳನ್ನು ಅನುಭವಿಸುತ್ತಾನೆ. ಆದರೆ ಅಲ್ಲಿ ಆ ಭೋಗಗಳನ್ನೆಲ್ಲ ಅನುಭವಿಸಿದ ಬಳಿಕ ಮತ್ತೆ ಮನುಷ್ಯಲೋಕಕ್ಕೆ ಮರಳಿಬರುವನು. ಅಂತೂ ಹೀಗೆ ಓಂಕಾರದ ಏಕದೇಶೋಪಾಸನೆಗೂ ಫಲವುಂಟು.

## ಓಂಕಾರದ ಪೂರ್ಣೋಪಾಸನೆಯ ಫಲ

*ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ । ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತ ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಂ ಸ ಏತಸ್ಮಾಜ್ಜೀವಘನಾತ್ ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ ತದೇತೌ ಶ್ಲೋಕೌ ಭವತಃ॥೫॥*

೫. ಆದರೆ ಯಾವನು ಈ ಮೂರು ಮಾತ್ರೆಗಳಿಂದ ಕೂಡಿದ ಓಮ್ ಎಂಬ ಇದೇ ಅಕ್ಷರದಿಂದ ಪರಮಪುರುಷನನ್ನು ಧ್ಯಾನಿಸುವನೋ, ಅವನು ತೇಜಸ್ಸಾದ ಸೂರ್ಯನಲ್ಲಿ ಸೇರಿಕೊಳ್ಳುವನು. ಹೇಗೆ ಪಾದೋದರವು ಪರೆಯಿಂದ ಬಿಡಲ್ಪಡುತ್ತದೆಯೋ ಹಾಗೆಯೇ ಅವನು ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಅವನು ಸಾಮಗಳಿಂದ ಬ್ರಹ್ಮಲೋಕಕ್ಕೆ ಒಯ್ಯಲ್ಪಡುತ್ತಾನೆ. ಅವನು ಈ ಹೆಚ್ಚಿನ ಜೀವಘನನಿಗಿಂತಲೂ ಹೆಚ್ಚಿನವನಾದ ಪುರದಲ್ಲಿರುವ ಪುರುಷನನ್ನು ಕಂಡುಕೊಳ್ಳುತ್ತಾನೆ. ಅಲ್ಲಿ ಈ ಮುಂದಿನ ಎರಡು ಶ್ಲೋಕಗಳು ಇರುತ್ತವೆ.

ಈಗ ಮೂರೂ ಮಾತ್ರೆಗಳ ಅರ್ಥವನ್ನು ಅರಿತುಕೊಂಡು ಉಪಾಸನೆಮಾಡುವವನಿಗೆ ಆಗುವ ಉತ್ತಮಫಲವೇನೆಂಬುದನ್ನು ವಿಚಾರಿಸುವದಕ್ಕೆ ಸಮಯವಾಗಿದೆ. ಸೂರ್ಯಾಂತರ್ಗತನಾದ ಪುರುಷನೇ ಈ ಮೂರು ಮಾತ್ರೆಗಳ ಓಂಕಾರವು ಎಂದುಕೊಂಡು ನಿರಂತರವೂ ಓಂಕಾರಧ್ಯಾನವನ್ನು ಯಾವನು ಮಾಡುತ್ತಿರುವನೋ ಅವನು ಧ್ಯಾನದಿಂದ ಆ ಸೂರ್ಯಪುರುಷನನ್ನೇ ಸಾಕ್ಷಾತ್ಕರಿಸಿಕೊಳ್ಳುವನು, ಸತ್ತಬಳಿಕ ಚಂದ್ರಲೋಕಕ್ಕೆ ಹೋದವನು ಮರಳಿಬರುವಂತೆ ಇವನು ಮತ್ತೆ ಹಿಂದಕ್ಕೆ ಸಂಸಾರಕ್ಕೆ ಬರುವದಿಲ್ಲ.

ಸೂರ್ಯನ ಸಾಯುಜ್ಯವನ್ನು ಪಡೆದಮಾತ್ರದಿಂದ ಇವನು- ಹಾವು ಹೇಗೆ ಪರೆಯನ್ನು ಬಿಟ್ಟು ಹೊಸದಾಗುವದೋ ಹಾಗೆಯೇ- ಧರ್ಮಾಧರ್ಮರೂಪವಾದ ಪಾಪದಿಂದ ಬಿಡುಗಡೆಯನ್ನು ಹೊಂದುವನು. ಇವನನ್ನು ಮೂರು ಮಾತ್ರೆಯ ರೂಪದಲ್ಲಿರುವ ಸಾಮಗಳು ಬ್ರಹ್ಮಲೋಕಕ್ಕೆ, ಸತ್ಯಲೋಕಕ್ಕೆ, ಕೊಂಡೊಯ್ಯುವವು. ಅಲ್ಲಿರುವ ಹಿರಣ್ಯಗರ್ಭನು ಲಿಂಗಶರೀರರೂಪದಿಂದ ಸರ್ವಪ್ರಾಣಿಗಳಿಗೂ ಅಂತರಾತ್ಮನಾಗಿರುತ್ತಾನೆ. ಅವನಲ್ಲಿ ಎಲ್ಲಾ ಜೀವರುಗಳೂ ಒಂದಾಗಿರುವರು. ಆದ್ದರಿಂದ ಅವನನ್ನು ಶ್ರುತಿಯಲ್ಲಿ ಜೀವಘನನು ಎಂದು ಕರೆದಿದೆ. ಅಥವಾ ಬ್ರಹ್ಮಲೋಕದಲ್ಲಿ ಅಂಥ ಹಿರಣ್ಯಗರ್ಭನು ಇರುತ್ತಿರುವದರಿಂದ ಆ ಲೋಕವನ್ನೇ ಇಲ್ಲಿ ಜೀವಘನನೆಂದು ಕರೆದಿದೆ -ಎಂದೂ ಹೇಳಬಹುದು.

ಆ ಜೀವಘನನಿಗಿಂತ ಹೆಚ್ಚಿನವನಾದ ಪರಮಪುರುಷನನ್ನು -ಎಂದರೆ ಪರಮಾತ್ಮನನ್ನೇ ಅರಿತುಕೊಂಡು ಮುಕ್ತನಾಗುವನು ಎಂದರ್ಥ.

ಶ್ರುತಿಯಲ್ಲಿ ಮೊದಲು 'ಪರಬ್ರಹ್ಮವನ್ನಾಗಲಿ ಅಪರಬ್ರಹ್ಮವನ್ನಾಗಲಿ ಸಾಧಕನು ಯಾವದನ್ನು ಉಪಾಸನೆಮಾಡುತ್ತಾನೋ ಅದನ್ನೇ ಸೇರುತ್ತಾನೆ' ಎಂದಿದ್ದರೂ ಪ್ರಕೃತವಾಕ್ಯದಲ್ಲಿ ಮೂರು ಮಾತ್ರೆಗಳುಳ್ಳ ಓಂಕಾರವನ್ನು 'ಪರಪುರುಷ'ನೆಂದು ಉಪಾಸನೆಮಾಡುತ್ತಾನೋ ಎಂದಿರುವದರಿಂದಲೂ, ಹಾವು ಪರೆಯನ್ನು ಬಿಡುವಂತೆ 'ಧರ್ಮಾಧರ್ಮರೂಪವಾದ ಪಾಪವನ್ನು ತೊಲಗಿಸಿಕೊಳ್ಳುತ್ತಾನೆ' ಎಂದು ಹೇಳಿರುವದರಿಂದಲೂ 'ಪರನಾದ ಪುರುಷನನ್ನು ಕಂಡುಕೊಳ್ಳುತ್ತಾನೆ' ಎಂದು ಹೇಳಿರುವದರಿಂದಲೂ ಇಲ್ಲಿ ತಿಳಿಸಿರುವ ಬ್ರಹ್ಮವು ಪರಬ್ರಹ್ಮವೇ-ಎಂದು ನಿಶ್ಚಯಿಸಬೇಕು. ಉಪಾಸಕರುಕೂಡ ಬ್ರಹ್ಮಲೋಕಕ್ಕೆ ಹೋಗಿ ಆ ಲೋಕದಲ್ಲಿ ಕಲ್ಪಾಂತದವರೆಗೂ ಇದ್ದು, ಜ್ಞಾನವನ್ನು ಸಂಪಾದಿಸಿಕೊಂಡು ಕ್ರಮಮುಕ್ತಿಯನ್ನು ಹೊಂದುವರು ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ.

## ಉಪಸಂಹಾರ

***ತಿಸ್ರೋ ಮಾತ್ರಾ ಮೃತ್ಯುಮತ್ಯಃ ಪ್ರಯುಕ್ತಾ ಅನ್ಯೋನ್ಯಸಕ್ತಾ ಅನವಿಪ್ರಯುಕ್ತಾಃ। ಕ್ರಿಯಾಸು ಬಾಹ್ಯಾಭ್ಯನ್ತರಮಧ್ಯಮಾಸು ಸಮ್ಯಕ್ಪ್ರಯುಕ್ತಾ-ಸು ನ ಕಮ್ಪತೇ ಜ್ಞಃ ॥೬॥***

***ಋಗ್ಭಿರೇತಂ ಯಜುರ್ಭಿರನ್ತರಿಕ್ಷಂ ಸಾಮಭಿರ್ಯತ್ತತ್ಕವಯೋ ವೇದಯನ್ತೇ। ತಮೋಂಕಾರೇಣೈವಾಯತನೇನಾನ್ವೇತಿ ವಿದ್ವಾನ್ ಯತ್ತಚ್ಛಾನ್ತಮಜರಮಮೃತಮಭಯಂ ಪರಂ ಚೇತಿ॥೭॥***

೬-೭. ಅನ್ಯೋನ್ಯಸಕ್ತವಾಗಿರುವ ಮೂರು ಮಾತ್ರೆಗಳನ್ನು ಅನವಿಪ್ರಯುಕ್ತವಾಗಿ ಪ್ರಯೋಗಿಸಿದರೆ, ಮೃತ್ಯುವಂತವಾಗಿರುವವು. ಹೊರಗಿನ, ಒಳಗಿನ, ನಡುವಿನ, ಕ್ರಿಯೆಗಳನ್ನು ಚೆನ್ನಾಗಿ ಪ್ರಯೋಗಿಸಿದರೆ ಜ್ಞಾನಿಯು ಅಲುಗಾಡುವದಿಲ್ಲ.

ಈವರೆಗೆ ಹೇಳಿದ್ದನ್ನು ಎರಡು ಮಂತ್ರಗಳಲ್ಲಿ ಇಲ್ಲಿ ಸಂಗ್ರಹಿಸಿರುತ್ತದೆ. ಒಂದನೆಯ ಮಂತ್ರದ ಅಭಿಪ್ರಾಯವೇನೆಂದರೆ : ಓಂಕಾರದ ಒಂದೊಂದು ಮಾತ್ರೆಯನ್ನು ಒಂದೊಂದೇ ವಿಷಯದಲ್ಲಿ ಪ್ರಯೋಗಿಸಿ ಧ್ಯಾನವನ್ನು ಮಾಡಿದರೆ, ಎಂದರೆ ಓಂಕಾರದ ಪೂರ್ಣಾರ್ಥವನ್ನು ಗ್ರಹಿಸದೆ ಒಂದೊಂದು ಮಾತ್ರೆಯ ಅರ್ಥವನ್ನಿಷ್ಟೇ ಓಂಕಾರದ ಅರ್ಥವೆಂದು ಗ್ರಹಿಸಿ ಧ್ಯಾನವನ್ನುಮಾಡಿದರೆ ಅವು ಮೃತ್ಯುಗೋಚರವಾಗಿಯೇ ಇರುವವು; ಎಂದರೆ ತಮ್ಮತಮ್ಮ ಪರಿಚ್ಛಿನ್ನಫಲವನ್ನು

ಕೊಡುವದರಿಂದ ಅವುಗಳಿಗೆ ನಿತ್ಯಫಲವು ದೊರಕಲಾರದು. ಆದರೆ ಈ ಮಾತ್ರೆಗಳನ್ನೇ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಸ್ಥಾನದ ಆತ್ಮನನ್ನು ಧ್ಯಾನಮಾಡುವದರಲ್ಲಿ ವಿನಿಯೋಗಿಸಿದರೆ ಓಂಕಾರದ ಈ ಮಾತ್ರೆಗಳು ಒಂದೊಂದು ಅವಸ್ಥೆಯ ಪುರುಷಸ್ವರೂಪವನ್ನು ತಿಳಿಸುವವು. ಮತ್ತು ಪೂರ್ಣವಾದ ಓಂಕಾರವು ಸ್ಥಾನತ್ರಯಾತೀತನಾದ ಪುರುಷನೇ ಎಂದು ಉತ್ತಮಧ್ಯಾನವನ್ನು ಮಾಡಿದರೆ ಉಪಾಸಕನು ಓಂಕಾರಾತ್ಮಮಯನೇ ಆಗಿಬಿಡುವನು. ಆದ್ದರಿಂದ ಅವನು ಆಗ ಸರ್ವಾತ್ಮನಾಗಿರುವದರಿಂದ ಏಕದೇಶಧ್ಯಾನಿಗಳಂತೆ ಅವನಿಗೆ ಚಲನವಿರುವದಿಲ್ಲ. ಏಕೆಂದರೆ ಪರಿಚ್ಛಿನ್ನವಾದ ಲೋಕವನ್ನು ಪಡೆದಾತನಿಗೆ ಫಲದ ಭೋಗಕ್ಕೆ ಕಾಲನಿಯಮವಿರುತ್ತದೆ. ಆದರೆ ಅದ್ವಿತೀಯವಾಗಿರುವ ಓಂಕಾರಾತ್ಮನೇ ತಾನೆಂದು ಧ್ಯಾನಿಸುವವನಿಗೆ ಯಾವ ಪರಿಚ್ಛೇದವೂ ಇಲ್ಲದಿರುವದರಿಂದ ಅವನಿಗೆ ಸಿಕ್ಕುವ ಫಲವು ಎಂದಿಗೂ ಅನಿತ್ಯವಾಗಲಾರದು.

ಇನ್ನು ಎರಡನೆಯ ಮಂತ್ರದ ಅಭಿಪ್ರಾಯವೇನೆಂದರೆ : ಋಗ್ರೂಪವಾದ ಓಂಕಾರದ ಮಾತ್ರೆಯಾದ ಅಕಾರದ ಅರ್ಥವನ್ನು ತಿಳಿದು ಓಂಕಾರದ ಉಪಾಸನೆ ಮಾಡಿದವನನ್ನು ಋಕ್ಕುಗಳು ಮನುಷ್ಯಲೋಕಕ್ಕೆ ಒಯ್ದು ಅಲ್ಲಿ ಉತ್ತಮಫಲವನ್ನು ಕೊಡುವವು ; ಯಜೂರೂಪವಾದ ಉಕಾರದ ಅರ್ಥವನ್ನು ತಿಳಿದುಕೊಂಡ ಉಪಾಸಕನನ್ನು ಯಜುಸ್ಸುಗಳು ಅಂತರಿಕ್ಷದಲ್ಲಿರುವ ಚಂದ್ರಲೋಕಕ್ಕೆ ಒಯ್ದು ಅಲ್ಲಿ ಉತ್ತಮಭೋಗಗಳನ್ನು ಕೊಡುವವು ; ಸಾಮಸ್ವರೂಪವಾದ ಮಕಾರದ ಅರ್ಥವನ್ನು ತಿಳಿದುಕೊಂಡಿರುವ ಉಪಾಸಕನನ್ನು ಸಾಮಗಳು ಬಲ್ಲವರು ಬ್ರಹ್ಮಲೋಕವೆಂದು ಕರೆಯುವ ಲೋಕಕ್ಕೆ ಒಯ್ಯುವವು ; ಅವನಿಗೆ ಅಪರಬ್ರಹ್ಮದ ಸಾಯುಜ್ಯವಾಗುವದು. ಇದೇ ಓಂಕಾರದ, ಉಪಾಸನೆಯ ಬಲದಿಂದ ಸಾಧಕನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ವಿಶೇಷವು ಯಾವದೂ ಇಲ್ಲದ, ನಿಷ್ಪ್ರಪಂಚನಾದ, ಮುಪ್ಪುಮರಣಗಳಿಲ್ಲದ, ಅಭಯನಾದ, ಎಂದರೆ ಅವಿದ್ಯಾಕಲಂಕರಹಿತನಾಗಿರುವ ಸತ್ಯ , ಪುರುಷ- ಎಂಬ ಹೆಸರಿನ ಅಕ್ಷರವನ್ನು ಎಂದರೆ ಪರಬ್ರಹ್ಮವನ್ನು ಜ್ಞಾನದ ಮೂಲಕ ಸೇರಿಕೊಳ್ಳುತ್ತಾನೆ.

ಈ ಪ್ರಶ್ನೆಯಲ್ಲಿ ಮುಖ್ಯವಾಗಿ ಪರಬ್ರಹ್ಮದ ಉಪಾಸನೆಯನ್ನು ಹೇಳಿದೆಯೆ ? ಅಥವಾ ಅಪರಬ್ರಹ್ಮದ ಉಪಾಸನೆಯನ್ನು ಹೇಳಿದೆಯೆ ? -ಎಂಬ ಬಗ್ಗೆ ಸಂಶಯವಾಗುವ ಸಂಭವವಿದೆ ; ಏಕೆಂದರೆ ಪರ, ಅಪರ- ಇವೆರಡರಲ್ಲಿ ಒಂದನ್ನು ಸೇರುತ್ತಾನೆ- ಎಂದು ಫಲವಿರುವದರಿಂದ ಇಲ್ಲಿ ಯಾವದರಲ್ಲಿ ತಾತ್ಪರ್ಯವಿದೆ ? ಎಂಬುದನ್ನು ನಿರ್ಣಯಿಸುವದು ಅವಶ್ಯವಾಗುತ್ತದೆ. ಇದನ್ನು ಬ್ರಹ್ಮಸೂತ್ರಭಾಷ್ಯದಲ್ಲಿ

ಶ್ರೀಶಂಕರಭಗವತ್ಪಾದರವರು ವಿಚಾರಮಾಡಿ ' ಪರಾತ್ಪರನಾದ ಪುರುಷನನ್ನು ಕಾಣುತ್ತಾನೆ' ಎಂದು ಶ್ರುತಿಯಲ್ಲಿ ಹೇಳಿರುವದರಿಂದ ಈ ಉಪಾಸಕನು ಕೇವಲಧ್ಯಾನದಿಂದ ಆಗುವ ಸಾಕ್ಷಾತ್ಕಾರವನ್ನು ಮಾತ್ರ ಪಡೆಯುವದಿಲ್ಲ, ಜ್ಞಾನದಿಂದಲೂ ಪರಮಾತ್ಮನನ್ನು 'ಕಂಡುಕೊಳ್ಳುತ್ತಾನೆ ' ಎಂದು ಗೊತ್ತಾಗುತ್ತದೆ-ಎಂದು ನಿರ್ಧರಿಸಿರುತ್ತಾರೆ. ಇಲ್ಲಿ ಮೊದಲು ಉಪಾಸನೆಯಿಂದ ಬ್ರಹ್ಮಲೋಕಪ್ರಾಪ್ತಿಯಾಗುತ್ತದೆ, ಅಲ್ಲಿ ಜ್ಞಾನವುಂಟಾಗಿ ಮುಕ್ತಿಯೂ ಆಗುತ್ತದೆ. ಪ್ರತೀಕೋಪಾಸನೆಗೆ ಬ್ರಹ್ಮಲೋಕವು ಕೂಡ ದೊರಕಲಾರದೆಂಬುದು ಸಾಮಾನ್ಯನಿಯಮವಾದರೂ ಇಲ್ಲಿ ' ಪರಾತ್ಪರಪುರುಷನನ್ನು ಕಾಣುತ್ತಾನೆ ' ಎಂದು ಸ್ಪಷ್ಟವಾಗಿ ಹೇಳಿರುವದರಿಂದ ಬ್ರಹ್ಮಲೋಕಪ್ರಾಪ್ತಿಯೂ ದೊರಕುವದೆಂದೂ ಅಲ್ಲಿ ಜ್ಞಾನದಿಂದ ಮುಕ್ತಿಯೂ ಆಗುವದೆಂದೂ ನಿರ್ಣಯಿಸಬೇಕಾಗುತ್ತದೆ. ಇದನ್ನು ಸೂಚಿಸುವದಕ್ಕೆಂದೇ ಭಾಷ್ಯಕಾರರೂ ಶ್ರುತಿಯಲ್ಲಿರುವ 'ಶಾಂತನು' ಎಂಬ ವಿಶೇಷಣಕ್ಕೆ ಜಾಗ್ರತ್ಸ್ವಪ್ನಸುಷುಪ್ತಿ ಮುಂತಾದ ವಿಶೇಷಗಳಿಲ್ಲದ ನಿಷ್ಪ್ರಪಂಚನಾದ ಪರಮಾತ್ಮನನ್ನು ಎಂಬ ಅರ್ಥವನ್ನು ಹಿಡಿದಿರುತ್ತಾರೆ. ಅಜರ, ಅಮೃತ, ಅಭಯ- ಎಂಬ ವಿಶೇಷಣಗಳನ್ನು ಶ್ರುತಿಯಲ್ಲಿ ಕೊಟ್ಟಿರುವದೂ ಇದನ್ನೇ ಪುಷ್ಟಿಗೊಳಿಸುತ್ತದೆ.

# ೬. ಆರನೆಯ ಪ್ರಶ್ನೆ :

# ಷೋಡಶಕಲಪುರುಷನ ಜ್ಞಾನ

## ಸುಕೇಶಭಾರದ್ವಾಜನ ಪ್ರಶ್ನೆ

*ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ । ಭಗವನ್ ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈತಂ ಪ್ರಶ್ನಮಪೃಚ್ಛತ। ಷೋಡಶಕಲಂ ಭಾರದ್ವಾಜ ಪುರುಷಂ ವೇತ್ಥ । ತಮಹಂ ಕುಮಾರಮಬ್ರುವಂ ನಾಹಮಿಮಂ ವೇದ ಯದ್ಯಹಮಿಮಮವೇದಿಷಂ ಕಥಂ ತೇ ನಾವಕ್ಷ್ಯಮಿತಿ। ಸಮೂಲೋ ವಾ ಏಷ ಪರಿಶುಷ್ಯತಿ ಯೋಽನೃತಮಭಿವದತಿ ತಸ್ಮಾನ್ನಾರ್ಹಾಮ್ಯನೃತಂ ವಕ್ತುಮ್ ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ। ತಂ ತ್ವಾ ಪೃಚ್ಛಾಮಿ ಕ್ವಾಸೌ ಪುರುಷ ಇತಿ ॥೧॥*

೧. ಆಮೇಲೆ ಸುಕೇಶಭಾರದ್ವಾಜನು ಈತನನ್ನು ಪ್ರಶ್ನೆ ಮಾಡಿದನೇನೆಂದರೆ: ಭಗವಂತನೆ, ರಾಜಪುತ್ರನಾದ ಕೌಸಲ್ಯ ಹಿರಣ್ಯನಾಭನು ನನ್ನ ಬಳಿಗೆ ಬಂದು ಈ ಪ್ರಶ್ನೆಯನ್ನು ಮಾಡಿದನು : "ಭಾರದ್ವಾಜನೆ, ಷೋಡಶಕಲೆಗಳ ಪುರುಷನನ್ನು ಬಲ್ಲೆಯ? ನಾನು ಆ ಕುಮಾರನಿಗೆ ಹೇಳಿದೆನೇನೆಂದರೆ: ನನಗೆ ಈ ಪುರುಷನು ಗೊತ್ತಿಲ್ಲ. ನಾನು ಅರಿತಿದ್ದರೆ ಹೇಗೆತಾನೆ ನಿನಗೆ ಹೇಳದೆ ಇರುತ್ತಿದ್ದೆನು? ಯಾವನು ಸುಳ್ಳನ್ನು ಹೇಳುತ್ತಾನೋ ಅವನು ಬೇರುಸಹಿತವಾಗಿ ಒಣಗಿಹೋಗುತ್ತಾನೆ; ಆದ್ದರಿಂದ ಸುಳ್ಳನ್ನು ಹೇಳಲಾರೆ." ಅವನು ಸುಮ್ಮನೆ ರಥವನ್ನೇರಿ ಹೊರಟುಹೋದನು. ಆ ಪುರುಷನನ್ನು ಕುರಿತೇ ನಿನ್ನನ್ನು ಕೇಳುತ್ತಿದೇನೆ; ಆ ಪುರುಷನು ಎಲ್ಲಿರುವನು?

ಈ ವರೆಗೆ ಕೇಳಿರುವ ಪ್ರಶ್ನೆಗಳಿಗೂ ಈಗ ಸುಕೇಶಭಾರದ್ವಾಜನು ಕೇಳುತ್ತಿರುವ ಪ್ರಶ್ನೆಗೂ ಒಂದು ವೈಲಕ್ಷಣ್ಯವಿದೆ. ಮೊದಲನೆಯ ಮೂರು ಪ್ರಶ್ನೆಗಳು ಪ್ರಾಣನೆಂಬ ಹೆಸರಿನ ಅಪರಬ್ರಹ್ಮವನ್ನು ಕುರಿತ ಪ್ರಶ್ನೆ; ನಾಲ್ಕನೆಯ ಪ್ರಶ್ನೆಯಲ್ಲಿ ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳಲ್ಲಿ ಯಾವಯಾವ ಕರಣಗಳು ಸುಪ್ತವಾಗಿ ಯಾವವು ಎಚ್ಚರಿರುತ್ತವೆ? -ಎಂಬುದನ್ನು ಕುರಿತು ಕೇಳಲಾಗಿತ್ತು. ಐದನೆಯ ಪ್ರಶ್ನೆಯಲ್ಲಿ ಬ್ರಹ್ಮದ ಪ್ರಾಪ್ತಿಗೆ ಬೇಕಾದ ಉಪಾಸನೆಯನ್ನು ಕುರಿತು ಕೇಳಿತ್ತು. ಆದರೆ ಇಲ್ಲಿ ಪುರುಷನೆಂಬ ಹೆಸರಿನ ಆತ್ಮನು ಎಲ್ಲಿರುತ್ತಾನೆ? ಎಂದು ಕೇಳಿದೆ. ಇದು ಆತ್ಮನ ವಿಷಯದ ನೇರಾದ ಪ್ರಶ್ನೆ.

ಕೊನೆಯ ಮೂರು ಪ್ರಶ್ನೆಗಳಿಗೆ ಪರಸ್ಪರಸಂಬಂಧವೇನೆಂಬುದು ತಟ್ಟನೆ ಹೊಳೆಯುವ ಹಾಗಿಲ್ಲ. ಆದ್ದರಿಂದ ಇಲ್ಲಿ ಸ್ವಲ್ಪ ಒಳಹೊಕ್ಕು ವಿಚಾರವನ್ನು ಮಾಡತಕ್ಕ ಆವಶ್ಯಕತೆಯಿದೆ. ನಾಲ್ಕನೆಯ ಪ್ರಶ್ನೆಯಲ್ಲಿ ಜೀವನೊಡನೆ ಸಮಸ್ತ ಜಗತ್ತೂ ಅಕ್ಷರವೆಂಬ ಹೆಸರಿನ ಪುರುಷನಲ್ಲಿ ಸುಷುಪ್ತಾವಸ್ಥೆಯಲ್ಲಿ ಸೇರಿಹೋಗುತ್ತದೆ ಎಂದು ಹೇಳಿತ್ತು. ಯಾವದರಲ್ಲಿ ಯಾವದು ಲಯವಾಗುವದೋ ಅದು ಅದರ ಕಾರಣವಾಗಿರಬೇಕು; ಉದಾಹರಣೆಗೆ ಮಡಕೆಯು ತನ್ನ ಕಾರಣವಾದ ಮಣ್ಣಿನಲ್ಲಿ ಲಯವಾದೀತೇ ಹೊರತು ನೂಲಿನಲ್ಲಿ ಲಯವಾಗಲಾರದು. ಆದ್ದರಿಂದ ಜೀವಸಹಿತವಾದ ಜಗತ್ತೆಲ್ಲವೂ ಸುಷುಪ್ತಿಯಲ್ಲಿ ಲಯವಾಗಿ ಎಚ್ಚರುತ್ತಲೂ ಅದರಿಂದಲೇ ಹೊರತೋರಿಕೊಳ್ಳುತ್ತದೆ ಎಂದಾಯಿತು. ಜಗತ್ತಿಗೆ ಯಾವದು ಕಾರಣವೋ ಅದನ್ನು ಅರಿತುಕೊಳ್ಳುವದರಿಂದ ಪರಮಪುರುಷಾರ್ಥವಾಗುತ್ತದೆ ಎಂಬುದು ವೇದಾಂತ ಸಿದ್ಧಾಂತವು. ನಾಲ್ಕನೆಯ ಪ್ರಶ್ನೆಯ ಕೊನೆಯಲ್ಲಿಯೂ ವಿಜ್ಞಾನಾತ್ಮನೇ ಮೊದಲಾದ ಜಗತ್ತು ಯಾವ ಅಕ್ಷರದಲ್ಲಿ ಲಯವಾಗುತ್ತದೆಯೋ ಅದನ್ನು ಅರಿತುಕೊಂಡರೆ ಸರ್ವಜ್ಞನಾಗುತ್ತಾನೆ, ಸರ್ವನೂ ಆಗುತ್ತಾನೆ ಎಂದೂ ಹೇಳಿರುತ್ತದೆ. ಆದ್ದರಿಂದ ಪುರುಷನೆಂಬ ಆ ಅಕ್ಷರವನ್ನು ಎಲ್ಲಿ ಅರಿತುಕೊಳ್ಳಬೇಕು ? ಎಂಬ ಪ್ರಶ್ನೆ ಏಳುತ್ತದೆಯಲ್ಲವೆ? ಅದಕ್ಕಾಗಿ ಈ ಪ್ರಶ್ನೆಯನ್ನು ಪ್ರಾರಂಭಿಸಿರುತ್ತದೆ.

ಅಕ್ಷರವನ್ನು ಎಲ್ಲಿ ಹೇಗೆ ಅರಿತುಕೊಳ್ಳಬೇಕೆಂಬ ಪ್ರಶ್ನೆ ಏತಕ್ಕೆ? ಎಂದರೆ ಸುಷುಪ್ತಿಯಲ್ಲಿ ಎಲ್ಲವೂ ಆ ಅಕ್ಷರದಲ್ಲಿ ಅಡಗುವದಾದರೂ ಅದನ್ನು ಅರಿತುಕೊಳ್ಳುವದಕ್ಕೆ ಅಲ್ಲಿ ನಮಗೆ ಯಾವ ಸಾಮಗ್ರಿಯೂ ಇರುವದಿಲ್ಲ; ನಮಗೆ ಜ್ಞಾನದ್ವಾರ, ಶಾಸ್ತ್ರ, ಆಚಾರ್ಯ- ಎಂಬ ಸಾಮಗ್ರಿ ಬೇಕು, ಆಗ ತಿಳಿವಳಿಕೆಯಾಗುತ್ತದೆ. ಅಲ್ಲವೆ? ಆದ್ದರಿಂದ ಈ ಪುರುಷನನ್ನು ಎಲ್ಲಿ ಹೇಗೆ ತಿಳಿದುಕೊಳ್ಳಬೇಕು? ಎಂಬ ಪ್ರಶ್ನೆಯನ್ನು ಎಬ್ಬಿಸಿರುತ್ತದೆ.

ಇಲ್ಲಿ ಸುಕೇಶಭಾರದ್ವಾಜನು ಹಿಂದೆ ನಡೆದ ಒಂದು ವೃತ್ತಾಂತವನ್ನು ಹೇಳಿರುವದೇಕೆಂದರೆ, ಈ ಜ್ಞಾನವು ಸುಲಭವಾಗಿ ದೊರಕುವಂತಿಲ್ಲ. ಆದ್ದರಿಂದ ಅದನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸಿಕೊಳ್ಳಬೇಕು ಎಂದು ನಮಗೆ ಉಪದೇಶಿಸುವದಕ್ಕಾಗಿ ಶ್ರುತಿಯು ಸುಕೇಶನಮೂಲಕವಾಗಿ ಈ ಪ್ರಶ್ನೆಯನ್ನು ಕೇಳಿಸಿರುತ್ತದೆ.

ಹಿಂದೆ ಹೇಳಿರುವ ಅಕ್ಷರವನ್ನೇ ಇಲ್ಲಿ 'ಷೋಡಶಕಲೆಗಳ ಪುರುಷನು' ಎಂದು ಕರೆದಿದೆ; ಇದಕ್ಕೆ ಕಾರಣವು ಇಷ್ಟರಲ್ಲಿಯೇ ಸ್ಪಷ್ಟವಾಗುವದು. ಒಬ್ಬ ರಾಜಕುಮಾರನು ಸುಕೇಶನನ್ನು 'ಈ ಪುರುಷನನ್ನು ನೀನು ಅರಿತಿರುವೆಯ?' ಎಂದು ಕೇಳಿದ್ದಕ್ಕೆ 'ಇಲ್ಲ

ನನಗೆ ಆ ಪುರುಷನೆಂದರೆ ಯಾರೆಂಬುದು ತಿಳಿಯದು; ತಿಳಿದಿದ್ದರೆ ಹೇಳದೆ ಇರುತ್ತಿದ್ದನೆ?' ಎಂದು ಅವನು ಉತ್ತರವನ್ನು ಕೊಟ್ಟಿರುತ್ತಾನೆ. ಸುಳ್ಳು ಹೇಳುವದು ಮಹಾಪಾಪ, ತನಗೆ ತಿಳಿದಿರುವದನ್ನು ಯೋಗ್ಯನಾದ ಶಿಷ್ಯನಿಗೆ ಅವಶ್ಯವಾಗಿ ಹೇಳಬೇಕು- ಎಂಬುದು ಈ ಸಂಭಾಷಣೆಯಿಂದ ನಿಶ್ಚಿತವಾಗುತ್ತದೆ.

ಸುಕೇಶನಿಗೆ ಈ ಪ್ರಶ್ನೆಯು ಕಿವಿಗೆ ಬಿದ್ದಾಗಿನಿಂದ, 'ಎಲಾ, ನಾನು ಇದನ್ನು ಅರಿತುಕೊಂಡಿಲ್ಲವಲ್ಲ!' ಎಂಬ ಕೊರಗು ಹತ್ತಿಕೊಂಡಿರುತ್ತದೆ. ಆದ್ದರಿಂದ ಅವನು ಈಗ ಪಿಪ್ಪಲಾದನನ್ನು ಕೇಳಿರುತ್ತಾನೆ. ಗುರುಗಳಿಂದಲೇ ಈ ಅಕ್ಷರಜ್ಞಾನವು ದೊರಕಬೇಕಾಗಿರುತ್ತದೆ; ಗುರುವಾದವನು ಶಿಷ್ಯನಿಗೆ ಮರೆಮಾಚದೆ ಹೇಳಿಕೊಡಬೇಕು- ಎಂಬ ಆಚಾರವೂ ಈ ಕಥೆಯಿಂದ ವ್ಯಕ್ತವಾದಂತಾಯಿತು.

## ಪುರುಷನು ಶರೀರದೊಳಗೇ ಇರುತ್ತಾನೆ

*ತಸ್ಮೈ ಸ ಹೋವಾಚ । ಇಹೈವಾನ್ತಃ ಶರೀರೇ ಸೋಮ್ಯ ಸ ಪುರುಷೋ ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವನ್ತೀತಿ ॥೨॥*

೨. ಅವನಿಗೆ ಆ (ಪಿಪ್ಪಲಾದನು) ಹೇಳಿದನೇನೆಂದರೆ : ಎಲೈ ಸೋಮ್ಯನೆ, ಯಾವನಲ್ಲಿ ಈ ಹದಿನಾರು ಕಲೆಗಳು ಉಂಟಾಗುತ್ತಿರುವವೋ ಆ ಪುರುಷನು ಇಲ್ಲಿಯೇ ಈ ಶರೀರದೊಳಗೇ ಇರುತ್ತಾನೆ.

ಈಗ ಪಿಪ್ಪಲಾದನು ಉತ್ತರವನ್ನು ಹೇಳುತ್ತಿದಾನೆ. 'ಅಪ್ಪ, ಈ ಷೋಡಶ ಕಲೆಗಳ ಪುರುಷನು, ಯಾವನಿಂದ ಹದಿನಾರುಕಲೆಗಳೂ ಉತ್ಪನ್ನವಾಗುತ್ತಿರುವವೋ ಆ ಪುರುಷನು ಇಲ್ಲಿಯೇ ಈ ಶರೀರದಲ್ಲಿಯೇ ಇರುತ್ತಾನೆ.'

ಇಲ್ಲಿ ಒಂದು ಶಂಕೆ ಏಳುತ್ತದೆ. ಪುರುಷನೆಂದರೆ ಸಕಲಜಗತ್ತಿಗೂ ಕಾರಣನಾದ ಪರಮಾತ್ಮನಲ್ಲವೆ? ಅವನು ಈ ಜಗತ್ತಿನ ಒಂದು ಮೂಲೆಯಲ್ಲಿರುವ ಈ ಶರೀರದೊಳಗೆ ಹೇಗೆ ಇದ್ದಾನು? ಪಿಪ್ಪಲಾದನು ಹೀಗೆಂದು ಹೇಳಿದ ಮಾತ್ರದಿಂದ ಸುಕೇಶನು ಅದನ್ನು ಅರಿತುಕೊಳ್ಳುವದಾದರೂ ಹೇಗೆ?

ಈ ಶಂಕೆಗೆ ಪರಿಹಾರವೇನೆಂದರೆ ಅಕ್ಷರವೆಂಬ ಹೆಸರಿನ ಪರಮಾತ್ಮನು ಚೈತನ್ಯಸ್ವರೂಪಮಾತ್ರನಾಗಿರುತ್ತಾನೆ. ಆ ಚೈತನ್ಯವು ಎಂದರೆ ಅರಿವು ನಮ್ಮ ಶರೀರದೊಳಗೇ ಕಾಣಿಸಿಕೊಳ್ಳುತ್ತಿರುವದರಿಂದ ಪುರುಷನು ಶರೀರದೊಳಗೆ ಇರುತ್ತಾನೆ ಎಂದದ್ದು ಸರಿ. 'ಆತ್ಮನು ಶರೀರದೊಳಗೆ ಇರುತ್ತಾನೆ' ಎಂಬ ವಾಕ್ಯಕ್ಕೆ 'ಬುಟ್ಟಿಯೊಳಗೆ ಹಣ್ಣುಗಳಿವೆ' ಎಂಬಂತೆ ಶರೀರವು ಆಧಾರವೆಂದೂ ಆತ್ಮನು ಆಧೇಯನೆಂದೂ

ಅರ್ಥವನ್ನು ಮಾಡಿಕೊಳ್ಳಬಾರದು. ಆತ್ಮನನ್ನು ಅರಿತುಕೊಳ್ಳುದು ಎಲ್ಲಿ? -ಎಂಬುದಲ್ಲವೆ, ಪ್ರಶ್ನೆ? ಆದ್ದರಿಂದ ಅದಕ್ಕೆ ಅನುಗುಣವಾಗಿಯೇ ಪಿಪ್ಪಲಾದನು ಉತ್ತರವನ್ನು ಹೇಳಿರುತ್ತಾನೆ. ನಮ್ಮ ಹೊರಗೆ ಕಾಣುವ ಬೆಟ್ಟ, ನದಿ, ಸಮುದ್ರ, ಪಟ್ಟಣ, ಕಾಡು, ಮುಂತಾದವುಗಳನ್ನು ಕಾಣುವಂತೆ ಈ ಆತ್ಮನನ್ನು ಇಂದ್ರಿಯಗಳ ನೆರವಿನಿಂದ ಅರಿತುಕೊಳ್ಳುವದಕ್ಕೆ ಆಗುವದಿಲ್ಲ. ಆತ್ಮನು ಜ್ಞಾನಸ್ವರೂಪನಾಗಿರುತ್ತಾನೆ; ಜ್ಞಾನದಿಂದಲೇ ಅಲ್ಲವೆ, ಜ್ಞೇಯವಸ್ತುಗಳನ್ನು ಅರಿತುಕೊಳ್ಳುವದು? ಹೀಗಿರುವಲ್ಲಿ ಆತ್ಮನನ್ನು ಮಿಕ್ಕ ಜ್ಞೇಯವಸ್ತುಗಳಂತೆಯೇ ಅರಿತುಕೊಳ್ಳುವದು ಹೇಗೆತಾನೆ ಆದೀತು? ಜ್ಞಾನವು ಸ್ವಪ್ರಕಾಶವಾಗಿರುತ್ತದೆ; ಅದಕ್ಕೇ ಎಲ್ಲವೂ ವಿಷಯವಾಗಿರುತ್ತದೆ. ಹೀಗಿರುವದರಿಂದ **ಜ್ಞಾತೃರೂಪನಾದ ಈ ಆತ್ಮನನ್ನು ನಮ್ಮೊಳಗೇ ಅರಿತುಕೊಳ್ಳಬೇಕು.**

'ಆತ್ಮನು ಜ್ಞಾನಸ್ವರೂಪನು' ಎಂದರೇನೆಂಬುದನ್ನು ಇಲ್ಲಿ ವಿಮರ್ಶಿಸಿ ತಿಳಿದುಕೊಳ್ಳತಕ್ಕದ್ದಿದೆ. ಏಕೆಂದರೆ ಜ್ಞಾನವೆಂದರೆ ಅಂತಃಕರಣವೃತ್ತಿಯ ನೆರವಿನಿಂದ ನಮಗೆ ಆಗುವ ಅರಿವು ಎಂದೇ ನಮಗೆ ತಟ್ಟನೆ ಅರ್ಥವಾಗುತ್ತದೆ. 'ಜ್ಞಾನವು ಆಯಿತು', 'ಜ್ಞಾನವು ಹೋಯಿತು' ಎಂದು ನಾವು ಆಗಾಗ್ಗೆ ಹೇಳುವದು ಈ ವೃತ್ತಿಜ್ಞಾನವು. ಆದರೆ ಆತ್ಮನು 'ಜ್ಞಾನಸ್ವರೂಪನು' ಎಂದರೆ ಈ ಜ್ಞಾನವನ್ನಲ್ಲ, ನಾವು ಹೇಳುತ್ತಿರುವದು; **ವೃತ್ತಿಜ್ಞಾನಗಳು ಆಗುತ್ತಲೂ ಹೋಗುತ್ತಲೂ ಇರುವದನ್ನು ತನ್ನ ಅರಿವಿನಿಂದ ಬೆಳಗುತ್ತಿರುವ ಸ್ವರೂಪಚೈತನ್ಯವೇ ಆತ್ಮನು.** ಆ ಸ್ವರೂಪಚೈತನ್ಯವು ನಾವು ಎಲ್ಲವನ್ನೂ ಮರೆತಿರುವ ತೂಷ್ಣೀಮವಸ್ಥೆ, ಸುಷುಪ್ತಿ, ಸಮಾಧಿ, ಮೂರ್ಛೆ- ಮುಂತಾದವುಗಳಲ್ಲಿಯೂ ಇರುತ್ತದೆ. ಅಲ್ಲಿ ಯಾವ ವೃತ್ತಿಜ್ಞಾನವೂ ಇಲ್ಲ. ಇಲ್ಲದಿದ್ದರೂ ಈ ಚೈತನ್ಯದ ಬೆಳಕು ಇದ್ದೇ ಇರುತ್ತದೆ. ಅನುಭವರೂಪವಾದ ಅದರ ಬೆಳಕಿನ ಆಧಾರದಿಂದಲೇ ನಾವು 'ನಿದ್ರಿಸುತ್ತಿದ್ದೆನು', 'ಈವರೆಗೆ ಏನೂ ತೋರಲಿಲ್ಲ' ಎಂದು ಎಚ್ಚತ್ತಬಳಿಕ ನೆನಪಿಗೆ ತಂದುಕೊಂಡು ಹೇಳುತ್ತಿರುವದು.

## ಪುರುಷನಿಂದ ಕಲೆಗಳ ಸೃಷ್ಟಿ

*ಸ ಈಕ್ಷಾಂಚಕ್ರೇ । ಕಸ್ಮಿನ್ನಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ॥೩॥*

*ಸ ಪ್ರಾಣಮಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀನ್ದ್ರಿಯಂ ಮನಃ । ಅನ್ನಮನ್ನಾದ್ ವೀರ್ಯಂ ತಪೋ ಮನ್ತ್ರಾಃ ಕರ್ಮ ಲೋಕಾ ಲೋಕೇಷು ನಾಮ ಚ ॥೪॥*

೩-೪. ಅವನು ಹೀಗೆಂದು ಆಲೋಚನೆಮಾಡಿ ನೋಡಿದನು : 'ಯಾವದು ಉತ್ಕ್ರಾಂತವಾದರೆ ನಾನು ಉತ್ಕ್ರಾಂತನಾಗುವೆನು, ಯಾವದು ನಿಂತುಕೊಂಡರೆ ನಾನು ನಿಂತುಕೊಂಡಿರುವೆನು?' ಅವನು ಪ್ರಾಣವನ್ನು ಸೃಷ್ಟಿಸಿದನು; ಪ್ರಾಣದಿಂದ ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ಅಪ್ಪು, ಪೃಥಿವಿ, ಇಂದ್ರಿಯ, ಮನಸ್ಸು, ಅನ್ನ- ಇವುಗಳನ್ನೂ ಅನ್ನದಿಂದ ವೀರ್ಯ, ತಪಸ್ಸು, ಮಂತ್ರಗಳು, ಕರ್ಮ,ಲೋಕಗಳು ಇವನ್ನೂ ಲೋಕಗಳಲ್ಲಿ ನಾಮವನ್ನೂ ಸೃಷ್ಟಿಸಿದನು.

ಈಗ ಪಿಪ್ಪಲಾದನು ಆತ್ಮನಿಂದ ಹುಟ್ಟುವ ಹದಿನಾರು ಕಲೆಗಳನ್ನು ವಿವರಿಸುತ್ತಿದಾನೆ. ಈ ಷೋಡಶಕಲಪುರುಷನು ಮೊದಲು ಹೀಗೆಂದು ಆಲೋಚನೆ ಮಾಡಿದನು; "ಯಾವದು ಈ ಶರೀರದಿಂದ ಹೊರಟುಹೋದರೆ ನಾನೂ ಹೊರಟು ಹೋದಂತೆ ಆಗುವದೋ ಅಂಥ ಉಪಾಧಿಯನ್ನು ಸೃಷ್ಟಿ ಮಾಡುವೆನು." ಹೀಗೆಂದುಕೊಂಡು ಪ್ರಾಣವೇ ಮುಂತಾದ ಹದಿನಾರು ಕಲೆಗಳನ್ನು ಸೃಷ್ಟಿಸಿದನು.

ಇಲ್ಲಿ ಒಂದು ಶಂಕೆ : ಆತ್ಮನು ಹದಿನಾರು ಕಲೆಗಳನ್ನು ಸೃಷ್ಟಿಮಾಡುವ ಮುಂಚೆ ಶುದ್ಧಚೈತನ್ಯಸ್ವರೂಪನಾಗಿರುತ್ತಾನಲ್ಲವೆ? ಅಂಥ ಚೈತನ್ಯರೂಪನಾದ ಪುರುಷನು ತನಗೆ ಯಾವ ಸಹಾಯವೂ ಇಲ್ಲದೆ ಪ್ರಾಣಾದಿಗಳನ್ನು ಸೃಷ್ಟಿಮಾಡಿ ಶರೀರವನ್ನು ಮಾಡಿಕೊಂಡು ಅದರೊಳಗೆ ಹೊಕ್ಕನು- ಎಂದರೆ ಹೇಗೆ ಸರಿಯಾದೀತು? ಲೋಕದಲ್ಲಿ ಕುಂಬಾರನೇ ಮೊದಲಾದವರು ಮಣ್ಣು, ತಿಗುರಿ, ಕೋಲು- ಮುಂತಾದ ಸಹಾಯಗಳನ್ನು ಬಯಸಿ ಅವುಗಳ ಸಹಾಯದಿಂದ ಗಡಿಗೆ, ಮಡಕೆ, ಕುಡಿಕೆ- ಮುಂತಾದವುಗಳನ್ನು ಮಾಡುವದು ಕಂಡಿದೆ. ಇದಲ್ಲದೆ ಕುಂಬಾರ ಮೊದಲಾದವರಿಗೆ ಗಡಿಗೆ ಮುಂತಾದವುಗಳನ್ನು ಮಾಡುವದರಿಂದ ಆಗಬೇಕಾದ ಪ್ರಯೋಜನವಿದೆ; ನಿತ್ಯಶುದ್ಧನಾಗಿರುವ ಆತ್ಮನಿಗೆ ಯಾವ ಪ್ರಯೋಜನವಾಗಬೇಕಾದದ್ದಿರುತ್ತದೆ? ಯಾವದೂ ಇಲ್ಲ, ಇದೂ ಅಲ್ಲದೆ ಅಸಂಸಾರಿಯಾದ ಪರಮಾತ್ಮನು ಪ್ರಾದಿಗಳನ್ನು ಸೃಷ್ಟಿಮಾಡಿಕೊಂಡು ಶರೀರವನ್ನು ರಚಿಸಿಕೊಂಡು ಅದರೊಳಗೆ ಹೊಕ್ಕು ಸುಖದುಃಖರೂಪವಾದ ಸಂಸಾರವನ್ನು ಅನುಭವಿಸುವೆನೆಂದು ಸಂಕಲ್ಪಿಸಿದನೆಂದು ಹೇಳುವದು ಸರಿಯಾದೀತೆ? ಆಗದು. ಆದ್ದರಿಂದ ವೈಶೇಷಿಕರು ಹೇಳಿರುವಂತೆ ಪರಮಾಣುಗಳ ಸಹಾಯದಿಂದ ಈಶ್ವರನು ಜಗತ್ತನ್ನು ನಿರ್ಮಿಸುತ್ತಾನೆನ್ನುವದು ಸರಿ; ಅಥವಾ ಸಾಂಖ್ಯರು ಹೇಳಿರುವಂತೆ ಪ್ರಕೃತಿ ಅಥವಾ ಪ್ರಧಾನವು ತಾನೇ ಬಗೆಬಗೆಯ ಕಾರ್ಯಗಳ ರೂಪದಲ್ಲಿ ಪರಿಣಮಿಸಿ ಪುರುಷನಿಗೆ ಭೋಗ ಮೋಕ್ಷಗಳನ್ನುಂಟುಮಾಡುತ್ತಿದೆ ಎಂಬುದಾಗಿ ಹೇಳುವದು ಯುಕ್ತ. ಅಲ್ಲವೆ?

ಈ ಶಂಕೆಗೆ ಭಾಷ್ಯಕಾರರು ದೀರ್ಘವಾದ ಚರ್ಚೆಯನ್ನೇ ಬರೆದು ಪರಿಹಾರವನ್ನು ಹೇಳಿರುತ್ತಾರೆ. ಅದರ ಸಾರವನ್ನು ಮಾತ್ರ ಇಲ್ಲಿ ಸಂಗ್ರಹಿಸಿಕೊಡಲಾಗುವದು. ಅದ್ವಿತೀಯನಾದ ಚೈತನ್ಯಸ್ವರೂಪನಾದ ಆತ್ಮನಿಂದ ಚಿತ್ರವಿಚಿತ್ರವಾದ ಜಗತ್ತು ಹೇಗೆ ಸೃಷ್ಟವಾಯಿತು?-ಎಂಬುದು ಮೊಟ್ಟಮೊದಲನೆಯ ಶಂಕೆ. ಇದಕ್ಕೆ ಪರಿಹಾರವೇನೆಂದರೆ ಉಪನಿಷತ್ತುಗಳಲ್ಲಿ ಸೃಷ್ಟಿಯನ್ನು ಹೇಳಿರುವದು ನಿಜವಾಗಿಯೂ ಸೃಷ್ಟಿಯಾಗಿದೆ ಎಂದು ಹೇಳುವದಕ್ಕಲ್ಲ; ಸೃಷ್ಟಿಕ್ರಮವನ್ನು ಅರಿತುಕೊಂಡವರಿಗೆ ಇಂಥ ಫಲವಾಗುವದು-ಎಂದು ಎಲ್ಲಿಯೂ ಹೇಳಿಲ್ಲ. ಆದರೆ ಪರಮಾತ್ಮನ ಜ್ಞಾನದಿಂದ ಮೋಕ್ಷವಾಗುತ್ತದೆ-ಎಂದು ಅಲ್ಲಲ್ಲಿಯೇ ಜ್ಞಾನಕ್ಕೆ ಫಲವನ್ನು ಹೇಳಿರುತ್ತದೆ. ಪ್ರಕೃತದಲ್ಲಿ ಷೋಡಶಕಲನಾದ ಪುರುಷನನ್ನು ಎಲ್ಲಿ ಹೇಗೆ ಅರಿತುಕೊಳ್ಳಬೇಕು? -ಎಂದು ಭಾರದ್ವಾಜನು ಕೇಳಿರುತ್ತಾನಷ್ಟೆ? ಅದಕ್ಕೆ ಉತ್ತರವನ್ನು ಹೇಳುವ ಸಂದರ್ಭದಲ್ಲಿ ಈ ಹದಿನಾರು ಕಲೆಗಳ ಸೃಷ್ಟಿಯನ್ನು ಹೇಳಿರುತ್ತದೆ; ಆದ್ದರಿಂದ **ಪುರುಷನೆಂಬ ಹೆಸರಿನ ಪರಮಾತ್ಮನ ಜ್ಞಾನಕ್ಕೆ ಅಂಗವಾಗಿ ಈ ಕಲೆಗಳ ಸೃಷ್ಟಿಯನ್ನು ಹೇಳಿದೆ** ಎಂದು ತಿಳಿಯುವದೇ ಯುಕ್ತ. ಆದ್ದರಿಂದಲೇ ಶ್ರೀಗೌಡಪಾದರು "**ಸೃಷ್ಟಿರ್ಯಾಚೋದಿತಾನ್ಯಥಾ । ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಞ್ಚನ ॥**" (ಗೌ.ಕಾ.೩.೧೫) ಸೃಷ್ಟಿಯನ್ನು ಶ್ರುತಿಯಲ್ಲಿ ಬಗೆಬಗೆಯಾಗಿ ಹೇಳಿರುತ್ತವೆಯಷ್ಟೆ? ಅದು ಅದ್ವಿತೀಯಾತ್ಮನ ಜ್ಞಾನಕ್ಕೆ ಉಪಾಯವಾಗಿಯೇ ಹೇಳಿದ್ದು; ನಿಜವಾಗಿ ನೋಡಿದರೆ ಆತ್ಮನಲ್ಲಿ ಯಾವ ಭೇದಪ್ರಪಂಚವೂ ಇಲ್ಲ ಎಂದು ಹೇಳಿರುತ್ತದೆ.

ಈ ಉಪನಿಷತ್ತಿನಲ್ಲಿ ಆತ್ಮನು ನಿಜವಾಗಿ ನಿಷ್ಕಲನೇ ಆಗಿರುತ್ತಿದ್ದರೂ ಪ್ರಾಣವೇ ಮುಂತಾದ ಷೋಡಶಕಲೆಗಳೆಂಬ ಉಪಾಧಿಗಳಿಂದ ಸಕಲನಾಗಿರುವಂತೆ ಅವಿದ್ಯೆಯಿಂದ ತೋರುತ್ತಿದಾನೆ. ಆದ್ದರಿಂದಲೇ ಆತ್ಮನನ್ನು ಈ ಕಲಾತ್ಮಕವಾದ ಶರೀರದಲ್ಲಿ ಕಾಣಬೇಕೆಂದು ಹೇಳಿರುತ್ತದೆ- ಎಂಬುದನ್ನು ತಿಳಿಸಿಕೊಡುವದಕ್ಕಾಗಿ ಆತ್ಮನಲ್ಲಿ ಉಪಾಧಿಗಳ ಕಲೆಗಳ ಅಧ್ಯಾರೋಪವನ್ನು ಮಾಡಿ ಅವುಗಳನ್ನು ಅಲ್ಲಗಳೆಯುವದರ ಮೂಲಕ ಕೇವಲನಾದ ಅದ್ವಿತೀಯಪುರುಷನನ್ನು ತೋರಿಸಬೇಕೆಂದು ಪ್ರಕೃತದಲ್ಲಿ ಕಲೆಗಳ ಸೃಷ್ಟಿಯನ್ನು ಹೇಳಿರುತ್ತಾರೆ. ಶುದ್ಧವಾದ ಅದ್ವಿತೀಯವಾದ ನಿರ್ವಿಶೇಷವಾದ ಆತ್ಮತತ್ತ್ವದಲ್ಲಿ ಏತರ ಅಧ್ಯಾರೋಪವನ್ನೂ ಮಾಡದೆ ತಿಳಿಸಕೊಡತಕ್ಕ ವಿಷಯ, ತಿಳಿಸಿಕೊಡುವಿಕೆ- ಎಂಬ ವ್ಯವಹಾರವು ಆಗಲಾರದು. ಕೇಳುವ ಶಿಷ್ಯನು ಜ್ಞಾತೃ, ಪುರುಷನು ಜ್ಞೇಯ, ಅವನನ್ನು ತಿಳಿಸಿಕೊಡುವ ಪಿಪ್ಪಲಾದನು ಪ್ರತಿಪಾದಕನು, ತತ್ತ್ವವು ಪ್ರತಿಪಾದ್ಯ -ಎಂಬ ಭೇದವಿಲ್ಲದಿದ್ದರೆ ಶಾಸ್ತ್ರವು ತತ್ತ್ವವನ್ನು ತಿಳಿಸುವದಕ್ಕಾದೀತೆ? ಆಗಲಾರದು. ಆದ್ದರಿಂದ ಈ ವ್ಯವಹಾರದ ಸಿದ್ಧಿಗಾಗಿ ಪ್ರಾಣವೇ ಮುಂತಾದ

ಹದಿನಾರು ಕಲೆಗಳ ಸೃಷ್ಟಿಸ್ಥಿತಿಪ್ರಲಯಗಳನ್ನು ಅವಿದ್ಯಾದೃಷ್ಟಿಯಿಂದ ಅಧ್ಯಾರೋಪ ಮಾಡಿರುತ್ತದೆ. **ಆತ್ಮಚೈತನ್ಯಕ್ಕಿಂತ ಬೇರೆಯಾಗದೆಯೇ ಈ ಕಲೆಗಳು ಹುಟ್ಟಿ, ತೋರಿಕೊಂಡು ಪ್ರಲಯವಾಗುತ್ತಿರುವದರಿಂದ ಇವುಗಳು ಆತ್ಮಸ್ವರೂಪಕ್ಕಿಂತ ಬೇರೆಯಲ್ಲ**- ಎಂದು ತಿಳಿಸುವದೇ ಇಲ್ಲಿ ಉದ್ದೇಶ. ಆದ್ದರಿಂದ ಮೊದಲನೆಯ ಶಂಕೆಯು ಇಲ್ಲಿ ಏಳುವದಕ್ಕೆ ಕಾರಣವಿಲ್ಲ.

ಆದರೆ ನಿಜವಾಗಿ ಜಗತ್ತು ಪರಮಾಣುಗಳ ಕಾರ್ಯವಾಗಿ ಅಥವಾ ಪ್ರಕೃತಿಯ ಮಾರ್ಪಾಡುಗಳ ಕ್ರಮದಿಂದ ಹುಟ್ಟುತ್ತದೆ ಎನ್ನುವ ವಾದಿಗಳ ಮತದಲ್ಲಿ ನಿಜವಾಗಿಯೇ ಬಂಧವಾಗಿರುವದರಿಂದ ಮೋಕ್ಷವು ದೊರಕುವದು ಕಷ್ಟವೇ ಆಗಿರುತ್ತದೆ. 'ಅವನು ಆಲೋಚನೆ ಮಾಡಿದನು' ಎಂದು ಇಲ್ಲಿಶ್ರುತಿ ಹೇಳುವದರಿಂದ ಇದು ಸಾಂಖ್ಯರ ಮತಕ್ಕೆ ಹೊಂದುವದೆಂದು ಹೇಳುವದಂತೂ ದೂರದ ಮಾತಾಯಿತು. ಏಕೆಂದರೆ ಅಚೇತನವಾದ ಪ್ರಕೃತಿಯು ಆಲೋಚನೆ ಮಾಡಿ ಸೃಷ್ಟಿ ಮಾಡಿತು ಎಂಬುದು ಹಾಸ್ಯದ ಮಾತಾಗಿರುತ್ತದೆ.

ಇನ್ನು ಮುಂದೆ ಪ್ರಕೃತವಾದ ಉಪನಿಷದ್ವಾಕ್ಯದ ಅರ್ಥವನ್ನು ವಿಮರ್ಶಿಸೋಣ. ಆತ್ಮನಿಗೆ ಶರೀರದಲ್ಲಿ ನಿಂತಿರುವದು, ಕರ್ಮವನ್ನು ಮಾಡುವದು, ಕರ್ಮದ ಫಲವನ್ನು ಭೋಗಿಸುವದಕ್ಕೆಂದು ಶರೀರವನ್ನು ಬಿಟ್ಟುಹೋಗುವದು -ಮುಂತಾದ ವ್ಯವಹಾರವು ಸ್ವತಃ ಆಗುವದಿಲ್ಲ. ಏಕೆಂದರೆ ಅವನು ಕೂಟಸ್ಥ ಚೈತನ್ಯ ಸ್ವರೂಪನೂ ಸರ್ವವ್ಯಾಪಕನೂ ಆಗಿರುತ್ತಾನೆ. ಹೀಗಿರುವ ಅವನಿಗೆ ಸ್ವತಃ ಹೋಗುವದಾಗಲಿ ಬರುವದಾಗಲಿ ಹೊಂದುವಂತಿಲ್ಲ. ಆದ್ದರಿಂದ ಕ್ರಿಯಾಪ್ರಧಾನವಾಗಿರುವ 'ಪ್ರಾಣ'ವೆಂಬ ಉಪಾಧಿಯಿಂದ ಅದು ಇರುವವರೆಗೆ ಆತ್ಮನೂ 'ಶರೀರದಲ್ಲಿರುತ್ತಾನೆ' ಎಂಬ ವ್ಯವಹಾರವು ಆಗುತ್ತದೆ. ಪ್ರಾಣಕ್ಕೆ ಸಂಬಂಧಪಟ್ಟ ಕ್ರಿಯೆಗಳಿಂದ ಆತ್ಮನೂ 'ಇಂಥಿಂಥ ಕ್ರಿಯೆಗಳನ್ನು ಮಾಡುತ್ತಾನೆ' ಎಂಬ ವ್ಯವಹಾರವಾಗುತ್ತದೆ. ಇದನ್ನು ತಿಳಿಸುವದಕ್ಕೇ 'ಪ್ರಾಣನನ್ನು ಸೃಷ್ಟಿಮಾಡಿದನು' ಎಂದು ಇಲ್ಲಿ ಹೇಳಿರುವದು.

ಇನ್ನು ಆತ್ಮನಿಂದ ಉಂಟಾಗುವ ಈ ಹದಿನಾರು 'ಕಲೆಗಳು' ಯಾವುವು? ಎಂಬುದನ್ನು ನೋಡೋಣ ಮೊಟ್ಟಮೊದಲು 'ಪ್ರಾಣ'ನನ್ನು ಎಂದರೆ ಹಿರಣ್ಯಗರ್ಭನನ್ನು ಸೃಷ್ಟಿಮಾಡುತ್ತಾನೆ. ಹಿರಣ್ಯಗರ್ಭನಿಗೇ ಕ್ರಿಯಾಪ್ರಧಾನವಾದ ಉಪಾಧಿಯಿಂದ 'ಪ್ರಾಣ' ನು ಎಂಬ ಹೆಸರನ್ನು ಕೊಟ್ಟಿರುತ್ತದೆ. ಈ ಪ್ರಾಣನ ಮಹಿಮೆಯನ್ನು ಹಿಂದೆ ವಿಸ್ತಾರವಾಗಿ ವರ್ಣಿಸಿರುವದನ್ನು ವಾಚಕರು ಮನಸ್ಸಿಗೆ ತಂದುಕೊಳ್ಳಬೇಕು. ಎರಡನೆಯದಾಗಿ ಶ್ರದ್ಧೆಯನ್ನು- ಜೀವರುಗಳು ಒಳ್ಳೆಯ ಕರ್ಮದಲ್ಲಿ ತೊಡಗುವದಕ್ಕೆ ಇದನ್ನು ಮಾಡತಕ್ಕದ್ದು- ಎಂಬ ಶ್ರದ್ಧೆಯಿದ್ದರಲ್ಲವೆ, ಆ ಕ್ರಿಯೆಯಲ್ಲಿ ತೊಡಗುವದು?

ಅಂಥ ಶ್ರದ್ಧೆಯನ್ನು - ಸೃಷ್ಟಿಮಾಡಿದನು. ಆ ಬಳಿಕ ಶಬ್ದಗುಣವುಳ್ಳ **ಆಕಾಶ**; ಶಬ್ದಸ್ಪರ್ಶಗಳೆಂಬ ಎರಡು ಗುಣವುಳ್ಳ **ವಾಯು**; ಅನಂತರ ಶಬ್ದ ಸ್ಪರ್ಶರೂಪಗಳೆಂಬ ಮೂರು ಗುಣಗಳುಳ್ಳ **ತೇಜಸ್ಸು** ಅದಾದಮೇಲೆ ಶಬ್ದಸ್ಪರ್ಶರೂಪರಸಗಳೆಂಬ ನಾಲ್ಕು ಗುಣಗಳ **ಅಪ್ಪು**; ಅದೂ ಆದ ಬಳಿಕ ಶಬ್ದಸ್ಪರ್ಶರೂಪಗರಸಂಧಗಳೆಂಬ ಐದುಗುಣಗಳ **ಪೃಥಿವಿ**- ಹೀಗೆ ಪಂಚಭೂತಗಳನ್ನು ಸೃಷ್ಟಿಸಿದನು. ಇವಕ್ಕೆ **ಸೂಕ್ಷ್ಮಭೂತಗಳು** ಅಥವಾ ತನ್ಮಾತ್ರೆಗಳು ಎಂದು ಹೆಸರು. ಹಿಂದೆ ಸುಷುಪ್ತಿಯ ವಿಚಾರದಲ್ಲಿ ಪೃಥಿವಿ ಮತ್ತು ಪೃಥಿವೀ ಮಾತ್ರೆ ಎಂದು ಪಂಚಭೂತಗಳನ್ನೂ ಅವುಗಳ ತನ್ಮಾತ್ರೆಗಳನ್ನೂ ಬೇರೆಬೇರೆಯಾಗಿ ಹೇಳಿತ್ತಷ್ಟೆ? ಆ ತನ್ಮಾತ್ರೆಗಳೇ ಇವು. ಈ ಸೂಕ್ಷ್ಮಭೂತಗಳಿಂದ **ಇಂದ್ರಿಯವನ್ನು**, ಎಂದರೆ ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು- ಇವನ್ನು ಸೃಷ್ಟಿಸಿದನು. ಈ ಇಂದ್ರಿಯಕ್ಕೆ ಒಡೆಯನಾದದ್ದು ಮನಸ್ಸು. ಅದನ್ನು ಆ ಮೇಲೆ ಸೃಷ್ಟಿಸಿದನು. ಇಲ್ಲಿಯವರೆಗೆ ಜೀವರುಗಳಿಗೆ ವ್ಯವಹಾರಕ್ಕೆ ಬೇಕಾಗಿರುವ ಕಾರ್ಯ- ಎಂದರೆ ಶರೀರ, ಮತ್ತು **ಕರಣಗಳು**- ಎಂದರೆ ಇಂದ್ರಿಯಗಳು ಇವುಗಳ ಸೃಷ್ಟಿಯನ್ನು ತಿಳಿಸಿದಂತೆ ಆಯಿತು. ಈ ಶರೀರಾದಿಗಳುಳ್ಳ ಜೀವರು ಬದುಕಿರುವದಕ್ಕೆ ಬೇಕಾದ ಅನ್ನವನ್ನು-ಬತ್ತ, ಜವೆಗೋಧಿ ಮುಂತಾದದ್ದನ್ನು ಆ ಬಳಿಕ ಸೃಷ್ಟಿಸಿದನು. ಆ ಅನ್ನದಿಂದ ವೀರ್ಯವನ್ನು- ಕರ್ಮಗಳಲ್ಲಿ ತೊಡಗುವದಕ್ಕೆ ಬೇಕಾದ ಸಾಮರ್ಥ್ಯವನ್ನು- ಉಂಟುಮಾಡಿದನು. ಹೀಗೆ ವೀರ್ಯವಂತರಾದ ಜೀವರುಗಳು ಅಶುದ್ಧಿಯಿಂದ ಸಂಕರವಾದರೆ ಶುದ್ಧಿಯನ್ನು ಮಾಡುವದಕ್ಕೆ ಬೇಕಾದ **ತಪಸ್ಸು** ಆಮೇಲೆ ಸೃಷ್ಟವಾಯಿತು. ಯಾರು ತಪಸ್ಸಿನಿಂದ ಶುದ್ಧರಾಗಿರುವರೋ ಅಂಥ ಅಧಿಕಾರಿಗಳಿಗೆ **ಮಂತ್ರಗಳು**, ಅವುಗಳನ್ನು ಪ್ರಯೋಗಿಸಿ ಮಾಡಬೇಕಾದ **ಕರ್ಮ**, ಆ ಕರ್ಮಗಳಿಗೆ ಫಲವಾಗಿರುವ **ಲೋಕಗಳು**, ಆ ಲೋಕಗಳಲ್ಲಿ ಸೃಷ್ಟವಾಗುವ ಜೀವರುಗಳಿಗೆ **ನಾಮವೂ**- ಹೆಸರೂ - ಸೃಷ್ಟವಾದವು.

## ಸೃಷ್ಟಿವಾದದ ರಹಸ್ಯ

ಹೀಗೆ ಕಲೆಗಳು ಆತ್ಮನಿಂದ ಉಂಟಾದವು- ಎಂದಿರುವದನ್ನು ನಿಜವಾಗಿಯೂ ಇವು ಸೃಷ್ಟವೇ ಆಗಿರುತ್ತವೆ- ಎಂದು **ವೈಶೇಷಿಕರೂ ಸಾಂಖ್ಯರೂ** ತಿಳಿದುಕೊಂಡಿರುತ್ತಾರೆ. ವೈಶೇಷಿಕರು **ಅಸತ್ಕಾರ್ಯವಾದಿಗಳು**, ಎಂದರೆ ಕಾರ್ಯವು ಮೊದಲು ಇರುವದಿಲ್ಲ; ಹುಟ್ಟಿದ ಬಳಿಕ ಕಾರ್ಯದೊಡನೆ ಸಂಬದ್ಧವಾಗುತ್ತದೆ ಎನ್ನುವವರು. ಸಾಂಖ್ಯರು **ಸತ್ಕಾರ್ಯವಾದಿಗಳು**, ಎಂದರೆ ಮೊದಲು ಇದ್ದ ಕಾರಣವೇ ಕಾರ್ಯರೂಪದಿಂದ ಪರಿಣಾಮವಾಗುತ್ತದೆ ಎನ್ನುವವರು. ಈಶ್ವರನು ಪರಮಾಣುಗಳನ್ನು ಕ್ರಮವಾಗಿ ಜೋಡಿಸಿ ಕಾರ್ಯವನ್ನುಂಟುಮಾಡುತ್ತಾನೆಂದೂ ಹೀಗೆ ಹೊಸದಾಗಿ ಉಂಟಾಗುವದೇ

ಷೋಡಶಕಲೆಗಳ ಈ ಜಗತ್ತು ಎಂದೂ ವೈಶೇಷಿಕರು ನಂಬಿದ್ದರು. ಇನ್ನು ಈಶ್ವರನ ಗರಜೇ ಇಲ್ಲದೆ, ಪ್ರಧಾನವೊಂದೇ ಬಗೆಬಗೆಯಾಗಿ ರೂಪಗಳನ್ನು ಹೊಂದಿ ಈ ಜಗತ್ತಾಗಿದೆ ಎಂಬುದು ಸಾಂಖ್ಯರ ಮತ. ಸಾಂಖ್ಯರು ವೈಶೇಷಿಕರ ವಾದವನ್ನೂ ವೈಶೇಷಿಕರು ಸಾಂಖ್ಯರ ವಾದವನ್ನೂ ಖಂಡಿಸುತ್ತಿದ್ದರು. ಅವರ ಯುಕ್ತಿಗಳು ಪರಸ್ಪರವಾಗಿ ಖಂಡನೆಯಾಗಿರುವದರಿಂದ ಅವರು ಹೇಳುವ ಸತ್ಕಾರ್ಯವಾದ, ಅಸತ್ಕಾರ್ಯವಾದ ಈ ಎರಡೂ ಸರಿಯಲ್ಲ, ಪರಮಾತ್ಮನು ಇದ್ದಂತೆಯೇ ಇದ್ದರೂ ಅವನಲ್ಲಿ ಈ ಬಗೆಬಗೆಯ ಸೃಷ್ಟಿಯು ಆಗಿರುವಂತೆ ಅವಿದ್ಯೆಯಿಂದ ತೋರುತ್ತಿರುತ್ತದೆ; ಇವುಗಳ ತತ್ತ್ವವು ನಿಜವಾಗಿ ಪರಮಾತ್ಮನೇ - ಎಂಬುದನ್ನು ಶ್ರುತಿಯುಕ್ತಿಗಳ ಬಲದಿಂದ ಆಚಾರ್ಯರು ತಮ್ಮ ಭಾಷ್ಯದಲ್ಲಿ ತೋರಿಸಿಕೊಟ್ಟಿರುತ್ತಾರೆ. ಇದರಂತೆ ವಿಜ್ಞಾನವಾದಿಗಳೆಂಬ ಬೌದ್ಧರೂ ಶೂನ್ಯವಾದಿಗಳೆಂಬ ಬೌದ್ಧರೂ ಆತ್ಮನೇ ಇಲ್ಲವೆಂದು ವಾದಿಸುತ್ತಿದ್ದರು. ವಿಜ್ಞಾನವಾದಿಗಳು ಕ್ಷಣಕ್ಷಣಕ್ಕೂ ಜ್ಞಾನವು ಹುಟ್ಟಿಸಾಯುತ್ತಿರುವದೆನ್ನುವವರು. ಜ್ಞಾನವೆಂಬುದು ಪಂಚಭೂತಗಳು ಒಂದಕ್ಕೊಂದು ಕೂಡಿರುವದರಿಂದ ಹೊಸದಾಗಿ ಆಗುವ ಶರೀರದ ಧರ್ಮವೆಂದು ಚಾರ್ವಾಕರೆನ್ನುತ್ತಿದ್ದರು. ಈ ವಾದಿಗಳೆಲ್ಲ ಜ್ಞೇಯವಾದ ಕಲೆಗಳಲ್ಲಿ ಉಂಟಾಗುವ ಹುಟ್ಟುವದು, ಮಾರ್ಪಡುವದು, ಮರೆಯಾಗುವದು- ಈ ವಿಕಾರಗಳನ್ನೇ ಅವುಗಳನ್ನು ಬೆಳಗುವ ಆತ್ಮಚೈತನ್ಯಕ್ಕೆ ಸೇರಿದವುಗಳೆಂದು ಭ್ರಾಂತರಾಗಿರುತ್ತಾರೆ; ಸರ್ವಸಾಕ್ಷಿಯಾದ ಆತ್ಮಚೈತನ್ಯವು ಕಲೆಗಳು ಇರುವದನ್ನೂ ಹೋದದ್ದನ್ನೂ ನೋಡುತ್ತಾ ನಿರ್ವಿಕಾರವಾದ ಸಾಕ್ಷಿಯಾಗಿರುತ್ತದೆ. **ಕಾರ್ಯಕಾರಣವಾದದ ವಿಷಯಕ್ಕೆ ಹೇಗೆ ವಾದಿಗಳು ಒಬ್ಬರೊಡನೊಬ್ಬರು ಕಚ್ಚಾಡುತ್ತಾ ಎಲ್ಲಾ ವಾದಗಳಲ್ಲಿಯೂ ಇರುವ ದೋಷವನ್ನು ತೋರ್ಪಡಿಸುತ್ತಿರುವರೋ ಹಾಗೆಯೇ ಜ್ಞಾನವಾದಿಗಳೂ ಜ್ಞಾನಸ್ವರೂಪದವಿಷಯಕ್ಕೆ ಒಬ್ಬರೊಡನೊಬ್ಬರು ಜಗಳವಾಡುತ್ತಾ ಆ ವಾದಗಳೆಲ್ಲವೂ ದೋಷಗ್ರಸ್ತವೆಂದೇ ತೋರ್ಪಡಿಸುತ್ತಿದಾರೆ-** ಎಂದು ಆಚಾರ್ಯರು ಭಾಷ್ಯದಲ್ಲಿ ತೋರಿಸಿಕೊಟ್ಟಿರುತ್ತಾರೆ. ಇದರಿಂದ ಏನು ಸಿದ್ಧವಾಗುವದೆಂದರೆ:

**ವಿವದತ್ಸ್ವೇವ ನಿಕ್ಷಿಪ್ಯ ವಿರೋಧೋದ್ಭವಕಾರಣಮ್ ।**
**ತೈಃ ಸಂರಕ್ಷಿತಸದ್ಬುದ್ಧಿಃ ಸುಖಂ ನಿರ್ವಾತಿ ವೇದವಿತ್ ॥**

ವಾದಿಗಳು ಒಬ್ಬರೊಡನೊಬ್ಬರು ವಿವಾದಮಾಡುತ್ತಿರುವದರಿಂದ ಅವರ ಮತವು ವಿವಾದಕ್ಕೆ ಕಾರಣವಾಗಿದೆ ಎಂದು ಗೊತ್ತಾಗುವದು. ವಿವೇಕಿಯಾದವನು ಈ ವಿವಾದವನ್ನು ಆ ವಾದಿಗಳ ಪಾಲಿಗೇ ಕೈಬಿಟ್ಟು ವಾದಾಸ್ಪದವಿಷಯಗಳನ್ನೆಲ್ಲ ಸಾಕ್ಷಿಯಾಗಿ ನೋಡುತ್ತಿರುವ ಚೈತನ್ಯರೂಪನಾದ ಆತ್ಮನಲ್ಲಿಯೇ ಆನಂದದಿಂದ ನೆಲೆನಿಲ್ಲಬೇಕು.

## ವಿದ್ಯೆಯಿಂದ ಕಲೆಗಳ ಪ್ರವಿಲಯ

*ಸ ಯಥೇಮಾ ನದ್ಯಃ ಸ್ಯನ್ದಮಾನಾಃ ಸಮುದ್ರಾಯಣಾಃ ಸಮುದ್ರಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯೇತೇ ತಾಸಾಂ ನಾಮರೂಪೇ ಸಮುದ್ರ ಇತ್ಯೇವಂ ಪ್ರೋಚ್ಯತೇ ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯೇತೇ ಚಾಸಾಂ ನಾಮರೂಪೇ ಪುರುಷ ಇತ್ಯೇವಂ ಪ್ರೋಚ್ಯತೇ ಸ ಏಷೋಽಕಲೋಽಮೃತೋ ಭವತಿ ತದೇಷ ಶ್ಲೋಕಃ ॥೫॥*

*ಅರಾ ಇವ ರಥನಾಭೌ ಕಲಾ ಯಸ್ಮಿನ್ ಪ್ರತಿಷ್ಠಿತಾಃ । ತಂ ವೇದ್ಯಂ ಪುರುಷಂ ವೇದ ಯಥಾ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥೬॥*

೫.೬. ಅದು ಹೇಗೆಂದರೆ ಹೇಗೆ ಸಮುದ್ರಕ್ಕೆ ಹೋಗಬೇಕಿದ್ದು ಹರಿಯುತ್ತಿರುವ ಈ ನದಿಗಳು ಸಮುದ್ರದಲ್ಲಿ ಸೇರಿದ ಮೇಲೆ ಅಸ್ತವಾಗುವವೋ, ಅವುಗಳ ನಾಮರೂಪಗಳು ನಾಶವಾಗುವವೋ, ಹೇಗೆ ಎಲ್ಲವೂ ಸಮುದ್ರವೆಂದೇ ಎನಿಸಿಕೊಳ್ಳುವದೋ, ಇದರಂತೆಯೇ ನೋಡುವಾತನ ಈ ಹದಿನಾರುಕಲೆಗಳು ಪುರುಷನನ್ನು ಸೇರಿದ ಮೇಲೆ ಅಸ್ತವಾಗುತ್ತವೆ; ಇವುಗಳ ನಾಮರೂಪಗಳು ನಾಶವಾಗಿಬಿಡುತ್ತವೆ; ಎಲ್ಲವೂ ಪುರುಷನೆಂದೇ ಎನಿಸಿಕೊಳ್ಳುತ್ತದೆ. ಆ ಈತನು ಅಕಲನೂ, ಅಮೃತನೂ ಆಗುವನು. ಆ ಅರ್ಥದಲ್ಲಿ ಈ ಶ್ಲೋಕವಿದೆ:

'ಬಂಡಿಯಗಾಲಿಯ ಗುಂಬದಲ್ಲಿ ಹಾರೆಕೋಲುಗಳಂತೆ ಯಾವನಲ್ಲಿ ಕಲೆಗಳು ಸೇರಿಕೊಂಡಿರುವವೋ ವೇದ್ಯನಾದ ಆ ಪುರುಷನನ್ನು ಅರಿತುಕೊಳ್ಳಬೇಕು. ಹಾಗಾದರೆ ನಿಮ್ಮನ್ನು ಮೃತ್ಯು ವ್ಯಥೆಗೊಳಿಸದೆ ಇದ್ದೀತು!'

ಸರ್ವವನ್ನೂ ನೋಡುತ್ತಿರುವ ಸಾಕ್ಷಿಚೈತನ್ಯಸ್ವರೂಪನಾಗಿರುವ ಆತ್ಮನನ್ನು ಗುರುವಿನ ಉಕ್ತಿಯಿಂದ ಅರಿತುಕೊಂಡೆವೆಂದರೆ, ಈಗ ಕಾಣುತ್ತಿರುವ ಈ ಹದಿನಾರು ಕಲೆಗಳು ಇರುವದೇ ಇಲ್ಲ. ಈ ಕಲೆಗಳು ನಿಜವಾಗಿ ಹುಟ್ಟಿದ್ದರಲ್ಲವೆ. ಇವುಗಳು ನಾಶವಾಗಬೇಕು? ಕಣ್ಣಿನಲ್ಲಿ ದೋಷವಿರುವವನಿಗೆ ಬಯಲಿನಲ್ಲಿ ಸೊಳ್ಳೆ, ನೊಣ-ಮುಂತಾದವುಗಳು ತೋರುವಾಗಲೂ ಹೇಗೆ ಅವು ಬರಿಯ ಹುಸಿತೋರಿಕೆಗಳೇ ಆಗಿರುವವೋ, ಹಾಗೆಯೇ ಈ ಹದಿನಾರು ಕಲೆಗಳಿಂದಾಗಿರುವ ಶರೀರೇಂದ್ರಿಯಸಂಘಾತವುಳ್ಳವನು ನಾನು, ಹೊರಗೆ ಭೂತಭೌತಿಕವಸ್ತುಗಳನ್ನೂ ಸ್ಥಾವರಜಂಗಮಪ್ರಾಣಿಗಳನ್ನೂ ಶತ್ರುಮಿತ್ರಾದಿಭಾವದ ಬೇರೆಯ ಜನರನ್ನೂ

ಕಾಣುತ್ತಿದೇನೆ- ಎಂದು ಭಾವಿಸುವವರಿಗೆ ಕಾಣುತ್ತಿರುವ ಈ ಕಲಾರಾಶಿಯೆಲ್ಲವೂ ನಿಜವಾಗಿ ಈ ಚೈತನ್ಯರೂಪದಲ್ಲಿಯೇ ಕಲ್ಪಿತವಾಗಿರುತ್ತದೆ. ಶ್ರುತಿಯಲ್ಲಿ ನದೀ ದೃಷ್ಟಾಂತವನ್ನು ಕೊಟ್ಟಿರುವದರಲ್ಲಿ- ನದಿಗಳಿಗೆ ಉಪಾಧಿಯಾಗಿರುವ ದಡ, ಹರಿಯುವ ದಿಕ್ಕು ಮುಂತಾದವುಗಳೂ ಸಮುದ್ರಕ್ಕೆ ಉಪಾಧಿಯಾಗಿರುವ ದೊಡ್ಡ ಬಯಲೂ ಹೇಗೆ ನೀರಿನ ಸ್ವರೂಪಕ್ಕೆ ಸೇರಿರುವದಿಲ್ಲವೋ ಹಾಗೆ- ನದಿಗಳಿಗೆ ಕಾಣುವ ನಾಮರೂಪಗಳು ಬೇರೆಬೇರೆಯಾಗಿದ್ದರೂ ನಿಜವಾಗಿ ಅವಕ್ಕೆ ಆ ನಾಮರೂಪಗಳು ತೋರುತ್ತಿರುವಾಗಲೂ ಹೇಗೆ ಅಂಟಿಕೊಂಡಿರುವದಿಲ್ಲವೋ, ಅವು ಕಡಲನ್ನು ಸೇರಿದಮೇಲಂತೂ ಹೇಗೆ ಇರುವದೇ ಇಲ್ಲವೋ ಹಾಗೆಯೇ- ಆತ್ಮನಿಗೆ ಎಲ್ಲಾ ಅವಸ್ಥೆಯಲ್ಲಿಯೂ ಅಜ್ಞಾನವು ಇದ್ದಾಗಲೂ ಜ್ಞಾನದಿಂದ ಅದು ತೊಲಗಿದ ಮೇಲೂ ಆತ್ಮನಿಗೆ ಯಾವ ಕಲೆಗಳ ಸಂಬಂಧವೂ ಇರುವದಿಲ್ಲ. **ಕಲಾಕಲಾಪವು ಅವಿದ್ಯೆಯಿಂದ ತೋರುತ್ತಾ ಇರುವಾಗಲೂ ಅವುಗಳು ನಿಜವಾಗಿಲ್ಲವೆಂದು ತೋರಿದ ಬಳಿಕವೂ ಎಂದೆಂದಿಗೂ ಆತ್ಮನು ನಿಷ್ಕಲನೇ, ಅಮೃತಸ್ವರೂಪನೇ-** ಎಂದು ನಿಶ್ಚಯಿಸಬೇಕು.

ಈ ಅಭಿಪ್ರಾಯವನ್ನು ಸಂಗ್ರಹಿಸಿ ಹೇಳುವ ಮಂತ್ರದಲ್ಲಿ ಹಾರೆಕೋಲುಗಳು ಪ್ರತಿಯೊಂದೂ ಗುಂಬಕ್ಕೇ ಬಂದು ಸೇರುವಂತೆ, ಕಲೆಗಳೆಲ್ಲವೂ ಪುರುಷನಿಗೇ ಸೇರಿವೆ- ಎಂದಿಷ್ಟೇ ಹೋಲಿಕೆಯನ್ನು ಗ್ರಹಿಸಬೇಕು. ಹಾರೆಕೋಲುಗಳು ಬೇರೆಬೇರೆಯ ದಿಕ್ಕಿನಿಂದ ಬಂದು ಗುಂಬಕ್ಕೇ ಸೇರಿಕೊಳ್ಳುವಂತೆ ಬೇರೆಬೇರೆಯ ಉಪಾಧಿಯಿಂದ ಕೂಡಿದ್ದರೂ ಈ ಜೀವರು ನಿಜವಾಗಿ ಪುರುಷರೂಪದಿಂದ ನಿಷ್ಕಲರೇ ಆಗಿರುತ್ತಾರೆ ಎಂಬುದೇ ಮಂತ್ರಾರ್ಥದ ಸಾರ.

## ಉಪಸಂಹಾರ

***ತಾನ್ ಹೋವಾಚೈತಾವದೇವಾಹಮೇತತ್ಪರಂ ಬ್ರಹ್ಮ ವೇದ ನಾತಃ ಪರಮಸ್ತೀತಿ ॥೭॥***

***ತೇ ತಮರ್ಚಯನ್ತಸ್ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ ಪರಂ ಪಾರಂ ತಾರಯಸೀತಿ । ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ ॥೮॥***

೭-೮. ಆತನು ಅವರಿಗೆ ಹೇಳಿದ್ದೇನೆಂದರೆ : "ಇಷ್ಟೇ, ಈ ಪರಬ್ರಹ್ಮವನ್ನು ನಾನು ಅರಿತಿರುವೆನು; ಇದಕ್ಕಿಂತ ಹೆಚ್ಚಿನದು ಇಲ್ಲ." ಅವರು ಆತನನ್ನು ಅರ್ಚಿಸುತ್ತಾ (ಇಂತೆಂದರು): "ನೀನೇ ನಮ್ಮ ತಂದೆಯು, ನೀನು ನಮ್ಮ ಅವಿದ್ಯೆಯ ಆಚೆಯ ದಡವನ್ನು ಮುಟ್ಟಿಸಿರುತ್ತೀಯೆ." ಪರಮಋಷಿಗಳಿಗೆ ನಮಸ್ಕಾರ ! ಪರಮಋಷಿಗಳಿಗೆ ನಮಸ್ಕಾರ !

ಪಿಪ್ಪಲಾದನು ಪರಬ್ರಹ್ಮವನ್ನು ನೇರಾಗಿ ಕಂಡವನು. ಆದ್ದರಿಂದ ಶಿಷ್ಯರು ಕೇಳಿದ ಆರು ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟು, "ಅಪ್ಪ, ಇಷ್ಟೇ ತಿಳಿದುಕೊಳ್ಳಬೇಕಾದದ್ದು, ನಾನು ಅನುಭವದಿಂದ ಕಂಡುಕೊಂಡಿರುವದನ್ನು ನಿಮಗೆ ತಿಳಿಸಿರುತ್ತೇನೆ" ಎಂದನು. 'ಸರ್ವವನ್ನೂ ತಿಳಿದುಕೊಂಡಿದ್ದರಿಂದ ನೀವು ಕೃತಾರ್ಥರಾದಿರಿ' ಎಂಬುದು ಗುರುವಿನ ಅಭಿಪ್ರಾಯ.

ಶಿಷ್ಯರಾದ ಆರು ಜನರಿಗೆ ಸಂಶಯವು ಪೂರ್ಣವಾಗಿ ತೊಲಗಿತು. ಆತ್ಮ ಸ್ವರೂಪವೂ ಅವಿದ್ಯೆಯಿಂದಲೇ ಬಗೆಬಗೆಯಾಗಿ ತೋರುತ್ತಿರುತ್ತದೆ. ಅಜ್ಞರಿಗೆ ಅವಿದ್ಯೆ ಎಂಬುದು ದಾಟಲಸದಳವಾದ ಸಮುದ್ರದಂತೆ ಇರುತ್ತದೆ. ಆದರೆ ಸದ್ಗುರುವಾದವನು ಬೋಧಿಸಿದರೆ ಅಧಿಕಾರಿಗಳಾದ ಶಿಷ್ಯರ ಹೃದಯದಲ್ಲಿ ಯಾವ ಮೋಹವೂ ಉಳಿಯುವದಿಲ್ಲ- ಎಂಬುದನ್ನು ಆರುಜನ ಶಿಷ್ಯರೂ ಆಡಿದ ಮಾತಿನಿಂದ ಶೃತಿಯು ನಮಗೆ ತಿಳಿಸಿಕೊಟ್ಟಿರುತ್ತದೆ. ಬ್ರಹ್ಮವಿದ್ಯೆಯನ್ನು ತಿಳಿಸಿಕೊಟ್ಟ ಸದ್ಗುರುವು ನಮ್ಮದೇ ಆಗಿರುವ ಕೂಟಸ್ಥಚೈತನ್ಯಲಕ್ಷಣವಾದ ಬ್ರಹ್ಮಶರೀರವನ್ನು ಕೊಟ್ಟವನಾದ್ದರಿಂದ, ಮಾಂಸಮಯವಾದ ಶರೀರವನ್ನು ಹುಟ್ಟಿಸಿದ ತಂದೆಗಿಂತಲೂ ಆತನಲ್ಲಿ ಹೆಚ್ಚಿನ ಕೃತಜ್ಞತೆಯನ್ನಿಟ್ಟಿರಬೇಕು- ಎಂಬುದು ಈ ಶಿಷ್ಯರ ವಾಕ್ಯದಿಂದ ಸೂಚಿತವಾಗಿದೆ.

ಬ್ರಹ್ಮಜ್ಞಾನವನ್ನು ಕಂಡುಹಿಡಿದು ಜನರಿಗೆ ಬೋಧಿಸಿರುವವರು ಪರಮ ಋಷಿಗಳು. ಅವರಿಗೆ ಸಂತತವೂ ನಮ್ಮ ನಮಸ್ಕಾರವಿರಲಿ!

## ಉಪನಿಷತ್ತುಗಳ ಅಭಿಪ್ರಾಯವನ್ನು ಸರಳವಾದ ತಿಳಿಗನ್ನಡದಲ್ಲಿ ವಿವರಿಸುವ

# ಶ್ರೀಶ್ರೀಗಳವರ ಕೆಲವು ಗ್ರಂಥಗಳು

೧. **ಈಶಾವಾಸ್ಯೋಪನ್ಯಾಸಮಂಜರಿ** : ಶ್ರೀಶ್ರೀಗಳವರು "ಅಧ್ಯಾತ್ಮಪ್ರಕಾಶ"ದ ಹತ್ತನೆಯ ಸಂಪುಟದಲ್ಲಿ ೧೯೩೮ನೆಯ ಸೆಪ್ಟಂಬರ್ ನಿಂದ ೧೯೩೯ನೆಯ ಆಗಸ್ಟ್‌ವರೆಗೆ "ಉಪನಿಷದ್ವಾಕ್ಯ" ಎಂಬ ಹೆಸರಿನಿಂದ ಈಶಾವಾಸ್ಯೋಪನಿಷತ್ತಿನಮೇಲೆ ಬರೆದಿರುವ ಲೇಖನಗಳನ್ನೇ ಕೂಡಿಸಿ "ಮಂಜರಿ"ಯಾಗಿ ಹೊರತಂದಿದೆ. ಮೇಲಿನ ಉಪನಿಷತ್ತುಗಳಂತಯೇ ಉಪನಿಷತ್ತಿನ ಮೂಲಮಂತ್ರಗಳನ್ನು ಕನ್ನಡದಲ್ಲಿ ಮುದ್ರಿಸಿ ವಿವರಣೆಯನ್ನು ಭಾಷ್ಯಾನುಸಾರವಾಗಿ ಸರಳರೀತಿಯಿಂದ ಪ್ರತಿಪಾದಿಸಿದೆ. ಮೊದಲು ಈ ಗ್ರಂಥವನ್ನು ಓದಿ ಅನಂತರ ಉಪನಿಷತ್ತಿನ ಮೂಲ ಭಾಷ್ಯವನ್ನು ಓದಿದರೆ ಅನೇಕ ವಿಷಯಗಳು ಸುಲಭವಾಗಿ ತಿಳಿಯಲು ಅನುಕೂಲವಾಗುತ್ತದೆ.

೨. **ಕೇನೋಪನ್ಯಾಸಮಂಜರಿ** : ಕೇನೋಪನಿಷತ್ತಿನ ಭಾಷ್ಯಾಭಿಪ್ರಾಯವನ್ನು ಅನುಸರಿಸಿಯೇ ವಿವರವನ್ನು ಕೊಟ್ಟಿದೆ. ಕನ್ನಡದಲ್ಲಿ ಮೂಲಮಂತ್ರಗಳನ್ನು ಕೊಟ್ಟಿದೆ; ಉಪನಿಷತ್ತಿನ ಒಟ್ಟರ್ಥವನ್ನು ತಿಳಿಯುವದಕ್ಕೆ ತುಂಬ ಸಹಾಯಕವಾಗಿದೆ. ಭಾಷ್ಯದಲ್ಲಿ ಬರುವ ಚರ್ಚಾವಿಷಯಗಳನ್ನು ಇಲ್ಲಿ ಕೊಟ್ಟಿರುವದಿಲ್ಲವಾದ್ದರಿಂದ ಓದುಗರಿಗೆ ಕಷ್ಟವಾಗುವಂತಿಲ್ಲ, ಮೊದಲು ಈ ಗ್ರಂಥವನ್ನು ಓದಿ ಅನಂತರ ಉಪನಿಷತ್ತಿನ ಮೂಲ ಭಾಷ್ಯವನ್ನು ಓದಿದರೆ ಅನೇಕ ವಿಷಯಗಳು ಸುಲಭವಾಗಿ ತಿಳಿಯಲು ಅನುಕೂಲವಾಗುವದು. ವಾಚಕರು ಈಗ್ರಂಥವನ್ನು ಅವಶ್ಯವಾಗಿ ಓದಬೇಕು.

೩. **ಕಾಠಕೋಪನ್ಯಾಸಮಂಜರಿ** : ಶ್ರೀಶ್ರೀಗಳವರು ಕಾರ್ಯಾಲಯದಲ್ಲಿ ಪ್ರತಿಭಾನುವಾರವೂ ನಡೆಸಿದ ಉಪನ್ಯಾಸಗಳ ಆಧಾರದಿಂದ ಈ ಗ್ರಂಥವನ್ನು ಸಿದ್ಧಪಡಿಸಿದೆ. ಮೇಲಿನ ಉಪನಿಷತ್ತುಗಳಂತೆಯೇ ಕಠೋಪನಿಷತ್ತಿನ ಮೂಲಮಂತ್ರಗಳನ್ನು ಕೊಟ್ಟು ವಿವರಣೆಯನ್ನು ಭಾಷ್ಯಾನುಸಾರವಾಗಿ ಸರಳರೀತಿಯಿಂದ ಪ್ರತಿಪಾದಿಸಿದೆ. ಕಠೋಪನಿಷತ್ತು ಒಂದುರೀತಿಯಿಂದ

ದಶೋಪನಿಷತ್ತುಗಳಲ್ಲಿ ಬಹಳ ಮುಖ್ಯವಾದ ಸ್ಥಾನವನ್ನು ಪಡೆದಿದೆ. ಆಚಾರ್ಯರ ಭಾಷ್ಯವೂ ಅದಕ್ಕೆ ರತ್ನಪ್ರಾಯವಾಗಿದೆ. ಈ ಉಪನ್ಯಾಸಗಳು ಭಾಷ್ಯಸಾರವನ್ನೆಲ್ಲ ಒಳಗೊಂಡು ಆತ್ಮತತ್ತ್ವವನ್ನೂ ಅಧ್ಯಾತ್ಮಯೋಗದ ಮರ್ಮವನ್ನೂ ಜಿಜ್ಞಾಸುಗಳಿಗೆ ರಸವತ್ತಾದ ರೀತಿಯಲ್ಲಿ ಒದಗಿಸಿಕೊಡುತ್ತಿವೆ. ವಾಚಕರು ಈ ಗ್ರಂಥವನ್ನು ಓದಿಯೇ ಆನಂದಪಡಬೇಕು.

೪. **ಮುಂಡಕೋಪನ್ಯಾಸಮಂಜರಿ** : ಮೇಲಿನಂತೆಯೇ ಸೌಕರ್ಯಗಳೊಡನೆ ಮುಂಡಕೋಪನಿಷತ್ತಿನ ಸಾರವನ್ನು ವಿವರಿಸಿದೆ. ಗ್ರಂಥದ ಶೈಲಿಯು ಉಪನಿಷತ್ತಿನಭಾವಾರ್ಥವನ್ನು ತಿಳಿಯಲು ಹೆಚ್ಚಿನ ಸಹಾಯಕವಾಗುವಂತೆ ಇದೆ.

೫. **ಪ್ರಶ್ನೋಪನ್ಯಾಸಮಂಜರಿ** : ಮುಂಡಕೋಪನಿಷತ್ತಿನ ವಿವರವೆಂದು ಆಚಾರ್ಯರು ಪ್ರಶ್ನೋಪನಿಷತ್ತನ್ನು ವರ್ಣಿಸಿದ್ದಾರೆ. ಇದರಲ್ಲಿ ಗುರುಶಿಷ್ಯಸಂವಾದ ರೂಪದಲ್ಲಿ ಪ್ರಾಣನಸ್ವರೂಪ, ಅವನ ಉತ್ಪತ್ತ್ಯಾದಿಗಳು, ಓಂಕಾರೋಪಾಸನೆ, ಷೋಡಶಕಲಾಪುರುಷನ ಜ್ಞಾನ - ಇವುಗಳನ್ನು ಬಹಳ ಚೆನ್ನಾಗಿ ವರ್ಣಿಸಿದೆ. ವಿವರಣೆಯಲ್ಲಿ ಶ್ರೀಶ್ರೀಗಳವರು ಉಪನಿಷತ್ತಿನ ಗ್ರಂಥ ಗ್ರಂಥಿಗಳನ್ನೆಲ್ಲ ಬಿಡಿಸಿ ತಿಳಿಸಿರುತ್ತಾರೆ. ಈಗ ಇದು ನಿಮ್ಮ ಕೈಯಲ್ಲಿದೆ.

೬. **ಮಾಂಡೂಕ್ಯೋಪನ್ಯಾಸಮಂಜರಿ** : ಶ್ರೀಶ್ರೀಗಳವರು ೧೯೫೫ನೇ ವರ್ಷದಲ್ಲಿ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯಲ್ಲಿ ಸಂದೇಶರೂಪವಾಗಿ ಪ್ರಕಟಿಸಿದ ಹನ್ನೆರಡುಲೇಖನಗಳನ್ನೇ ಕೂಡಿಸಿ "ಮಂಜರಿ"ಯಾಗಿ ಹೊರತಂದಿದೆ. ಉಪನಿಷತ್ತಿನ ಮೂಲಮಂತ್ರಗಳನ್ನು ಕನ್ನಡದಲ್ಲಿ ಮುದ್ರಿಸಿ ವಿವರಣೆಯನ್ನು ಭಾಷ್ಯಾನುಸಾರವಾಗಿ ಸರಳರೀತಿಯಲ್ಲಿ ಪ್ರತಿಪಾದಿಸಿದೆ. ಮೊದಲು ಈ ಗ್ರಂಥವನ್ನು ಓದಿ ಉಪನಿಷತ್ತಿನ ಮೂಲ ಭಾಷ್ಯವನ್ನು ಓದಿದರೆ ಹೆಚ್ಚಿನ ಪ್ರಯೋಜನವಾಗುತ್ತದೆ.

೭. **ಗೌಡಪಾದಹೃದಯ** : ಮಾಂಡೂಕ್ಯೋಪನಿಷತ್ತು ಮತ್ತು ಮಂಜರಿಯನ್ನು ಓದಿದ ಮೇಲೂ ಸಂಶಯಗಳು ಪರಿಹಾರವಾಗದೆ ಇರುವವರು ಶ್ರೀಶ್ರೀಗಳವರು ಕನ್ನಡ ಭಾಷೆಯಲ್ಲೇ ಬರೆದಿರುವ **"ಗೌಡಪಾದಹೃದಯ"** ಎಂಬ ಗ್ರಂಥವನ್ನು ಓದಬೇಕು. ಇದು ಶ್ರೀಶ್ರೀಗಳವರ ಸ್ವತಂತ್ರ ಕೃತಿಯಾಗಿದ್ದು ಸುಮಾರು ೫೦೦ ಪುಟಗಳನ್ನು ಹೊಂದಿದೆ. ಗೌಡಪಾದರ ಮಾಂಡೂಕ್ಯಕಾರಿಕೆಗಳ ನಾಲ್ಕು ಪ್ರಕರಣಗಳ ಎಲ್ಲಾ ವಿಷಯಗಳನ್ನೂ ಒಳಗೊಂಡಿರುತ್ತದೆ ಮತ್ತು ಶಂಕರ ಭಗವತ್ಪಾದರ ಭಾಷ್ಯಾನುಸಾರವಾಗಿಯೂ ಇದೆ. ಇದೇ ಉಪನಿಷತ್ತಿನ ಮೇಲೆ ಸಂಸ್ಕೃತದಲ್ಲಿ ಬರೆದಿರುವ **"ಮಾಂಡೂಕ್ಯರಹಸ್ಯವಿವೃತಿಃ"** ಎಂಬ ಪುಸ್ತಕವೂ ಬಹಳ ಉತ್ಕೃಷ್ಟವಾದ ಗ್ರಂಥ. ಜಿಜ್ಞಾಸುಗಳಿಗೆ ಬಹಳ ಉಪಯುಕ್ತವಾಗಿದೆ.

೮. **ಜೀವಂತವೇದಾಂತ** : ವೇದಾಂತವು ಜೀವಂತದರ್ಶನವೆನ್ನುವದಕ್ಕೆ ಗುರುತುಗಳೇನು? ಎಂಬ ವಿಷಯವನ್ನು ಕುರಿತು ಶ್ರೀಶ್ರೀಗಳವರು ಮನೋಹರ ರೀತಿಯಿಂದ ವರ್ಣಿಸಿರುತ್ತಾರೆ. ಸಾಮಾನ್ಯವಿದ್ಯಾಭ್ಯಾಸವುಳ್ಳ ಸ್ತ್ರೀಪುರುಷರೆಲ್ಲರಿಗೂ ಪ್ರಯೋಜನವಾಗುವಂಥ ಸರಳವಾದ ಶೈಲಿಯಿಂದ ವಿಷಯವನ್ನು ಪ್ರತಿಪಾದಿಸಿದೆ. ೫೫ ಉಪನ್ಯಾಸಗಳಿವೆ.

೯. **ಶಾಂಕರವೇದಾಂತದ ಮೂಲತತ್ತ್ವಗಳು** : ದಾವಣಗೆರೆಯಲ್ಲಿ ೧೯೭೭ರಲ್ಲಿ ನಡೆದ ಶಂಕರಸಪ್ತಾಹಕಾಲದಲ್ಲಿ ಮತ್ತು ಅದಕ್ಕೆ ಪೂರ್ವಭಾವಿಯಾಗಿ ಶ್ರೀಶ್ರೀಗಳವರು ಅನುಗ್ರಹಿಸಿದ ಉಪನ್ಯಾಸಗಳಿವು. ಪರಸ್ಪರವಿರುದ್ಧವಾಗಿರುವ ವ್ಯಾಖ್ಯಾನಗಳ ಕಾರಣದಿಂದ ಜಿಜ್ಞಾಸುಗಳ ಚಿತ್ತವು ಕದಡಿಹೋಗಿ ಆಚಾರ್ಯರ ಸಿದ್ಧಾಂತದ ಮೂಲತತ್ತ್ವಗಳ ರಹಸ್ಯವನ್ನರಿಯದೆ ಪೇಚಾಡುತ್ತಿರುವ ಜಿಜ್ಞಾಸುಗಳಿಗೆ ಈ ಗ್ರಂಥವು ವರಪ್ರದಾನವಾಗಿ ಪರಿಣಮಿಸಿದೆ. ಒಟ್ಟು ೨೧ ಉಪನ್ಯಾಸಗಳಿವೆ.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

---

**ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ - ೫೭೩೨೧೧**

**ಹಾಸನ ಜಿಲ್ಲೆ**